೧೦. ಶಾಸನ ರಚನೆ

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ವಿಧೇಯಕದ ಮೇಲಿನ ಚರ್ಚೆ (ಮುಂದು)

+ ಶ್ರೀ ಜಗದೀಶ್ ಶೆಟ್ಟರ್(ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಸೆಕ್ಷನ್ ೨೮ರಲ್ಲಿ ಸಿಂಡಿಕೇಟ್‌ಗೆ ಐದು ಸದಸ್ಯರನ್ನು ಮಾನ್ಯ ರಾಜ್ಯಪಾಲರು ನಾಮಕರಣ ಮಾಡುವಾಗ ರಾಜ್ಯ ಸರ್ಕಾರದ ಶಿಫಾರಸ್ಸನ್ನು ಪರಿಗಣಿಸಬೇಕೆಂದು ಇದೆ. ಆದರೆ ಹಿಂದಿನ ಕಾಯಿದೆಯಲ್ಲಿ ರಾಜ್ಯ ಸರ್ಕಾರದ ಅಭಿಪ್ರಾಯವನ್ನು ಮಾತ್ರ ತೆಗೆದುಕೊಳ್ಳಬೇಕಾಗಿತ್ತು. ಈಗ ಇಲ್ಲಿ ಪರಿಗಣಿಸಬೇಕೆಂದು ಹೇಳಿರುವುದರಿಂದ ಪುನಃ ರಾಜ್ಯಸರ್ಕಾರದ ಡಾಮಿನೇಷನ್ ಆಗುತ್ತದೆ. ಹಾಗೆಯೇ ೫ ವರ್ಷಕ್ಕೊಮ್ಮೆ ರಾಜ್ಯಪಾಲರು ನೇಮಿಸುವ ವಿಶ್ವವಿದ್ಯಾನಿಲಯಗಳ ಪುನರ್‌ವಿಮರ್ಶಾ ಸಮಿತಿ, ಅಲ್ಲಿ ೩ ಜನ ಶಿಕ್ಷಣ ತಜ್ಞರ ಹೆಸರನ್ನು ಕೊಡುವಂಥಾದ್ದು, ಅದಕ್ಕೆ ಕೂಡ ಶಿಫಾರಸ್ಸು ರಾಜ್ಯಸರ್ಕಾರದ್ದು ಎಂದು ಮಾಡಿದ್ದೀರಿ. ೧೯೭೬ರ ಕಾಯಿದೆಯಲ್ಲಿ ಪ್ರತಿ ವಿಶ್ವವಿದ್ಯಾನಿಲಯದಲ್ಲಿ ಸೆನೆಟ್, ಅಕಾಡೆಮಿಕ್ ಕೌನ್ಸಿಲ್ ಮತ್ತು ಸಿಂಡಿಕೇಟ್ ಇತ್ತು. ಈಗ ಸೆನೆಟ್‌ನ್ನು ರದ್ದು ಮಾಡಿದ್ದೀರಿ. ಸೆನೆಟ್‌ನ ಎಲ್ಲಾ ಕೆಲಸವನ್ನು ಶೈಕ್ಷಣಿಕ ಮಂಡಳಿ ಮಾಡಬೇಕು ಮತ್ತು ಸೆನೆಟ್ ಹಾಗೂ ಅಕಾಡೆಮಿಕ್ ಕೌನ್ಸಿಲ್‌ಗೆ ಸಿಂಡಿಕೇಟ್‌ಗಳಿಗೆ ನಡೆಯುವಂಥ ಎಲ್ಲಾ ಚುನಾವಣೆಗಳನ್ನು ರದ್ದು ಮಾಡಿದ್ದೀರಿ. ಸಿಂಡಿಕೇಟ್‌ನ ೨೦ ಮಂದಿ ಸದಸ್ಯರಲ್ಲಿ ೧೮ ಜನ ನಾಮಕರಣ ಅಥವಾ ಪದನಿಮಿತ್ತ ಸದಸ್ಯರಿರುತ್ತಾರೆ. ಇಬ್ಬರು ಮಾತ್ರ ಅಕಾಡೆಮಿಕ್ ಕೌನ್ಸಿಲ್‌ನಂತೆ ಚುನಾಯಿತರಾಗಿರುತ್ತಾರೆಂದು ಇದರಲ್ಲಿ ಹೇಳಿದೆ. ಅಂದರೆ ೨೦ ಮಂದಿ ಸದಸ್ಯರಲ್ಲಿ ೧೮ ಮಂದಿ ನೇಮಕಾತಿ ಮೂಲಕ ನಾಮಕರಣ ಆದಂಥವರೇ ಆಗಿರುತ್ತಾರೆ. ಇಲ್ಲಿ ಚುನಾವಣೆ ಯಾವುದೂ ಇಲ್ಲ. ಹೀಗೆ ಬಹಳಷ್ಟು ವಿಷಯ ಇದರಲ್ಲಿ ಇದೆ. ಇದರ ಜೊತೆಗೆ ರಾಜ್ಯಪಾಲರ ಅಧಿಕಾರವನ್ನು ಕಸಿದುಕೊಳ್ಳುವುದು, ಸೆನೆಟ್‌ನ್ನು ರದ್ದು ಮಾಡುವುದು, ಅಟಾನಮಸ್ ವ್ಯವಸ್ಥೆಗೆ ಧಕ್ಕೆ ತರುವಂಥ ಬಿಲ್ ಏನಿದೆ ಅದನ್ನು ಕಾನೂನಾಗಿ ಪಾಸ್ ಮಾಡಿದರೆ ಯು.ಜಿ.ಸಿ. ಯಿಂದ ಏನು ಗ್ರ್ಯಾಂಟ್ ಕೊಡುತ್ತಿದ್ದೇವೆ ಅದನ್ನು ಮುಂದೆ ಕೊಡುವ ಬಗ್ಗೆ ಪರಿಶೀಲನೆ ಮಾಡಬೇಕಾಗುತ್ತದೆ ಎನ್ನುವಂಥ ಹೇಳಿಕೆಯನ್ನು ಧನಸಹಾಯ ಆಯೋಗದ ಅಧ್ಯಕ್ಷರಾದ ಶ್ರೀ ಹರಿಗೌತಮ್ ಅವರು ಕೊಟ್ಟಿರುವುದನ್ನು ನಾವು ನೋಡಿದ್ದೇವೆ. ಅವರ ಹೇಳಿಕೆಯನ್ನು ಈ ಸದನದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಅದೇನೆಂದರೆ, ''ವಿಧಾನ ಸಭೆಯಲ್ಲಿ ಮಂಡಿಸಿರತಕ್ಕಂಥ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯ ಮಸೂದೆಯನ್ನು ರಾಜ್ಯ ಸರ್ಕಾರ ವಾಪಸ್ಸು ಪಡೆಯದಿದ್ದಲ್ಲಿ ರಾಜ್ಯಕ್ಕೆ ಆರ್ಥಿಕ ನೆರವನ್ನು ಸ್ಥಗಿತಗೊಳಿಸುವ ಬಗ್ಗೆ ಪರಿಶೀಲಿಸುವುದಾಗಿ ವಿಶ್ವವಿದ್ಯಾಲಯ

ಧನಸಹಾಯ ಆಯೋಗದ ಅಧ್ಯಕ್ಷ ಹರಿಗೌತಮ್ ಹೇಳಿದ್ದಾರೆಂದು ಪತ್ರಿಕೆಯಲ್ಲಿ ಬಂದಿದೆ''. ಇವತ್ತಿನ ದಿವಸ ಸದರಿ ಬಿಲ್‌ಗೆ ಯು.ಜಿ.ಸಿ.ಯವರು ಮತ್ತು ನಮ್ಮ ರಾಜ್ಯದಲ್ಲಿರತಕ್ಕಂಥ ವಿದ್ಯಾರ್ಥಿ ಸಂಘಗಳು ವಿರೋಧ ಮಾಡಿದ್ದಾರೆ. ಹಾಗೆಯೇ ಶಿಕ್ಷಣ ತಜ್ಞರೂ ಸಹ ವಿರೋಧ ಮಾಡಿದ್ದಾರೆ. ಇದಕ್ಕೆ ಸಂಬಂಧಪಟ್ಟಂತೆ ಸಾರ್ವಜನಿಕರ ಅಭಿಪ್ರಾಯಗಳು ಪತ್ರಿಕೆಗಳ ಆರ್ಟಿಕಲ್‌ನಲ್ಲಿ ಬಂದಿರತಕ್ಕಂಥಾದ್ದು ಎಲ್ಲರಿಗೂ ಸಹ ಗೊತ್ತಿದೆ. ಒಟ್ಟಿನಲ್ಲಿ ಈ ವಿಧೇಯಕ ಸಾರ್ವಜನಿಕರ ಅಭಿಪ್ರಾಯಕ್ಕೆ ಮತ್ತು ಶಿಕ್ಷಣ ತಜ್ಞರ ಅಭಿಪ್ರಾಯಕ್ಕೆ ವ್ಯತಿರಿಕ್ತವಾಗಿ ತರತಕ್ಕಂಥ ಅವಶ್ಯಕತೆಯಾದರೂ ಏನು ಇತ್ತು? ಇಂಥ ಒಂದು ವ್ಯವಸ್ಥೆಗೆ ಸರ್ಕಾರ ಏಕೆ ಹೋಗುತ್ತಿದೆ ಎನ್ನತಕ್ಕಂಥಾದ್ದು ನನಗೆ ಅರ್ಥವಾಗುತ್ತಿಲ್ಲ. ಹಾಗೇಯೇ ಇವತ್ತಿನ ದಿವಸ ತಾವು ಇಷ್ಟೊಂದು ಹಠಮಾಡಿ ಮತ್ತು ಪ್ರತಿಷ್ಠೆಯ ವಿಷಯವನ್ನಾಗಿ ಮಾಡಿಕೊಂಡು ಸದರಿ ಬಿಲ್‌ನ್ನು ಪಾಸ್ ಮಾಡಿಕೊಳ್ಳುತ್ತಿದ್ದೀರಿ ಎನ್ನತಕ್ಕಂಥಾದ್ದು ನನಗೆ ಅರ್ಥವಾಗುತ್ತಿಲ್ಲ. ಅಟಾನಮಸ್ ವ್ಯವಸ್ಥೆಯನ್ನುಹಾಳುಗೆಡುವುದಕ್ಕೆ ಇದೊಂದು ಕರಾಳ ಶಾಸನವಾಗಿದೆ. ಹಾಗೆಯೇ ರಾಜ್ಯಪಾಲರ ಅಧಿಕಾರವನ್ನು ಕಸಿದುಕೊಳ್ಳುವಂಥಾದ್ದು ಮತ್ತು ಸೆನೆಟ್‌ನ್ನು ರದ್ದು ಮಾಡತಕ್ಕಂಥಾದ್ದು ಹಾಗೂ ಚುನಾವಣೆ ವ್ಯವಸ್ಥೆಯನ್ನು ರದ್ದು ಮಾಡತಕ್ಕಂಥ ಬಿಲ್ ಇದಾಗಿದೆ. ಈ ಸಂದರ್ಭದಲ್ಲಿ ಇನ್ನೊಂದು ವಿಷಯವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದೇನೆಂದರೆ ಇವತ್ತಿನ ದಿವಸ ರಾಜ್ಯಪಾಲರನ್ನು ಕೇವಲ ರಬ್ಬರ್ ಸ್ಟಾಂಪ್ ಆಗಿ ಮಾಡುತ್ತಿದ್ದೀರಿ. ಆದ್ದರಿಂದ ಈ ರೀತಿಯಾದಂಥ ಕರಾಳವಾದ ಮಸೂದೆಯನ್ನು ದಯವಿಟ್ಟು ಹಿಂತೆಗೆದುಕೊಳ್ಳಬೇಕು. ಆದರೆ ಕೆಲವೊಂದು ಮಾರ್ಪಾಡುಗಳನ್ನು ಮಾಡಿ. ಇವತ್ತಿನ ದಿವಸ ಮಾನ್ಯ ರಾಜ್ಯಪಾಲರಿಗೆ ಅಧಿಕಾರ ಕೊಡತಕ್ಕಂಥಾದ್ದು ಮತ್ತು ನಾಮಕರಣ ವ್ಯವಸ್ಥೆಯಲ್ಲಿ ಬದಲಾವಣೆ ಮಾಡಬೇಕಾಗುತ್ತದೆ. ಹಾಗೆಯೇ ಇನ್ನು ಹಲವಾರು ಮಾರ್ಪಾಡುಗಳ ಬಗ್ಗೆ ನಮ್ಮ ಅಭಿಪ್ರಾಯಕ್ಕೆ ಸರ್ಕಾರ ಸ್ಪಂದನೆ ಮಾಡಿದರೆ ಬಹುಶಃ ಈ ಬಿಲ್‌ಗೆ ನಾವೂ ಸಹ ಒಪ್ಪಿಗೆ ಕೊಡಬಹುದು. ಈ ಒಂದು ಕರಾಳ ಮಸೂದೆಗೆ ನಮ್ಮ ವಿರೋಧ ಇದೆ. ಆದ್ದರಿಂದ ದಯವಿಟ್ಟು ನಮ್ಮ ಅಭಿಪ್ರಾಯಗಳನ್ನು ಮತ್ತೊಮ್ಮೆ ಪರಿಶೀಲನೆ ಮಾಡಿ ಇದರಲ್ಲಿ ಹಲವಾರು ಮಾರ್ಪಾಡುಗಳನ್ನು ಮಾಡಿಕೊಂಡು ಮತ್ತೆ ತಂದಲ್ಲಿ ನಾವೆಲ್ಲಾ ಸ್ವಾಗತ ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳುತ್ತಾ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸಿ.ಭೈರೇಗೌಡ: ಮಾನ್ಯ ಅಧ್ಯಕ್ಷರೆ, ಮಾನ್ಯ ಆರೋಗ್ಯ ಸಚಿವರು ಒಂದು ಸಭೆಯನ್ನು ಕರೆದು ನಮ್ಮನ್ನು ಹಾಜರಾಗಬೇಕೆಂದು ತಿಳಿಸಿದ್ದಾರೆ. ಈ ಸಭೆ ಮುಗಿದ ನಂತರ ಪಾರ್ಟಿ ಸಭೆ ಇದೆ. ಆದ್ದರಿಂದ ಈ ವಿಷಯವನ್ನು ನಾಳೆ ಬೆಳಿಗ್ಗೆ ತೆಗೆದುಕೊಂಡರೆ ಒಳ್ಳೆಯದು.

(ಗೊಂದಲ)

ಅಧ್ಯಕ್ಷರು: ಯಾರಾದರೂ ಒಬ್ಬರು ಮಾತನಾಡಿ. ಈಗಾಗಲೇ ಈ ವಿಷಯದ ಬಗ್ಗೆ ಜಂಟಿ ಸದನ ಸಮಿತಿಯಲ್ಲಿ ಸಾಕಷ್ಟು ಚರ್ಚೆಯಾಗಿದೆ. ಹಾಗೆಯೇ ಸದರಿ ವಿಧೇಯಕವನ್ನು ಪರಿಶೀಲನೆ ಮಾಡಿದ್ದಾರೆ. ಆದ್ದರಿಂದ ಇಲ್ಲಿ ಹೆಚ್ಚಾಗಿ ಮಾತನಾಡತಕ್ಕಂಥ ಆವಶ್ಯಕತೆ ಇಲ್ಲವೆಂದು ಕಾಣುತ್ತದೆ.

+ ಶ್ರೀ ಬಿ.ಸೋಮಶೇಖರ್: ಮಾನ್ಯ ಅಧ್ಯಕ್ಷರೆ, ಸರ್ಕಾರದವರು ಏನೊಂದು ಹೊಸ ಮಸೂದೆ ತಂದಿದ್ದಾರೆ, ಇದರಲ್ಲಿ ಹಳೆಯ ಆಕ್ಟನ್ನು ಸಂಪೂರ್ಣವಾಗಿ ಬದಲಾವಣೆ ಮಾಡಿ ಈ ಹೊಸ ಆಕ್ಟನ್ನು ಸಭೆಯ ಮುಂದೆ ಮಂಡಿಸಿದ್ದಾರೆ. ಸಮಗ್ರವಾಗಿ ಚಿಂತನೆ ಮಾಡಿ ಹಳೆಯ ಆಕ್ಟನ್ನು ಬದಿಗೊತ್ತಿ ಹೊಸ ಆಕ್ಟನ್ನು ತಂದಿದ್ದಾರೆ. ಈ ಆಕ್ಟ್ ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಪಟ್ಟಿರುವುದರಿಂದ ಇದು ಬಹಳ ಮಹತ್ವವಾದ ವಿಚಾರವಾಗಿದೆ. ಹಾಗೆಯೇ ಈ ವಿಧೇಯಕದ ಬಗ್ಗೆ ಜಂಟಿ ಸದನದ ಸಮಿತಿಯಲ್ಲಿ ನಾವು ಏನೇನು ಚರ್ಚೆ ಮಾಡಿದ್ದೇವೆ, ಆ ಎಲ್ಲಾ ವಿಷಯಗಳು ಈ ಸದನಕ್ಕೆ ಗೊತ್ತಾಗಬೇಕಾಗುತ್ತದೆ. ಹಾಗೆಯೇ ವಿಷಯ ಸಾರ್ವಜನಿಕರಿಗೂ ಸಹ ಗೊತ್ತಾಗಬೇಕಾಗುತ್ತದೆ. ಏಕೆಂದರೆ ಈ ವಿಚಾರ ಪ್ರತಿಯೊಂದು ಮನೆಗೂ ಕೂಡ ತಲುಪಬೇಕಾಗುತ್ತದೆ. ಆದ್ದರಿಂದ ಈ ವಿಷಯವನ್ನು ನಾಳೆ ತೆಗೆದುಕೊಳ್ಳುವುದಾದರೆ ಪರವಾಗಿಲ್ಲ ಅಥವಾ ಇವತ್ತೇ ಮುಗಿಸಬೇಕೆಂದು ತಾವು ಹೇಳಿದರೂ ಕೂಡ ನಾನು ಮಾತನಾಡುವುದಕ್ಕೆ ಸಿದ್ಧನಿದ್ದೇನೆ.

ಅಧ್ಯಕ್ಷರು: ತಾವು ಈ ವಿಷಯದ ಬಗ್ಗೆ ಮಾತನಾಡಿ.

ಶ್ರೀ ಕೆ.ಶ್ರೀನಿವಾಸಗೌಡ: ಮಾನ್ಯ ಅಧ್ಯಕ್ಷರೆ, ನಮ್ಮ ಪಾರ್ಟಿ ಸಭೆ ಈಗ ಇದೆ. ಆದ್ದರಿಂದ ನಾಳೆ ಬೆಳಿಗ್ಗೆ ಅರ್ಧ ಗಂಟೆ ಮುಂಚಿತವಾಗಿ ಸದನವನ್ನು ಪ್ರಾರಂಭ ಮಾಡಬಹುದು.

ಅಧ್ಯಕ್ಷರು: ತಾವು ಮುಗಿಸಿದ ನಂತರ ತಮ್ಮ ಪಾರ್ಟಿಯವರೆಲ್ಲರೂ ಕೂಡ ಪಾರ್ಟಿ ಸಭೆಗೆ ಹೋಗಬಹುದು ಇದಕ್ಕೆ ನನ್ನದೇನೂ ಅಭ್ಯಂತರವಿಲ್ಲ.

ಶ್ರೀ ಕೆ.ಶ್ರೀನಿವಾಸಗೌಡ: ನೀವು ಹೋಗಿ ನಾವು ಮಾಡಿಕೊಳ್ಳುತ್ತೇವೆಂದು ಮಾನ್ಯ ಅಧ್ಯಕ್ಷರೇ ಹೇಳುತ್ತಿರುವಾಗ ನಾವೇಕೆ ಮಾತನಾಡಬೇಕು?

ಅಧ್ಯಕ್ಷರು: ಆ ರೀತಿ ಹೇಳಲಿಲ್ಲ. ನೀವು ಮಾತನಾಡಿದ ನಂತರ ಪಾರ್ಟಿ ಮೀಟಿಂಗ್‌ಗೆ ಹೋಗಬಹುದೆಂದು ಹೇಳಿದೆನಷ್ಟೆ.

ಶ್ರೀ ಕೆ.ಶ್ರೀನಿವಾಸಗೌಡ: ಮಾನ್ಯ ಮುಖ್ಯಮಂತ್ರಿಯವರು ಒಂದು ಗಂಟೆಗೆ ಊಟಕ್ಕೆ ಕರೆದಿದ್ದಾರೆ. ಆದ್ದರಿಂದ ಒಂದು ಗಂಟೆಯೊಳಗೆ ಮುಗಿಸಬೇಕೆಂದು ನೀವೇ ಹೇಳುತ್ತಿದ್ದೀರಿ. ನಮ್ಮ ಪಕ್ಷದ ಮೀಟಿಂಗ್ ಇದೆ, ನಾವು ಹೋಗಬೇಕೆಂದು ನಾವು ಕೇಳಿದರೆ, ನೀವು ಹೋಗಿ ನಾವು ಮಾಡಿಕೊಳ್ಳುತ್ತೇವೆ ಎಂದು ಹೇಳುತ್ತಿದ್ದೀರಿ.

ಅಧ್ಯಕ್ಷರು: ಅವರು ಮಾತನಾಡಿದ ಮೇಲೆ ಹೋಗಿ ಎಂದು ಹೇಳಿದ್ದೇನೆ.

ಶ್ರೀ ಕೆ.ಶ್ರೀನಿವಾಸಗೌಡ: ನಾಳೆ ಬೆಳಿಗ್ಗೆ ಅರ್ಧಗಂಟೆ ಮುಂಚಿತವಾಗಿ ಸೇರಿ ಮಾನ್ಯ ಸೋಮಶೇಖರ್‌ರವರು ಮಾತನಾಡಿದ ನಂತರ ಬಿಲ್‌ನ್ನು ಪಾಸ್ ಮಾಡಿಕೊಡೋಣ. ಇದರ ಬಗ್ಗೆ ತಾವೇಕೆ ಯೋಚನೆ ಮಾಡುತ್ತೀರಿ?

ಶ್ರೀ ಡಿ.ಕೆ.ಶಿವಕುಮಾರ್: ಹಿಂದೆ ನಾವು ರಾತ್ರಿ ೯.೩೦ ಗಂಟೆಯವರೆಗೆ ಇಲ್ಲಿ ಕುಳಿತಿದ್ದು, ಒಂದು ಬಿಲ್‌ನ್ನು ಪಾಸ್ ಮಾಡಿಕೊಟ್ಟಿದ್ದೇವೆ.

ಶ್ರೀ ಕೆ.ಶ್ರೀನಿವಾಸಗೌಡ: ಪಕ್ಷದ ಸಭೆ ಇರುವಾಗ ಪಕ್ಷದ ನಾಯಕರೆಲ್ಲರೂ ಹೋಗಬೇಕಲ್ಲವೇ?

ಡಾ|| ಜಿ.ಪರಮೇಶ್ವರ್: ಮಾನ್ಯ ಅಧ್ಯಕ್ಷರೆ, ಈ ಕೋಲಾರದವರ ವಿಚಾರವೇ ನನಗೆ ಏಕೋ ಅರ್ಥವಾಗುತ್ತಿಲ್ಲ.

ಶ್ರೀ ಬಿ.ಸೋಮಶೇಖರ್: ಮಾನ್ಯ ಅಧ್ಯಕ್ಷರೆ, ಸದರಿ ಮಸೂದೆಯನ್ನು ಪಾಸ್ ಮಾಡಿ ಕೊಡುವುದಕ್ಕೆ ನಾವೇನು ಅಡ್ಡಿ ಬರುವುದಿಲ್ಲ. ಆದರೆ ಕೆಲವು ಸಲಹೆಗಳನ್ನು ಮಾತ್ರ ಹೇಳುತ್ತೇವೆ. ಈಗ ಪತ್ರಿಕೆಯವರಿಗೆ ಮತ್ತು ಇಲ್ಲಿರತಕ್ಕಂಥ ಎಲ್ಲರಿಗೂ ಸಹ ಮೂಡ್ ಇಲ್ಲ. ಇಂಥ ಸಂದರ್ಭದಲ್ಲಿ ನಾನು ಮಾತನಾಡಿದರೆ ಅಷ್ಟು ಚೆನ್ನಾಗಿ ಕಾಣುವುದಿಲ್ಲ. ಆದ್ದರಿಂದ ಮಾನ್ಯ ಶ್ರೀನಿವಾಸಗೌಡರು ಹೇಳಿದ ಹಾಗೆ ನಾಳೆ ಬೆಳಿಗ್ಗೆ ಅರ್ಧ ಗಂಟೆ ಮುಂಚಿತವಾಗಿ ಸದನವನ್ನು ಪ್ರಾರಂಭ ಮಾಡೋಣ. ಆಗ ನಾವೂ ಕೂಡ ಇದರ ಬಗ್ಗೆ ಫ್ರೆಷ್ ಆಗಿ ಮಾತನಾಡಬಹುದು. ಇದನ್ನು ನಾವು ಪಾಸ್ ಮಾಡಿಕೊಡುತ್ತೇವೆ.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ವಿರೋಧಪಕ್ಷದ ನಾಯಕರಾಗಿದ್ದಂಥ ಸಂದರ್ಭದಲ್ಲಿ ನನ್ನ ಇಲಾಖೆಗೆ ಸಂಬಂಧಪಟ್ಟಂಥ ಬಿಲ್ಲನ್ನು ತಂದಾಗ, ಇದನ್ನು ನಾಳೆ ಮಾಡೋಣವೆಂದು ಮಾನ್ಯ ಮುಖ್ಯಮಂತ್ರಿಯಾಗಿದ್ದಂಥ ಜೆ.ಹೆಚ್.ಪಟೇಲ್‌ರವರಿಗೆ ಇವರು ಹೇಳಿದಾಗ ಸಭೆಯನ್ನು ಅಲ್ಲಿಗೆ ಮುಗಿಸಿ ನನ್ನ ಬಿಲ್ಲನ್ನು ಮುಂದಕ್ಕೆ ಹಾಕಿದರು, ಬೇಕಾದರೆ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರನ್ನೇ ಕೇಳಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಎಸ್.ಎಸ್.ಪಾಟೀಲ್‌ರವರು ಪದೇಪದೇ ನನ್ನ ಬಗ್ಗೆಯೇ ಹೇಳುತ್ತಿರುತ್ತಾರೆ. ಇವತ್ತು ನಿಮ್ಮ ಅಮೂಲ್ಯವಾದ ಸಲಹೆಗಳನ್ನು ಕೇಳುವುದಕ್ಕೋಸ್ಕರವೇ ಪ್ರೆಸ್‌ನವರೆಲ್ಲರೂ ಇಲ್ಲಿಯೇ ಕುಳಿತುಕೊಂಡಿದ್ದಾರೆ. ಹಿಂದೆ ಎಂದೂ ಈ ರೀತಿಯಾಗಿ ಅವರು ಕುಳಿತುಕೊಂಡಿರಲಿಲ್ಲ. ಆದರೆ ನಿಮಗೆ ಮೂಡ್ ಇಲ್ಲ.

ಶ್ರೀ ಡಿ.ಕೆ.ಶಿವಕುಮಾರ್: ಮಾನ್ಯ ಅಧ್ಯಕ್ಷರೆ, ಮೂಡ್ ಇರುವವರು ಇಲ್ಲಿಯೇ ಇರುತ್ತಾರೆ, ಮೂಡ್ ಇಲ್ಲದೇ ಇರುವವರು ಹೋಗುತ್ತಾರೆ. ನಿಮಗೆ ಮೂಡ್ ಇದ್ದರೆ ತಾವು ಇರಬಹುದು.

ಡಾ:ಜಿ.ಪರಮೇಶ್ವರ್: ಮಾನ್ಯ ಅಧ್ಯಕ್ಷರೆ, ತಮ್ಮ ಆದೇಶದ ಮೇರೆಗೆ ಎಲ್ಲಾ ಹಿರಿಯ ನಾಯಕರೆಲ್ಲರೂ ತಮ್ಮ ಕಛೇರಿಯಲ್ಲಿ ಕುಳಿತು ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಸರ್ಕಾರ ಹಟ ಮಾಡದೇ ಕೆಲವು ಸಲಹೆಗಳನ್ನು ತೆಗೆದುಕೊಂಡು ಈ ಬಿಲ್‌ನಲ್ಲಿ ಕೆಲವು ಮಾರ್ಪಾಟುಗಳನ್ನು ಸಹ ಮಾಡಿದೆ. ನಮ್ಮ ಸಲಹೆಗಳನ್ನು ಒಪ್ಪಿಕೊಂಡರೆ ನಾವು ಪಾಸ್ ಮಾಡಿಕೊಡುತ್ತೇವೆಂದು ತಾವು ಹೇಳಿದ ಮೇಲೆ ನಾವು ಎಲ್ಲವನ್ನೂ ರೆಡಿ ಮಾಡಿಕೊಂಡು ಕಾಯುತ್ತಿದ್ದೇವೆ. ಆದ್ದರಿಂದ ನಾನು ಹೇಳುವುದಕ್ಕೆ ಅವಕಾಶ ಕೊಡಿ ಬೇಗ ಮುಗಿಸಬಹುದು. ತಾವು ಹೇಳಿರತಕ್ಕಂಥಾದ್ದನ್ನು ಒಪ್ಪಿಕೊಂಡ ಮೇಲೆ ಮತ್ತೇಕೆ ಚರ್ಚೆ?

ಶ್ರೀ ಕೆ.ಶ್ರೀನಿವಾಸಗೌಡ: ನಾಳೆ ಬೆಳಿಗ್ಗೆಯವರೆಗೆ ಕಾಯ್ದರೆ ಏನಾಗುತ್ತದೆ?

ಡಾ:ಜಿ.ಪರಮೇಶ್ವರ್: ಬಿಲ್ ಇಲ್ಲಿ ಪಾಸಾದ ನಂತರ ಕೌನ್ಸಿಲ್‌ಗೆ ಹೋಗಬೇಕಾಗಿದೆ.

ಶ್ರೀ ಬಿ.ಸೋಮಶೇಖರ್: ಮಾನ್ಯ ಅಧ್ಯಕ್ಷರೆ, ನಾವು ಮಾತು ಕೊಟ್ಟ ಪ್ರಕಾರವೇ ನಡೆದುಕೊಳ್ಳುತ್ತೇವೆ. ಆದರೆ ಈಗಾಗಲೇ ಸಮಯ ೭.೩೦ ಗಂಟೆಯಾಗಿದೆ. ಮತ್ತೆ ಯಾರಿಗೂ ಸಹ ಮೂಡ್ ಇಲ್ಲ.

(ಗೊಂದಲ)

ಶ್ರೀ ಹೆಚ್.ಎಂ.ಚಂದ್ರಶೇಖರಪ್ಪ: ಮಾನ್ಯ ಅಧ್ಯಕ್ಷರೆ, ಮೂಡ್ ಇದೆ. ಆದರೆ ಅವರಿಗೆ ಮನಸ್ಸಿಲ್ಲ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ ನಾಳೆ ಒಂದೇ ದಿವಸ ಮಾತ್ರ ಕಲಾಪ ಇರುವುದರಿಂದ ಇದನ್ನು ನಾಳೆ ತೆಗೆದುಕೊಳ್ಳುವುದಕ್ಕೆ ಕಷ್ಟವಾಗುತ್ತದೆ. ಹಾಗೆಯೇ ಈ ಬಿಲ್ ಇಲ್ಲಿ ಪಾಸ್ ಆದನಂತರ ಮತ್ತೆ ವಿಧಾನಪರಿಷತ್ತಿಗೆ ಹೋಗಬೇಕಾಗುತ್ತದೆ. ಒಂದು ವೇಳೆ ಅಲ್ಲಿಂದ ಮತ್ತೆ ಇಲ್ಲಿಗೆ ಬಂದರೆ ಸಮಯ ಇಲ್ಲದೇ ಇರುವುದರಿಂದ ತೊಂದರೆಯಾಗುತ್ತದೆ. ಮತ್ತೆ ಇಲ್ಲಿಗೆ ಬರತಕ್ಕಂಥ ಪ್ರಸಂಗ ಆಗುವುದಿಲ್ಲ. ಆದರೂ ಸಹ ಇವತ್ತೇ ತೆಗೆದುಕೊಳ್ಳುವುದು ಒಳ್ಳೆಯದು.

ಶ್ರೀ ಪಿ.ಜಿ.ಆರ್.ಸಿಂಧ್ಯ: ಮಾನ್ಯ ಅಧ್ಯಕ್ಷರೆ, ಪಕ್ಷದ ಸಿಸ್ಟಮ್ ಪ್ರಕಾರ ನಾವು ಕೆಲಸ ಮಾಡುತ್ತೇವೆ. ಇದಕ್ಕೆ ಸಂಬಂಧಪಟ್ಟಂತೆ ನಮ್ಮ ಪಕ್ಷ ಒಂದು ತೀರ್ಮಾನಕ್ಕೆ ಬಂದಿದೆ.

ಡಾ||ಜಿ.ಪರಮೇಶ್ವರ್: ನೀರಾ ಬಗ್ಗೆ ಚರ್ಚೆ ಮಾಡುವುದಕ್ಕೆ ತಾವು ಅವಕಾಶ ಕೇಳಿದ್ದಕ್ಕೆ ಮತ್ತು ಈ ಚರ್ಚೆಯಾದ ನಂತರ ಬಿಲ್‌ನ್ನು ಪಾಸ್ ಮಾಡಿಕೊಡುತ್ತೇವೆಂದು ತಾವು ಹೇಳಿದ್ದಕ್ಕೆ ನಾವು ಒಪ್ಪಿಕೊಂಡಿದ್ದೇವೆ. ಈಗ ಪಾರ್ಟಿ ಮೀಟಿಂಗ್ ಇದೆ, ನಮಗೆ ಈಗ ಮೂಡ್ ಇಲ್ಲವೆಂದು ತಾವು ಹೇಳಿದರೆ ನಾವೇನು ಮಾಡುವುದಕ್ಕೆ ಆಗುತ್ತದೆ?

ಅಧ್ಯಕ್ಷರು: ಮಾನ್ಯ ಸೋಮಶೇಖರ್, ತಾವು ಮಾತನಾಡಿ. ಮೂಡ್ ಇದೆಯೋ ಇಲ್ಲವೋ ಎನ್ನುವುದಕ್ಕೆ ನಾನು ಓಟು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಅನೇಕ ಸಲ ಲೋಕಸಭೆ ೧೦ ಗಂಟೆಯವರೆಗೆ ಕುಳಿತಿದೆ. ಎಲ್ಲಾ ಮುಗಿಸಿ ನಾನೇ ಬೇಕಾದರೆ ಊಟ ತರಿಸುತ್ತೇನೆ.

ಶ್ರೀ ಬಿ.ಸೋಮಶೇಖರ್: ಬಹಳ ಸಂತೋಷ ಸಾರ್.

ಶ್ರೀ ಡಿ.ವಿ.ಸದಾನಂದಗೌಡ: ಕಾಂಗ್ರೆಸ್‌ನ ಗಲಾಟೆ ಮಾಡುವ ಮಿತ್ರರಿಗೆ ಇವತ್ತು ಒಳ್ಳೆಯ ಮೂಡ್ ಇದೆ. ಬೇರೆ ಯಾರಿಗೂ ಮೂಡ್ ಇಲ್ಲ. ಗಲಾಟೆ ಮಾಡುವಂತಹ ಒಂದು ಸೆಟ್ ಉಂಟಲ್ಲಾ, ಏಳು-ಎಂಟು-ಹತ್ತು ಜನರು, ಅವರಿಗೆ ಬಹಳ ಮೂಡ್ ಇದೆ.

AN HON MEMBER:- I strongly object to his comments.

ಶ್ರೀ ಎಸ್.ಎಸ್.ಪಾಟೀಲ್: ತಾವು ಊಟ ತರಿಸುತ್ತೇನೆಂದು ಹೇಳಿದಿರಿ, ಕೇವಲ ಊಟ ತರಿಸಿದರೆ ಬಹಳ ಮಂದಿ ಇರುವುದಿಲ್ಲ.

ಶ್ರೀ ಉಮೇಶ್ ಕತ್ತಿ: ಇದು ಊಟ ಮಾಡುವ ಟೈಮ್ ಅಲ್ಲ, ಇದು ಬೇರೆ ಟೈಮ್.

ಶ್ರೀ ವಿ.ಪಾಪಣ್ಣ: ಇವತ್ತು ವರಮಹಾಲಕ್ಷ್ಮಿ ಹಬ್ಬ ಇದೆ. ಹೆಣ್ಣು ಮಕ್ಕಳು ಹಬ್ಬ

ಮಾಡುತ್ತಿದ್ದಾರೆ. ಲೇಟಾಗಿ ಹೋದರೆ ಯಾರನ್ನೂ ಮನೆಗೆ ಸೇರಿಸುವುದಿಲ್ಲ. ದಯಮಾಡಿ ಎಲ್ಲರೂ ಮನೆಗೆ ಹೋಗಲಿ ಸಭೆಯನ್ನು ಅಡ್ಜರ್ನ್ ಮಾಡಿ. ನಾಳೆ ಬೇಕಾದರೆ ೯.೩೦ಕ್ಕೆ ಸೇರೋಣ.

ಅಧ್ಯಕ್ಷರು: ವರಮಹಾಲಕ್ಷ್ಮಿ ಹಬ್ಬ ಇರುವುದು ಹೆಣ್ಣು ಮಕ್ಕಳಿಗೆ, ಅಲ್ಲಿ ಗಂಡಸರಿಗೆ ಏನು ಕೆಲಸ? ಮಾನ್ಯ ಸೋಮಶೇಖರ್‌ರವರೆ, ನೀವು ಮಾತನಾಡಿ.

\+ ಶ್ರೀ ಬಿ.ಸೋಮಶೇಖರ್ (ಮಳವಳ್ಳಿ): ಮಾನ್ಯ ಅಧ್ಯಕ್ಷರೆ, ಸರ್ಕಾರ ಇಷ್ಟೊಂದು ಆಸಕ್ತಿಯನ್ನು ವಹಿಸುತ್ತಿರುವಾಗ ನಾವು ಅದಕ್ಕೆ ಅಡ್ಡಿ ಬಂದಿದ್ದೇವೆ ಎನ್ನತಕ್ಕ ಆಪಾದನೆಯನ್ನು ತೆಗೆದುಕೊಳ್ಳುವುದಕ್ಕೆ ಇಚ್ಛೆಪಡುವುದಿಲ್ಲ. ಈವೊಂದು ಮಸೂದೆಯನ್ನು ತರುವುದಕ್ಕೆ ನಮ್ಮ ಸರ್ಕಾರ ಇದ್ದಾಗ ನಾನು ಆ ಖಾತೆಯ ಮಂತ್ರಿಯಾಗಿದ್ದಾಗ ಆ ಪ್ರಯತ್ನವನ್ನು ಮಾಡಿದ್ದೆ. ಬಹಳ ಸಂತೋಷ ಏನೆಂದರೆ, ನಮ್ಮ ಸರ್ಕಾರದಲ್ಲಿ ನಾವು ಮಾಡಲಿಕ್ಕೆ ಆಗದಿರತಕ್ಕ ಮಸೂದೆಯನ್ನು ತಾವು ತರುತ್ತಿದ್ದೀರಿ, ಅದಕ್ಕಾಗಿ ವೈಯಕ್ತಿಕವಾಗಿ ನನಗೆ ಬಹಳ ಸಂತೋಷ ಆಗಿದೆ. ಆದರೆ ತಾವು ಈವೊಂದು ನೆಪದಲ್ಲಿ ಯಾವುದೋ ಒಂದು ಬುಡಕ್ಕೆ ಕೈಹಾಕಿದ್ದೀರಿ. ಅದರ ಬಗ್ಗೆ ನಮ್ಮ ಬಿನ್ನಾಭಿಪ್ರಾಯಗಳಿವೆ, ಅವುಗಳನ್ನು ಹೇಳಲಿಕ್ಕೆ ಇಚ್ಛೆಪಡುತ್ತಿದ್ದೇನೆ. ನಾನು ಹೆಚ್ಚಿಗೆ ಎಲ್ಲಾ ವಿಚಾರಗಳನ್ನು ಕ್ಲಾಸ್ ಬೈ ಕ್ಲಾಸ್ ಹೇಳುವುದಕ್ಕೆ ಹೋಗುವುದಿಲ್ಲ. ಏಕೆಂದರೆ ನನಗೆ ಸಂಪೂರ್ಣವಾಗಿ ಪರಿಚಯವಿರುವುದರಿಂದ ಕೆಲವು ವಿಚಾರಗಳನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಏಕೆಂದರೆ ಚರ್ಚೆ ಏನು ನಡೆದಿದೆ ನಮ್ಮ ಪಕ್ಷದ ನಿಲುವೇನು, ನಮ್ಮ ಅಭಿಪ್ರಾಯಗಳೇನು ಎನ್ನತಕ್ಕದ್ದು ಸದನಕ್ಕೆ ಹಾಗೂ ಸಾರ್ವಜನಿಕರಿಗೆ ಗೊತ್ತಾಗ ಬೇಕಾಗುತ್ತದೆ. ಆ ದೃಷ್ಟಿಯಿಂದ ನಮ್ಮ ಪಕ್ಷದ ವತಿಯಿಂದ ಮಾತನಾಡಲಿಕ್ಕೆ ಇಚ್ಛೆಪಡುತ್ತಿದ್ದೇನೆ. ಈವೊಂದು ಯೂನಿವರ್ಸಿಟಿಗಳ ಕಾಯಿದೆ ೧೯೭೬ಳರಲ್ಲಿ ತಂದಿರತಕ್ಕ ಕಾಯಿದೆ. ಸುಮಾರು ೨೫ವರ್ಷಗಳಾಗಿದೆ. ಯಾವುದೇ ಕಾಯಿದೆ ಆಡಳಿತದಲ್ಲಿ ಹರಿಯುವ ನೀರಾಗಿರಬೇಕೇ ಹೊರತು ಅದು ನಿಂತ ನೀರಾಗಿರಬಾರದು. ನಮ್ಮ ಅನುಭವದ ಮೇಲೆ ವಿಶ್ವವಿದ್ಯಾನಿಲಯಗಳ ಆಡಳಿತ ವೈಖರಿಯ ಮೇಲೆ ಆ ಒಂದು ಶಿಕ್ಷಣದ ಗುಣಮಟ್ಟವನ್ನು ಅಧ್ಯಯನ ಮಾಡಿ ಆಡಳಿತದ ದೃಷ್ಟಿಯಿಂದ ಕೆಲವು ಬದಲಾವಣೆಗಳನ್ನು ಮಾಡಬೇಕಾಗುತ್ತದೆ. ಆ ದೃಷ್ಟಿಯಿಂದ ಈವೊಂದು ಕಾಯಿದೆಯನ್ನು ತರತಕ್ಕದ್ದು ಸೂಕ್ತವಾಗಿದೆ. ಆದರೆ ಕೆಲವು ವಿಚಾರಗಳಲ್ಲಿ ಒಳ್ಳೆಯ ಸಲಹೆಗಳು ಇವೆ. ಕೆಲವು ವಿಚಾರಗಳಲ್ಲಿ ಬದಲಾವಣೆ ಮಾಡಿಕೊಳ್ಳತಕ್ಕ ಅವಶ್ಯಕತೆ ಇದೆ. ನಾನು ಅಲ್ಲೊಂದು ರೀತಿ ಇಲ್ಲೊಂದು ರೀತಿ ಮಾತನಾಡುವುದಿಲ್ಲ. ನಾವೇನು ನಿಲುವು ತೆಗೆದುಕೊಂಡಿದ್ದೇವೆ ಅದೇ ನಿಲುವನ್ನು ಇಲ್ಲಿ ಹೇಳುತ್ತೇವೆ. ನಾವೇನು ಪ್ರಯತ್ನ ಮಾಡಿದ್ದೆವು ಅವುಗಳನ್ನು ಕಾರ್ಯರೂಪಕ್ಕೆ ತರುವುದನ್ನು ನಾವು ಸ್ವಾಗತ

ಮಾಡಿದ್ದೇವೆ. ಇನ್ನೂ ಕೆಲವು ಬದಲಾವಣೆಗಳನ್ನು ಮಾಡುವುದಕ್ಕೆ ಸಲಹೆಗಳನ್ನು ಕೊಡುತ್ತೇವೆ. ಮಾನ್ಯ ಮಂತ್ರಿಗಳು ಓಪನ್ ಮೈಂಡ್ ಇಟ್ಟುಕೊಂಡಿರುವುದಕ್ಕೆ ಬಹಳ ಸಂತೋಷ. ಅವರು ಶಿಕ್ಷಣದಲ್ಲಿ ಹೆಚ್ಚಿನ ಅಧ್ಯಯನ ಮಾಡಿದ್ದಾರೆ. ಪಿಎಚ್‌ಡಿ ಮಾಡಿದ್ದಾರೆ. ಉನ್ನತ ಶಿಕ್ಷಣವನ್ನು ಒಂದು ಉತ್ತಮವಾದ ಮಟ್ಟಕ್ಕೆ ಹಾಗೂ ಶಿಕ್ಷಣದ ಗುಣಮಟ್ಟ ಹೆಚ್ಚಿಸಬೇಕೆನ್ನುವ ಒಂದು ಕಳಕಳಿ ಅವರಲ್ಲಿದೆಯೆಂದು ನಾನು ಭಾವಿಸಿಕೊಂಡಿದ್ದೇನೆ ಮತ್ತು ಆಡಳಿತವನ್ನೂ ಸಹ ಅಭಿವೃದ್ಧಿ ಮಾಡಬೇಕಾಗುತ್ತದೆ. ಯೂನಿವರ್ಸಿಟಿಗಳಲ್ಲಿ ತಮಗೆ ಗೊತ್ತಿರುವ ಹಾಗೆ ಶಿಕ್ಷಣದ ಗುಣಮಟ್ಟ ಇತ್ತೀಚಿನ ದಿನಗಳಲ್ಲಿ ಕೆಳಮಟ್ಟಕ್ಕೆ ಹೋಗುತ್ತಿರುವಾಗ ಆಡಳಿತದಲ್ಲೂ ಕೂಡ ಬಹಳ ಅವ್ಯವಹಾರ ಆಗಿರತಕ್ಕದ್ದು, ಮೀಸಲಾತಿ ಜಾರಿಯಲ್ಲಿ ವಿಳಂಬವಾಗಿರತಕ್ಕದ್ದು, ವಿಭಜನೆಯಾಗಿರತಕ್ಕದ್ದು, ಆರ್ಥಿಕ ದಿವಾಳಿಯಾಗಿರತಕ್ಕದ್ದು ಅನೇಕ ದುರುಪಯೋಗವಾಗಿರತಕ್ಕದ್ದನ್ನು ಅನೇಕ ಸಂದರ್ಭಗಳಲ್ಲಿ ನೋಡಿದ್ದೇವೆ. ೧೯೯೪ರಲ್ಲಿ ಸುಪ್ರೀಂಕೋರ್ಟ್‌ನ ನ್ಯಾಯಾಧೀಶರಾಗಿದ್ದಂತಹ ಜಸ್ಟೀಸ್ ಜಗನ್ನಾಥಶೆಟ್ಟಿಯವರು ೪ನೇ ವೇತನ ಆಯೋಗದ ವರದಿಯನ್ನು ಕೊಡುವಾಗ ಅವರು ತಮ್ಮ ಅಭಿಪ್ರಾಯವನ್ನು ಹೇಳಿದ್ದಾರೆ. ಅವರು ಏನು ಹೇಳಿದ್ದಾರೆಂದರೆ, ವಿಶ್ವವಿದ್ಯಾನಿಲಯಗಳ ಒಂದು ಆರ್ಥಿಕ ನಡವಳಿಕೆಗಳನ್ನು ನೋಡಿ ಯಾವರೀತಿ ಆಡಳಿತವನ್ನು ಮಾಡಿದ್ದಾರೆನ್ನುವುದನ್ನು ನೋಡಿ ತಮ್ಮ ಅಭಿಪ್ರಾಯಗಳನ್ನು ಹೇಳಿದ್ದಾರೆ. ವಿಶ್ವವಿದ್ಯಾನಿಲಯಕ್ಕೆ ಒಂದು ಶೈಕ್ಷಣಿಕ ಸ್ವಾಯತ್ತತೆಯನ್ನು ಕೊಡತಕ್ಕದ್ದು ಸೂಕ್ತ. ಆದರೆ ಆಡಳಿತ್ಮಾಕವಾದ ಸ್ವಾಯತ್ತತೆಯನ್ನು ಕೊಡುವುದು ಅಷ್ಟು ಸೂಕ್ತವಲ್ಲ. ಅಕಾಡೆಮಿಕ್ ಅಟಾನಮಿ ಇರಬೇಕೇ ಹೊರತು ಅಡ್ಮಿನಿಸ್ಟ್ರೇಟಿವ್ ಅಟಾನಮಿ ಕೊಡತಕ್ಕದ್ದು ಸೂಕ್ತವಲ್ಲ. ಏಕೆಂದರೆ ಇಷ್ಟೊಂದು ಟಂಕರ್ ಮಾಡಿದ್ದಾರೆ, ಆಡಳಿತದಲ್ಲಿ ಹಣವನ್ನು ಮಿಸ್‌ಯೂಸ್ ಮಾಡಿದ್ದಾರೆ, ನೇಮಕಾತಿಯಲ್ಲಿ ಬಹಳ ಅವ್ಯವಹಾರಗಳಾಗಿದೆ. ಈ ದೃಷ್ಟಿಯಿಂದ ಆಡಳಿತದಲ್ಲಿ ಸ್ವಾಯತ್ತತೆಯನ್ನು ಕೊಡುವುದು ಸೂಕ್ತವಲ್ಲವೆನ್ನುವ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ನನ್ನ ಅಭಿಪ್ರಾಯವೂ ಅಷ್ಟೆ. ವೈಸ್-ಚಾನ್ಸಲರ್‌ಗಳಿಗೆ ವಿಶ್ವವಿದ್ಯಾನಿಲಯಗಳಿಗೆ ಸ್ವತಂತ್ರವಿರಬೇಕು. ಯಾವುದರಲ್ಲಿ ಅಂದರೆ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸುವ ದೃಷ್ಟಿಯಲ್ಲಿ, ಪಠ್ಯಕ್ರಮ ರಚನೆಯಲ್ಲಿ, ಪರೀಕ್ಷೆಗಳನ್ನು ನಡೆಸುವುದರಲ್ಲಿ ಮತ್ತು ಬೇರೆ ಬೇರೆ ಗುಣಮಟ್ಟವನ್ನು ಹೆಚ್ಚಿಸುವುದಕ್ಕೆ ಸಂಪೂರ್ಣವಾದ ಸ್ವಾತಂತ್ರ್ಯವನ್ನು ನಾವು ಕೊಡಬೇಕು. ಯಾವುದೇ ರೀತಿಯ ಹಸ್ತಕ್ಷೇಪವಿರಬಾರದು ಎನ್ನುವುದು ನನ್ನ ಅಭಿಪ್ರಾಯ. ಆಡಳಿತದಲ್ಲಿ ನಮ್ಮ ಸರ್ಕಾರದ ಪಾಲಿಸಿ ಏನಾಗಿದೆ? ಅದು ಆರ್ಥಿಕ ಪಾಲಿಸಿ ಇರಬಹುದು, ಮೀಸಲಾತಿ ಪಾಲಿಸಿ ಇರಬಹುದು, ಬೇರೆ ಬೇರೆ ನೀತಿ ನಿಯಮಗಳ ಆಧಾರದ ಮೇಲೆ ನಡೆಯುತ್ತಿವೆಯೇ? ನಮ್ಮ ಪಾಲಿಸಿಯ ಆಧಾರದ ಮೇಲೆ ನಡೆಯುತ್ತಿವೆಯೇ? ಅದನ್ನು ನೋಡುವ ಜವಾಬ್ದಾರಿ ನಮ್ಮ ಸರ್ಕಾರಕ್ಕೆ ಇದೆ. ಆ ದೃಷ್ಟಿಯಿಂದ ನನ್ನ ಸಲಹೆ ಏನೆಂದರೆ,

ವೈಸ್‌ಚಾನ್ಸಲರ್‌ಗಳನ್ನು ಅಪಾಯಿಂಟ್ ಮಾಡುವಾಗ ಹಿಂದೆ ಏನಿತ್ತು ಅದು ಎರಡು ಮೂರು ಸಾರಿ ಬದಲಾವಣೆಯಾಗಿದೆ. ೧೯೭೬ರ ಹಿಂದೆ ಇದೇ ವ್ಯವಸ್ಥೆ ಇತ್ತು. ೧೯೭೬ರ ನಂತರ ಯೂನಿವರ್ಸಿಟಿ ವೈಸ್‌ಚಾನ್ಸಲರ್‌ಗಳನ್ನು ನೇಮಕ ಮಾಡತಕ್ಕಂಥ ಅಧಿಕಾರ ಗೌರ್‍ನರ್‌ರವರಿಗೆ ಅಂದರೆ ಚಾನ್ಸಲರ್‌ಗೆ ಕೊಟ್ಟತ್ತು. ಅದರಲ್ಲೂ ಇವತ್ತು ಮಾನ್ಯ ಮುಖ್ಯಮಂತ್ರಿಗಳು ಆ ಅಧಿಕಾರ ಸರ್ಕಾರಕ್ಕೆ ಇರಬೇಕೆನ್ನುವ ನಿಲುವು ಅವರಲ್ಲಿದೆಯೆಂದು ನಾನು ತಿಳಿದುಕೊಂಡಿದ್ದೇನೆ. ಇಲ್ಲದಿದ್ದರೆ ಈ ಮಸೂದೆ ಹೊರಗಡೆ ಬರುತ್ತಿರಲಿಲ್ಲ. ಆ ಕಾರಣದಿಂದ ಈ ಮಸೂದೆಯನ್ನು ತರುತ್ತಿದ್ದೀರಿ ಸಂತೋಷ. ಸಧ್ಯ ಯಾವುದೋ ಒಂದು ಕಾರಣದಿಂದ ನಿಮ್ಮ ಹಿತ ಕಾಪಾಡಿಕೊಳ್ಳುವುದಾದರೂ ಹೊಸ ಕಾಯಿದೆ ತರತಕ್ಕದ್ದು ಬಹಳ ಒಳ್ಳೆಯದು. ನಾನು ಇವತ್ತು ಹೇಳುತ್ತಿದ್ದೇನೆ, ನಾಲ್ಕು ಜನ ಸದಸ್ಯರು ಸರ್ಚ್ ಕಮಿಟಿಯಲ್ಲಿ ಏನಿದ್ದಾರೆ ಆ ಸರ್ಚ್ ಕಮಿಟಿಯಲ್ಲಿ ಒಬ್ಬರು ಸರ್ಕಾರದ ನಾಮಿನಿ ಇರುತ್ತಾರೆ. ಇನ್ನೊಬ್ಬರು ಯೂನಿವರ್ಸಿಟಿ ನಾಮಿನಿ ಇರುತ್ತಾರೆ. ಇನ್ನೊಬ್ಬರು ಚಾನ್ಸಲರ್‌ರವರ ನಾಮಿನಿ ಇರುತ್ತಾರೆ. ಮತ್ತೊಬ್ಬರು ಯುಜಿಸಿ ನಾಮಿನಿ ಇರುತ್ತಾರೆ. ಈ ಸರ್ಚ್ ಕಮಿಟಿಯಲ್ಲಿ ಒಬ್ಬರು ಅಧ್ಯಕ್ಷರನ್ನು ಸರ್ಕಾರ ನೇಮಕ ಮಾಡತಕ್ಕದ್ದು ಎಂದು ಇದೆ. ಅದರಲ್ಲಿ ನನ್ನ ಸಲಹೆ ಏನೆಂದರೆ ಸರ್ಕಾರವೇ ನೇಮಕ ಮಾಡಲಿ. ಕೊನೆಗೆ ಮೂರು ಹೆಸರುಗಳನ್ನು ಅರ್ಹತೆಯ ಆಧಾರದ ಮೇಲೆ ಏನು ಕೊಡುತ್ತಾರೆ, ಆವೊಂದು ಮೂರು ಹೆಸರುಗಳು ಚಾನ್ಸಲರ್‌ಗೆ ಹೋಗುತ್ತದೆ. ಆ ಮೂರು ಹೆಸರುಗಳನ್ನು ಅಂತಿಮ ಮಾಡುವಾಗ ಚಾನ್ಸಲರ್ ಸರ್ಕಾರವನ್ನು ಕನ್ಸಲ್ಟ್ ಮಾಡಿ ಇಬ್ಬರೂ ಕುಳಿತು, ಚಾನ್ಸಲರ್ ಮತ್ತು ಸರ್ಕಾರ ಇಬ್ಬರೂ ಕುಳಿತು ಉತ್ತಮವಾದ ಒಬ್ಬರು ಪ್ರೊಫೆಸರ್ ಅವರನ್ನು ಸಾಮಾಜಿಕ ನ್ಯಾಯವನ್ನು ಗಮನದಲ್ಲಿಟ್ಟುಕೊಂಡು, ರಾಜ್ಯದ ಹಿತವನ್ನು ಗಮನದಲ್ಲಿಟ್ಟುಕೊಂಡು, ಶಿಕ್ಷಣದ ಗುಣಮಟ್ಟವನ್ನು ಗಮನದಲ್ಲಿಟ್ಟುಕೊಂಡು ಮಾಡತಕ್ಕದ್ದು ಸೂಕ್ತವೆಂದು ನನ್ನ ಸಲಹೆ. ಇನ್ ಕನ್ಸಲ್ಟೇಷನ್ ವಿತ್ ದಿ ಗೌರ್‍ನಮೆಂಟ್ ಅದನ್ನು ಮಾಡಿದರೆ ಬಹುಶಃ ಅನುಕೂಲವಾಗಬಹುದು ಎನ್ನುವುದು ನನ್ನ ಸಲಹೆ. ಈಗಾಗಲೇ ಯೂನಿವರ್ಸಿಟಿಗಳಲ್ಲಿ ನನ್ನ ಅನುಭವದಲ್ಲಿ ಸುಮಾರು ಹತ್ತಾರು ವರ್ಷಗಳ ಈಚೆಗೆ, ನಾನು ಎಲ್ಲರ ಬಗ್ಗೆ ಸಾರಸಗಟಾಗಿ ಹೇಳುವುದಿಲ್ಲ, ಕೆಲವು ಉಪ ಕುಲಪತಿಗಳು ತಮ್ಮ ಇಚ್ಛೆ ಬಂದ ಹಾಗೆ ನಡೆದುಕೊಂಡಿದ್ದಾರೆ. ಕೆಲವು ವಿಶ್ವವಿದ್ಯಾನಿಲಯಗಳನ್ನು ಹಾಳು ಮಾಡಿರತಕ್ಕ ಅನುಭವ ನಮಗೆ ಇದೆ. ಅದರಲ್ಲಿ ಕೆಲವರಿಗೆ ಎರಡು ಟರ್ಮ್ ಸಿಕ್ಕಿದೆ. ಯಾರ್‍ಯಾರ ಮೇಲೆ ಆಪಾದನೆಗಳಿವೆ, ಯಾರ್‍ಯಾರ ಮೇಲೆ ಭ್ರಷ್ಟಾಚಾರದ ಆಪಾದನೆಗಳಿವೆ ಯಾರು ಸರ್ಕಾರದ ಕಾಯಿದೆಗಳನ್ನು ಉಲ್ಲಂಘನೆ ಮಾಡಿದ್ದಾರೆ. ಅವುಗಳೆಲ್ಲಾ ಸಾಬೀತಾಗಿದ್ದರೂ ಅಂತಹವರನ್ನು ಎರಡನೆಯ ಅವಧಿಗೂ ಮುಂದುವರಿಸಿಕೊಂಡು ಹೋಗಿದ್ದಾರೆ. ಮಾನ್ಯ ಸುರೇಶ್‌ಕುಮಾರ್‌ರವರು ಹೇಳುತ್ತಿದ್ದರು, ಅವರ ಅನುಭವದಲ್ಲಿ ಹೇಳಿದರು. ಏನೆಂದರೆ ಕೆಲವು

ವೈಸ್‌ಚಾನ್ಸಲರ್‌ಗಳು ಮೊದಲನೆಯ ಅವಧಿಯಲ್ಲಿ ಮುಂದಿನ ಅವಧಿಯನ್ನು ತೆಗೆದುಕೊಳ್ಳಬೇಕಾದರೆ ಏನೇನು ಮಾಡಬೇಕೆಂದು ಅದರಲ್ಲಿ ಕಾಲ ಕಳೆಯುತ್ತಾರೆ. ಅದು ಆದ ಮೇಲೆ ಎರಡನೆಯ ಅವಧಿ ಸಿಕ್ಕಿದ ತಕ್ಷಣ ಏನೇನು ಮಾಡಬಾರದೋ ಅದೆಲ್ಲವನ್ನೂ ಮಾಡಿದ್ದಾರೆ. ಹೀಗಾಗಿ ಅವರ ಮೊದಲನೆಯ ಅವಧಿ ಯಾವ ರೀತಿ ಉಳಿದುಕೊಳ್ಳಬೇಕು, ಯಾರ್‍ಯಾರನ್ನು ಎಷ್ಟರಮಟ್ಟಿಗೆ ಬೇಕು ಮಾಡಿಕೊಳ್ಳಬೇಕು, ಎರಡನೆಯ ಅವಧಿ ತೆಗೆದುಕೊಳ್ಳುವುದಕ್ಕೆ ಏನೇನು ಬೇಕೋ ಅದೆಲ್ಲವನ್ನು ಮಾಡಿದ್ದಾರೆ. ನನ್ನ ಸಲಹೆ ಏನೆಂದರೆ, ಯಾರಿಗೇ ಕೊಡಿ ಒಂದೇ ಟರ್ಮ್ ಕೊಡಿ. ೫ ವರ್ಷ ೪ ವರ್ಷ ಮೂರು ವರ್ಷ ಒಂದು ಟರ್ಮ್‌ಗೆ ಮಾತ್ರ ಅಪಾಯಿಂಟ್ ಆಗಲಿ. ಒಂದು ಟರ್ಮ್ ತಾವು ಎಷ್ಟು ವರ್ಷ ಕೊಡುತ್ತೀರಿ ಅದು ಸರ್ಕಾರದ ತೀರ್ಮಾನದಲ್ಲಿ ಒಂದೇ ಟರ್ಮ್ ಕೊಡಬೇಕು.

೭.೩೦ ಪಿಎಂ

ಇನ್ನೊಂದು ಚಾಪ್ಟರ್ ೩ ಅದರಲ್ಲಿ ಕಾಲಂ ೭ರಲ್ಲಿ

The Vice Chancellor shall not be removed from his office except by an order of the Chancellor passed on the ground of Wilful omission or refusal to carry out the provisions of this Act, or for abuse of power vested in him and on the advice tendered by the State Government, on consideration of the report of enquiry ordered by it under sub sec. (8)

For the purpose of holding enquiry under this Section, the State Government shall appoint a person who is or who has been a Judge of the High Court or the Supreme Court.

The enquiry authority shall hold enquiry after giving an opportunity to make representation by the Vice Chancellor and shall submit a report to the State Government, on the action to be taken, including penalty, if any, to be imposed and the State Government shall on consideration of the report, advice the Chancellor, the Chancellor shall act in accordance with such an advice.

ಅದರಲ್ಲಿ ನನ್ನ ಒಂದು ಸೂಚನೆ ಏನು ಎಂದರೆ -

The Vice Chancellor shall submit a report, i.e., a report of the enquiry authority, after giving opportunity to the Vice Chancellor, shall submit a report to the State Govenment on the action to be taken including removal

Not only penalty if any to be imposed, but also 'removal'

ಅದರಲ್ಲಿ ಒಂದು ಶಬ್ದ ಸೇರಿಸತಕ್ಕಂಥಾದ್ದು - "including removal" ಅಷ್ಟೊಂದು ಅವ್ಯವಹಾರ ಮಾಡಿದ್ದರೆ, ವೈಸಛಾನ್ಸಲರದ್ದು ಎನ್‌ಕ್ವೈರಿ ರಿಪೋರ್ಟ್ ಕೆಟ್ಟದಾಗಿ ಇದ್ದರೆ ಅವರನ್ನು ತೆಗೆಯತಕ್ಕಂಥ ಅಧಿಕಾರವೂ ಅವರಿಗೆ ಇರಬೇಕು. ಇದರಲ್ಲಿ ಏನು ಹೇಳಿದ್ದೀರಿ? ಕೇವಲ 'including penalty if any' ಎಂದು ಹಾಕಿಬಿಟ್ಟಿದ್ದೀರಿ. ಅಲ್ಲಿ 'including removal' ಹಾಕಬೇಕು. ಮತ್ತು ಇದರಲ್ಲಿ The entire process should be completed within six months. ಇಲ್ಲವೆಂದರೆ ವರ್ಷಾನುಗಟ್ಟಲೆ ಎನ್‌ಕ್ವೈರಿ ನಡೆಯುತ್ತದೆ. ಎನ್‌ಕ್ವೈರಿ ರಿಪೋರ್ಟ್ ಬಂದು ಸರ್ಕಾರದಲ್ಲಿದ್ದು ಸರ್ಕಾರ ಅದನ್ನು ಚಾನ್ಸಲರ್‌ಗೆ ಶಿಫಾರಸ್ಸು ಮಾಡದೆ ಹಾಗೆಯೇ ಇಟ್ಟುಕೊಳ್ಳುವ ಸಂದರ್ಭಗಳೂ ಉಂಟು. ಆದ್ದರಿಂದ shall ಎಂದು ಇಟ್ಟಿದ್ದೀರಿ.

The Government shall on consideration of the report, advise the Chancellor and the Chancellor shall act in accordance with such advice.

Time limit must be imposed within which time entire process should be completed. ಅದನ್ನು ಒಂದು ಸೇರಿಸತಕ್ಕದ್ದು. ಮತ್ತೆ ರಿಜಿಸ್ಟ್ರಾರ್ ಬಗ್ಗೆ ಹೇಳುವುದಾದರೆ ನಮ್ಮ ಜಾಯಿಂಟ್ ಸೆಲೆಕ್ಟ್ ಕಮಿಟಿಯವರು Registrar must be appointed by the Government ಎಂದು ಹೇಳಿದ್ದರು. ಏಕೆಂದರೆ administrative autonomy ಎಂದು ಆದಮೇಲೆ ಆ ರಿಜಿಸ್ಟ್ರಾರ್ ವೈಸ್-ಛಾನ್ಸಲರ್ ಹೇಳಿದ ಹಾಗೆ ಎಲ್ಲಾ ಮಾಡಬಾರದು. ಸಿಂಡಿಕೇಟ್‌ನಲ್ಲಿ ಯಾವುದಾದರೂ ಒಂದು ಪಾಲಿಸಿಗೆ ವಿರುದ್ಧವಾದ ಅಥವಾ ಸರ್ಕಾರದ ಒಂದು ನೀತಿಗೆ ವಿರುದ್ಧವಾಗಿ ಯಾವುದಾದರೂ ಒಂದು ತೀರ್ಮಾನವನ್ನು ತೆಗೆದುಕೊಂಡಾಗ ಆ ತೀರ್ಮಾನವನ್ನು ಅನುಷ್ಠಾನಕ್ಕೆ ತರುವಂಥಾದ್ದಕ್ಕೆ ರಿಜಿಸ್ಟ್ರಾರ್ ಹೋಗಬಾರದು. ಅದು ಯಾವಾಗ ಆಗುತ್ತದೆ ಎಂದರೆ ಒಬ್ಬ ಹಿರಿಯ ಅಧಿಕಾರಿ ಅಲ್ಲಿ ಇದ್ದಾಗ ಅಂತಹವರು ಸಿಂಡಿಕೇಟ್‌ನ ತೀರ್ಮಾನಗಳನ್ನು ಇಂಪ್ಲಿಮೆಂಟ್ ಮಾಡುವುದಿಲ್ಲ. ಒಂದು ವೇಳೆ ಸಿಂಡಿಕೇಟ್‌ನವರೇ ನೇಮಕ ಮಾಡಿದಂಥ ರಿಜಿಸ್ಟ್ರಾರ್ ಇದ್ದರೆ ಅವರು ಸಿಂಡಿಕೇಟಿನ

ವಿರುದ್ಧವಾಗಿ ಹೋಗುವುದಿಲ್ಲ ಅಥವಾ ವೈಸ್‌ಛಾನ್ಸಲರ್ ಅಪಾಯಿಂಟ್ ಮಾಡಿದಂಥ ರಿಜಿಸ್ಟ್ರಾರ್ ಇದ್ದರೆ ಆ ವೈಸ್‌ಛಾನ್ಸಲರ್ ತಮಗೆ ಏನು ಬೇಕೆಂದು ರೆಗ್ಯುಲೇಷನ್ ಮಾಡುವಾಗ ಅವನೂ ಭಾಗಿಯಾಗುತ್ತಾನೆ. ಅದಕ್ಕೆ ವಿರುದ್ಧವಾಗಿ ಕೊಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ಎಷ್ಟೋ ಸಾರಿ ನಮ್ಮ ಅನುಭವದಲ್ಲಿ ಸರ್ಕಾರದ ಮಟ್ಟದಲ್ಲಿ ಅಲ್ಲಿ ಪಾಸ್ ಮಾಡಿದ ಸ್ಟ್ಯಾಚ್ಯೂಟ್‌ಗಳೇ ಆಗಬಹುದು ಮತ್ತು ಅಲ್ಲಿ ಪಾಸ್ ಮಾಡಿದಂಥ ರೆಗ್ಯುಲೇಷನ್ ಆಗಬಹುದು ಅದನ್ನು ರದ್ದು ಮಾಡಿದಂಥ ಸಂದರ್ಭಗಳೂ ಉಂಟು. ಇಷ್ಟೊಂದು ಮುಜುಗರ ಆಗತಕ್ಕಂಥ ಸಂದರ್ಭದಲ್ಲಿ ಕೆಲವು ಕಾರ್ಪೊರೇಷನ್‌ಗಳನ್ನು ನೋಡಿದ್ದೇವೆ. ಆ ಕಾರ್ಪೊರೇಷನ್ನಿನ ಕಮೀಷನರ್ ಏನು ಮಾಡುತ್ತಾರೆ? ಸರ್ಕಾರದ ನೀತಿ ಏನಿದೆ ಅಂಥಾದ್ದು ಒಂದು ನೀತಿ ಇದ್ದರೆ ಮಾತ್ರ ಕಾರ್ಪೊರೇಷನ್ ಮುಂದೆ ಇಡುತ್ತಾರೆ. ನೀತಿಗೆ ವಿರುದ್ಧವಾಗಿ ಇದ್ದರೆ ಅದನ್ನು ಪ್ಲೇಸ್ ಮಾಡುವುದಿಲ್ಲ. ಆ ದೃಷ್ಟಿಯಿಂದ ಇದನ್ನು ಇಟ್ಟುಕೊಂಡು ಈ ರಿಜಿಸ್ಟ್ರಾರ್ ಆದವರು ಹಿರಿಯ ಅಧಿಕಾರಿ ಇದ್ದರೆ illegal resolution ಮಾಡುವುದಕ್ಕೆ ಅವಕಾಶ ಕೊಡುವುದಿಲ್ಲ ಅಂಥಾದ್ದೇನಾದರೂ ಇದ್ದರೆ ಅವರು ಅದನ್ನು ಸರ್ಕಾರದ ಗಮನಕ್ಕೆ ತರುತ್ತಾರೆ. ಆದ್ದರಿಂದ administrative autonomy ಸರ್ಕಾರದಲ್ಲಿ ಇರುತ್ತದೆ. ಸರ್ಕಾರದಲ್ಲಿ ನೀತಿನಿಯಮಗಳನ್ನು ಪಾಲನೆ ಮಾಡುವುದಕ್ಕೆ ರಿಜಿಸ್ಟ್ರಾರ್ ಇರುತ್ತಾರೆ. ಆದ್ದರಿಂದ ಆ Registrar must not be under the obligations of the University or he should not be under the obligation of the Vice Chancellor or Syndicate. If he is appointed by the Government, he will strictly follow the rules, regulations, statutes and policies issued from time to time from the Government ಆದ್ದರಿಂದ ಒಬ್ಬ ಸೂಪರ್‌ಟೈಮ್ ಸ್ಕೇಲ್ ಆಫೀಸರ್‌ನ್ನು ನೇಮಕ ಮಾಡತಕ್ಕದ್ದನ್ನು ತಾವು ಒಪ್ಪಿದ್ದೀರಿ, ಅದನ್ನು ಮಾಡಬೇಕು ಮತ್ತು ಎರಡನೇ ಆಪ್ಷನ್ ಅವರಿಗೆ ಕೊಡಬಾರದು. ಇಲ್ಲಿ ತಾವು ಏನು ಹೇಳಿದ್ದೀರಿ ಎಂದರೆ, -

Provided that where no such person is available, then the Registrar shall be appointed by the Vice-Chancellor with the approval of the Syndicate from out of the Panel of not less than three persons recommended by the Vice-Chancellor to the Syndicate. If no person in the Panel is approved by the Syndicate, within the time prescribed by the statute, the Chancellor may in consultation with the Vice Chancellor appoint any one among them to be Registrar.

ಸೆಕೆಂಡ್ ಪ್ರಾವಿಷನ್ ಏನು ಕೊಟ್ಟಿದ್ದೀರಿ ಎಂದರೆ ಒಂದು ವೇಳೆ ಸರ್ಕಾರದಿಂದ ರಿಜಿಸ್ಟ್ರಾರ್‌ನ್ನು ನೇಮಕ ಮಾಡದೇ ಇದ್ದರೆ ವೈಸ್‌ಛಾನ್ಸಲರ್‌ರವರೇ ಸಿಂಡಿಕೇಟಿನ ಶಿಫಾರಸ್ಸು ತೆಗೆದುಕೊಂಡು ಅವರನ್ನು ನೇಮಕ ಮಾಡಬೇಕು ಎನ್ನತಕ್ಕಂಥಾದ್ದಕ್ಕೆ ಪ್ರಾವಿಷನ್ ಇದೆ. ಇದರ ಅರ್ಥ ಏನಾಗುತ್ತದೆ ಎಂದರೆ first provision ಬಿಟ್ಟು ಬಿಟ್ಟು they will operate only the second provision. ಮತ್ತೆ ಅವರಿಗೆ ನೇಮಕ ಮಾಡತಕ್ಕಂಥಾದ್ದಕ್ಕೆ ಅವಕಾಶ ಆಗುತ್ತದೆ. ಇದನ್ನು ಕೊಡಲೇಬಾರದು. ಇದು ಒಂದೇ ಒಂದು ಪ್ಯಾರಾ ಇರಬೇಕು. -

The Registrar shall be the whole time officer of the University.

The State Government may appoint an officer belonging to All India Services working in super time scale to be Registrar of the University.

ಹಾಗಾದರೆ ಅಲ್ಲಿ ಏನೇನೂ ಅಧ್ವಾನ ಆಗುವುದಿಲ್ಲ. ಅದನ್ನು ಆಡಳಿತವಾಗಿ ಇಟ್ಟುಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ಅದನ್ನು ತಾವು ಒಪ್ಪಿಕೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಮತ್ತೆ ರಿಜಿಸ್ಟ್ರಾರ್(Evaluation) ಅವರು, Finance Officerಗಳನ್ನು ಯೂನಿವರ್ಸಿಟಿಯವರು ಮಾಡಿಕೊಳ್ಳಲಿ. ಲೀಗಲ್ ಆಫೀಸರ್‌ಗಳನ್ನು ಅವರೇ ಮಾಡಿಕೊಳ್ಳಲಿ. But all these Registrars must be under the control of the Registrar appointed by the Government. ಇದು ಒಂದು ಆದಾಗ ಆಡಳಿತದಲ್ಲಿ ನಿಮಗೆ ಬಿಗಿ ಸಿಗುತ್ತದೆ. ಇನ್ನೊಂದು, ಅದಕ್ಕೆ ಮಂತ್ರಿಗಳ ಸಹಮತ ಇದೆಯೆಂದು ನಾನು ತಿಳಿದುಕೊಂಡಿದ್ದೇನೆ. Definition of Teachers in Chapter I: Teacher means Professors, Asst.Professors, Readers or Lecturers imparting instruction in any University.

ಎಂದರೆ ಇದರ ಜೊತೆಗೆ ಲೈಬ್ರರಿಯನ್ಸ್ ಮತ್ತು ಫಿಸಿಕಲ್ ಎಜ್ಯುಕೇಷನ್ ಟೀಚರ್ಸ್ ಯು.ಜಿ.ಸಿ.ಗೆ ಸೇರಿಸಲು ನಾವು ಸರ್ಕಾರದಿಂದ ಬರೆದಿದ್ದೇವೆ. ಅವರನ್ನು ಟೀಚಿಂಗ್ ಎಂದು ಕನ್ಸಿಡರ್ ಮಾಡಬೇಕು ಎಂದು ಒಂದು ವೇಳೆ ಯು.ಜಿ.ಸಿ.ಯವರು ಅಪ್ರೂವಲ್ ಕೊಟ್ಟರೆ ಅವರನ್ನು ತೆಗೆದುಕೊಳ್ಳುವುದಕ್ಕೆ ಅವಕಾಶ ಇರಬೇಕು. They are all imparting instructions in the University. They should also be brought under the definition of Teachers. ಅದನ್ನು ಒಂದು ಸೇರಿಸತಕ್ಕದ್ದು. ಮತ್ತೆ ಈ ಅಫಿಲಿಯೇಷನ್ ಕಮಿಟಿ ಏನಿದೆ, ಇದರಲ್ಲಿ ತಾವು ಚಾಪ್ಟರ್

೧೦ ಕ್ಲಾಸ್ ೫೯ ರಲ್ಲಿ -

On receipt of application under Sub Sec.(2), it shall be placed before the Syndicate for consideration. The Syndicate on consideration of each of the applications for affiliation shall direct enquiry to be made by the Local Inquiry Committee.

Here it should come in the Act itself as to the composition if the Committee, as to who should be in the Committee.

ಅದನ್ನು ತಾವು ನಿರ್ದಿಷ್ಟವಾಗಿ ಹೇಳಬೇಕಾಗುತ್ತದೆ. ಇಲ್ಲದಿದ್ದರೆ ವಿಶ್ವವಿದ್ಯಾನಿಲಯದವರು ಅವರಿಗೆ ಬೇಕಾದ ಹಾಗೆ ಮಾಡಿಕೊಳ್ಳುತ್ತಾರೆ. ಯೂನಿಫಾರ್ಮಿಟಿ ಬರಬೇಕಾದರೆ ಈ -

Local Inquiry Committtee should consist of one person belonging to SC/ST, one woman etc.

ಅದನ್ನು ಸೇರಿಸತಕ್ಕದ್ದು ಸೂಕ್ತ; ಇನ್ನೊಂದು ಎಲ್ಲರಿಗೂ ಗೊತ್ತಿರುವ ಹಾಗೆ - Inter University Transfer of Employees: ಅದು ಹಿಂದೆ ಇರಲಿಲ್ಲ, ಇದನ್ನು ಹೊಸದಾಗಿ ತಾವು ತಂದಿದ್ದೀರಿ. Each employee of the University shall be liable for transfer from one University to another. ಅದನ್ನು ಮ್ಯಾಂಡೇಟರಿ ಮಾಡಬೇಕು. ಇಲ್ಲಿ ತಾವು ಕ್ಲಾಸ್ ಇಟ್ಟುಕೊಂಡಿದ್ದೀರಿ. ಆದರೆ ಇದನ್ನು ಮಾಡಿದರೆ ಮಾಡಬಹುದು, ಬಿಟ್ಟರೆ ಬಿಡಬಹುದು. ಮೂವತ್ತು ವರ್ಷಗಳಷ್ಟು ಅವನ ಸೇವಾ ಅವಧಿ ಇದ್ದರೆ ಮೂರು ಸಾರಿ ವರ್ಗಾವಣೆ ಮಾಡತಕ್ಕಂಥ ಅವಕಾಶ ಇರಬೇಕು. ಅದನ್ನು ಸ್ವಲ್ಪ ಯೋಚನೆ ಮಾಡಿ. ಇದರಲ್ಲಿ ತಾವು ತಂದಿದ್ದೀರಿ -

Not withstanding anything contained in any contract, agreement or in any other law for the time being in force and the conditions of service applicable to the employees of the University, the Chancellor in consultation with the State Government may for administrative reasons transfer any employee to hold any post in the University.

ಅದರಲ್ಲಿ ನನ್ನ ಸಲಹೆ ಏನೆಂದರೆ - Employee shall be liable for transfer to any other University as 'an incidence of service'

ಎಂದು ಬರೆದರೆ ಅದು ಕಡ್ಡಾಯವಾಗುತ್ತದೆ, ಮತ್ತೆ ಮೂರು ಸಾರಿಯಾದರೂ ಮಾಡತಕ್ಕಂಥಾದ್ದು ಆಗುತ್ತದೆ.

ಅಧ್ಯಕ್ಷರು: ಮಾನ್ಯ ಸೋಮಶೇಖರ್‌ರವರೇ.......

ಶ್ರೀ ಬಿ.ಸೋಮಶೇಖರ್: ಇನ್ನು ಎರಡು ನಿಮಿಷದಲ್ಲಿ ಮುಗಿಸುತ್ತೇನೆ.

(ಗೊಂದಲ)

ಮಾನ್ಯ ಸದಸ್ಯರು: ಅಧ್ಯಕ್ಷರೇ, ತಾವು ಊಟ ತರಿಸುತ್ತೇನೆ ಎಂದು ಹೇಳಿದ್ದೀರಿ. ಆದ್ದರಿಂದ ನಮಗೆ ಏನೂ ಅಂಜಿಕೆ ಇಲ್ಲ. ಹತ್ತು ಗಂಟೆಯಾದರೂ ತೊಂದರೆ ಇಲ್ಲ.

ಅಧ್ಯಕ್ಷರು: ಹತ್ತು ನಿಮಿಷ ಎಂದು ಹೇಳಿದ್ದರು, ಆದರೆ ಎಲ್ಲಾ ಓದಿ ಹೇಳುತ್ತಿದ್ದಾರೆ. Usually members other than those who served on the Committee will be given preference. ಸದಸ್ಯರು ಕಮಿಟಿಯಲ್ಲಿ ಸರ್ವ್ ಮಾಡಿರುವುದರಿಂದ ಹೆಚ್ಚು ಮಾತನಾಡುವ ಅವಶ್ಯಕತೆ ಇಲ್ಲ.

ಶ್ರೀ ಬಿ.ಸೋಮಶೇಖರ್: ಆಮೇಲೆ Inter University Board ಎಂದು ತಾವು ತಂದಿದ್ದೀರಿ.

Board of Appointment of Examiner - it is Okay.

Inter-University Board - the Minister in charge of Higher Education is Chairman and Vice-Chancellors of all Universitties in the State are members. The Secretary to Government incharge of higher education is Member-Secretary. The Resolutions of the Inter-University Board should be mandatory.

ಅದು ಇದ್ದರೆ ಸಾಕು. ಏಕೆಂದರೆ, ಇದರಲ್ಲಿ ಎಲ್ಲಾ ಯೂನಿವರ್ಸಿಟಿ ವೈಸ್ ಚಾನ್ಸಲರುಗಳು ಇರುವಾಗ, ಅದನ್ನು ಮಾಡತಕ್ಕಂಥಾದ್ದು ಸೂಕ್ತ. ಕೊನೆಯದಾಗಿ ಇನ್ನೊಂದು ಸಲಹೆ ವೈಸ್ ಚಾನ್ಸಲರುಗಳನ್ನು ಅಪಾಯಿಂಟ್ ಮಾಡತಕ್ಕಂಥ ಸರ್ಚ್ ಕಮಿಟಿ ಇದೆ, ಆ ಸರ್ಚ್ ಕಮಿಟಿಯಲ್ಲಿ ಪ್ರಿನ್ಸಿಪಲ್ ಸೆಕ್ರಟರಿ ಎಂದು ಬೇಡಿ. Principal Secretary incharge of higher education or any officer not below the rank of a Deputy Secretary deputed by the Principal Secretary, who should be the convenor of the Search

Committee ಎಂದು ಮಾಡಿ. ವೈಸ್-ಚಾನ್ಸಲರನ್ನು ಅಪಾಯಿಂಟ್ ಮಾಡತಕ್ಕಂಥಾದ್ದು ಸಂಪೂರ್ಣವಾಗಿ ಸರ್ಕಾರವೇ ಇಟ್ಟುಕೊಳ್ಳುವುದರ ಬದಲಾಗಿ, "In consultation with the Government, Whether it is Chief Minister or Higher Education Minister, the Chancellor may select one among three members selected by the Search Committee. ಎಂದು ಮಾಡಿದರೆ ಸೂಕ್ತವಾಗುತ್ತದೆ. ಕೊನೆಯದಾಗಿ ಇನ್ನೊಂದು ವಿಚಾರವೆಂದರೆ ಸಂಪೂರ್ಣವಾಗಿ ಚುನಾವಣೆಯನ್ನು ರದ್ದು ಮಾಡಿದ್ದೀರಿ, ಅದಕ್ಕೆ ವೈಯಕ್ತಿಕವಾಗಿ ನಾನು ಸಂತೋಷಪಡುತ್ತೇನೆ. ಏಕೆಂದರೆ, ಸೆನೆಟ್‌ನಲ್ಲಿ ಮಾಡತಕ್ಕಂಥ ಚುನಾವಣೆಗಳ ರಾದ್ಧಾಂತವನ್ನು ನೋಡಿದರೆ, ಇವತ್ತು ಬೆಂಗಳೂರು ಯೂನಿವರ್ಸಿಟಿ ಇರಬಹುದು, ಬೇರೆ ಬೇರೆ ಯೂನಿವರ್ಸಿಟಿ ಇರಬಹುದು, ಸುಮಾರು ೧೦-೧೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ; ಅಲ್ಲಿಂದ ಪ್ರಾರಂಭವಾಗುತ್ತದೆ ಈ ರಾಜಕೀಯ. ಸೆನೆಟ್‌ನಿಂದ ಸಿಂಡಿಕೇಟ್‌ಗೆ ಬರಬೇಕಾದರೆ, ಅಲ್ಲಿಯೂ ಬೇಕಾದಷ್ಟು ಆಗುತ್ತದೆ. ಆ ದೃಷ್ಟಿಯನ್ನು ಇಟ್ಟುಕೊಂಡು ಇಲ್ಲಿ ಡಿಸಿಪ್ಲೀನ್ ತರಬೇಕೆಂದು ಚುನಾವಣೆಯನ್ನು ರದ್ದು ಮಾಡಿದ್ದೀರಿ ಮತ್ತು ಸೆನೆಟ್‌ಗಳನ್ನೂ ರದ್ದು ಮಾಡಿದ್ದೀರಿ ಸಂತೋಷ. ಆದರೆ ನನ್ನ ಸಲಹೆ ಏನೆಂದರೆ, ಸಂಪೂರ್ಣವಾಗಿ ರದ್ದು ಮಾಡುವುದಕ್ಕೆ ಬದಲಾಗಿ ಈ ಅಕಾಡೆಮಿಕ್ ಕೌನ್ಸಿಲ್ ಎಂದು ತಾವೇನು ಮಾಡಿದ್ದೀರಿ, ಈ ಅಕಾಡೆಮಿಕ್ ಕೌನ್ಸಿಲ್‌ನಿಂದ ಸಿಂಡಿಕೇಟ್‌ಗೆ ಬರಬೇಕಾದರೆ ಕೊನೆಯಪಕ್ಷ ೪-೫ ಜನರಾದರೂ ಚುನಾವಣೆಯಿಂದ ಬರತಕ್ಕಂಥ ಒಂದು ಪ್ರಾವಿಷನ್ ಮಾಡಿದರೆ ಅನುಕೂಲವಾಗುತ್ತದೆ. ಪ್ರಜಾಪ್ರಭುತ್ವದ ಒಂದು ಅಂಶವನ್ನೂ ಈ ಯೂನಿವರ್ಸಿಟಿ ಬಾಡಿಯಲ್ಲಿ ತಂದ ಹಾಗೆ ಆಗುತ್ತದೆ. ಎ.ಬಿ.ವಿ.ಪಿ.ಯವರು ಇರಬಹುದು ಮತ್ತು ಇನ್ನಿತರ ಅನೇಕ ವಿದ್ಯಾರ್ಥಿಗಳ ಸಂಘಟನೆಗಳು ಇವತ್ತೇನು ವಿರೋಧ ಮಾಡುತ್ತಿದ್ದಾರೆ ಅವರ ಅನಿಸಿಕೆಯನ್ನೂ ಗಮನದಲ್ಲಿಟ್ಟುಕೊಂಡ ಹಾಗೆ ಆಗುತ್ತದೆ. ಆದ್ದರಿಂದ, ಒಂದು ಹಂತಲ್ಲಾದರೂ ಚುನಾವಣೆಯನ್ನು ಇಟ್ಟುಕೊಂಡಾಗ ಅಷ್ಟೊಂದು ಅವ್ಯವಹಾರವಾಗುವುದಿಲ್ಲವೆಂದು ನನ್ನ ಸಲಹೆ. ಅಕಾಡೆಮಿಕ್ ಸೆನೆಟ್ ಎಂದು ಮಾಡಿದರೆ ಒಳ್ಳೆಯದು. ಏಕೆಂದರೆ, ಶ್ರೀ ನವನೀತರಾವ್ ಕಮಿಟಿಯವರು ಇದನ್ನು ಹೇಳಿರುವುದರಿಂದ, you are merging both the Senate and the Academic Council and in turn it can be called as "Academic-Senate". ಇದನ್ನು ತಾವು ಪ್ರಿಸ್ಟೀಜಾಗಿ ಇಟ್ಟುಕೊಳ್ಳದೆ, ಅಕಾಡೆಮಿಕ್ ಸೆನೆಟ್ ಎಂದು ಕೊಟ್ಟರೆ ಒಳ್ಳೆಯದು. ಇದು ನಮ್ಮ ಸಲಹೆ ಏನಲ್ಲ. ಶ್ರೀ ನವನೀತರಾವ್ ಕಮಿಟಿಯವರು ಕೊಟ್ಟಿರತಕ್ಕಂಥ ಒಂದು ಸಲಹೆಯನ್ನು ಅಳವಡಿಸಿಕೊಳ್ಳಬಹುದು. ಇಷ್ಟು ಸಲಹೆಗಳನ್ನು ಮಾನ್ಯ ಮಂತ್ರಿಗಳು ಒಪ್ಪುತ್ತಾರೆಂದು ಹೇಳಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಎನ್.ಯೋಗೀಶ್ ಭಟ್(ಮಂಗಳೂರು): ಸನ್ಮಾನ್ಯ ಅಧ್ಯಕ್ಷರೇ, ಒಂದು ವಿವರಣೆಯನ್ನು ಕೇಳುತ್ತೇನೆ. ಸನ್ಮಾನ್ಯ ಹಿರಿಯ ಸದಸ್ಯರು ಮಾತನಾಡತಕ್ಕ ಸಂದರ್ಭದಲ್ಲಿ ಹೇಳಿದರು, ಸೆನೆಟ್ ಚುನಾವಣೆ ನಡೆಯುವ ಸಂದರ್ಭದಲ್ಲಿ ಸಾಕಷ್ಟು ಅವ್ಯವಹಾರಗಳಾಗುತ್ತವೆ ಮತ್ತು ಆಗತಕ್ಕ ಲೋಪದೋಷಗಳ ಬಗ್ಗೆ ಹೇಳಿದರು. ಅದಕ್ಕೋಸ್ಕರ, ಈ ವ್ಯವಸ್ಥೆಯನ್ನು ರದ್ದು ಮಾಡಬೇಕೆಂದು ಹೇಳುವುದು ನನ್ನ ಮೂಲಭೂತ ಪ್ರಶ್ನೆ. ಇಲ್ಲಿರುವಂತಹ ಅಸೆಂಬ್ಲಿ ಸದಸ್ಯರು ಮತ್ತು ಆ ಮನೆಯಲ್ಲಿರುವಂತಹ ಎಂ.ಎಲ್.ಸಿಗಳು ಎಲ್ಲಾ ಕಡೆಗಳಲ್ಲಿ ಚುನಾವಣೆ ಹೇಗೆ ನಡೆಯುತ್ತಾ ಇದೆ, ಈ ಚುನಾವಣೆ ವ್ಯವಸ್ಥೆ ಬಗ್ಗೆ ವಿಶೇಷವಾದ ಚರ್ಚೆ ನಡೆಸಿ, ಅದನ್ನು ಹೇಗೆ ಸುಧಾರಣೆ ಮಾಡಬೇಕೆಂಬುದನ್ನು ಯೋಚನೆ ಮಾಡಬೇಕು. ಅದರಲ್ಲಿರುವಂತಹ ಲೋಪದೋಷಗಳಿಗೋಸ್ಕರ ಆ ಬಾಡಿಯನ್ನು ರದ್ದುಪಡಿಸಬೇಕೆಂದು ಹೇಳುವುದು ಯಾವ ರೀತಿಯಲ್ಲೂ ಸ್ವಾಗತಾರ್ಹ ಸಲಹೆಯಲ್ಲ. ಬೇರೆ ಕ್ಷೇತ್ರಗಳಲ್ಲೂ ಕೂಡ, ಸರ್ಕಾರದ ಯಾವುದೇ ಆಡಳಿತಾತ್ಮಕ ಕ್ಷೇತ್ರದಲ್ಲೂ ಕೂಡ ಯಶಸ್ವಿಯಾಗಿ ಕಾರ್ಯಾಚರಣೆ ಆಗಬೇಕೆಂದು ಹೇಳಿದರೆ ಜನರ ಸಹಭಾಗಿತ್ವದ ಅವಶ್ಯಕತೆ ಇದೆ. ಎಲ್ಲೆಲ್ಲಿ ಜನರ ಸಹಭಾಗಿತ್ವ ಯಶಸ್ವಿಯಾಗಿ ಸಿಗುತ್ತದೆಯೋ ಅಲ್ಲಿ ಭ್ರಷ್ಟಾಚಾರ ಹಾಗೂ ಇನ್ನಿತರ ವ್ಯವಸ್ಥೆಗಳು ಸುಧಾರಣೆಯಾಗಲಿಕ್ಕೆ ಸಾಧ್ಯತೆ ಉಂಟು. ಇಂತಹ ಸಂದರ್ಭದಲ್ಲಿ ನಾನೊಬ್ಬ ಸೆನೆಟ್ ಸದಸ್ಯನಾಗಿ, ನನ್ನ ಅನುಭವಗಳನ್ನು ಹೇಳುತ್ತಾ ಇದ್ದೇನೆ. ಯೂನಿವರ್ಸಿಟಿಯಲ್ಲಿ ನಾಮಿನೇಟೆಡ್ ಮೆಂಬರ್ಸ್ ಹೇಗಿರುತ್ತಾರೆ ಮತ್ತು ಚುನಾಯಿತ ಈ ಸೆನೆಟ್ ಮೆಂಬರ್ಸ್‌ಗಳು ಹೇಗಿರುತ್ತಾರೆಂದು ಹೇಳುವಂಥಾದ್ದು. ಪ್ರತಿಯೊಂದು ಲೋಪದೋಷಗಳನ್ನು ಗುರುತಿಸಿ, ಅದನ್ನು ಎತ್ತಿಕೊಂಡು, ಅದನ್ನು ಸರಿಪಡಿಸುವಂತಹ ಪ್ರಯತ್ನಗಳನ್ನು ಈ ಸೆನೆಟ್ ಸದಸ್ಯರು ಮಾಡುತ್ತಿರುತ್ತಾರೆ. ಸಹಜವಾಗಿ ಅನೇಕ ಆಬ್ಲಿಗೇಷನ್‌ಗಳಲ್ಲಿ ಕೂಡಿರುವಂತಹ ಈ ನಾಮಿನೇಟೆಡ್ ಸದಸ್ಯರು ಕಾರಣಾಂತರಗಳಿಂದ ಅನೇಕ ಸಂಗತಿಗಳನ್ನು ಎತ್ತುವುದಕ್ಕೆ ಆಗುವುದಿಲ್ಲ. ಇಂತಹ ಅನೇಕ ಸಂಗತಿಗಳು ಇರುವುದರಿಂದ, ಇಂತಹ ಸೆನೆಟ್ ವ್ಯವಸ್ಥೆ ಏನಿದೆ ಅದನ್ನು ಮುಂದುವರಿಸುವಂಥಾದ್ದು ಅತ್ಯಂತ ಅವಶ್ಯಕತೆ ಇದೆ. ಬಹುಶಃ ಈ ತರಹ ಸೆನೆಟ್ ವ್ಯವಸ್ಥೆಯನ್ನು ಮುಂದುವರಿಸುವ ಮೂಲಕ, ನಿಜವಾದ ಅರ್ಥದಲ್ಲಿ ವಿದ್ಯಾರ್ಥಿ ಕ್ಷೇತ್ರದಲ್ಲಿ ಕೂಡ ಒಂದು ಸಂದೇಶ ಕೊಡಲಿಕ್ಕೆ ಸಾಧ್ಯವಾಗುತ್ತದೆ. ಯುವಜನಾಂಗಕ್ಕೆ ನೇರವಾಗಿ ಭಾಗವಹಿಸುವ ಅವಕಾಶವನ್ನು ಮಾಡಿಕೊಟ್ಟ ಹಾಗೆ ಆಗುತ್ತದೆ. ಇನ್ನು ಎರಡನೆಯನಾಗಿ ಎಲ್ಲಾ ಕಡೆಗಳಲ್ಲಿ ನಾವು ಓಡಿತ ಇಡಲಿಕ್ಕೆ ಹೋದರೆ ಏನಾಗುತ್ತದೆಂಬುದಕ್ಕೆ ಒಂದು ಸಣ್ಣ ಉದಾಹರಣೆಯನ್ನು ಹೇಳುತ್ತೇನೆ. ಮಂಗಳೂರು ಯೂನಿವರ್ಸಿಟಿಗೆ ಸಂಬಂಧಪಟ್ಟ ಹಾಗೆ ಕೇಂದ್ರಸರ್ಕಾರದ ಯು.ಜಿ.ಸಿ ಗ್ರಾಂಟ್ ಆಧಾರದಲ್ಲಿ ಯೋಗ ಶಿಕ್ಷಣ ಮತ್ತು ಅದಕ್ಕೆ ಸಂಬಂಧಪಟ್ಟ ಫ್ಯಾಕಲ್ಟಿಯನ್ನು ಆರಂಭ ಮಾಡಿದ್ದೆವು. ಇದಕ್ಕೆ ಕನ್ಸೆಂಟ್ ತೆಗೆದುಕೊಳ್ಳುವುದಕ್ಕೆ ಬಹುಶಃ ಒಂದು-ಒಂದೂವರೆ

ವರ್ಷದಿಂದ ರಾಜ್ಯಸರ್ಕಾರದಲ್ಲಿ ಸಾಕಷ್ಟು ಪ್ರಯತ್ನಪಟ್ಟಿವು. ಈ ಕಾನೂನು ಪಾಸಾಗದೇ, ಹೀಗಿರುವಂತಹ ಹಿಡಿತದಲ್ಲೇ ಎಷ್ಟು ಬವಣೆ ಪಡಬೇಕಾಯಿತು ಎಂಬ ಹಿನ್ನಲೆಯಲ್ಲಿ ನಾನು ಹೇಳುತ್ತಿದ್ದೇನೆ. ಪ್ರತಿಯೊಂದು ಕನ್‌ಸೆಂಟಗೂ ನಾವು ಇಲ್ಲಿಗೆ ಬರಬೇಕಾಗಿದೆ. ಬಿ.ಸಿ.ಎ.ಗೆ ಸಂಬಂಧಪಟ್ಟಂತೆ ನಾನಾಗಲೇ ಹೇಳಿದೆ. ಯೂನಿವರ್ಸಿಟಿಯಲ್ಲಿ ಹೊಸ ಹೊಸ ಫ್ಯಾಕಲ್ಟಿಗಳನ್ನು ಮಾಡಿಕೊಂಡು, ಅದು ಫ್ಯಾಷನ್ ಟೆಕ್ನಾಲಜಿ ಇರಬಹುದು, ಅಪರಾಧ ಪತ್ತೆಗೆ ಸಂಬಂಧಪಟ್ಟಂಥಾದ್ದು ಇರಬಹುದು, ಹೀಗೆ ಬೇರೆ ಬೇರೆ ರೀತಿಯಲ್ಲಿ ಫ್ಯಾಕಲ್ಟಿಗಳನ್ನು ತಂದಿರುವಂತಹ ಸಂದರ್ಭದಲ್ಲೂ ಕೂಡ ಅದರ ಬಗ್ಗೆ ಮೂಲಭೂತ ಸೌಕರ್ಯಗಳು ಇದೆಯೇ ಇಲ್ಲವೇ ಎಂಬುದನ್ನು ಗಮನಿಸಬೇಕು. ಮೂಲಭೂತ ಸೌಕರ್ಯಗಳು ಆಯಾ ಕಾಲೇಜುಗಳಲ್ಲಿ ಇದೆಯೆಂದು ಹೇಳಿದ ನಂತರ, ಮತ್ತು ಯೂನಿವರ್ಸಿಟಿ ಶಿಫಾರಸ್ ಆದ ನಂತರವೂ ಕೂಡ ಅನುಮತಿ ಕೊಡಲಿಕ್ಕೆ ಏಕೆ ಮೀನಾಮೇಷ ಮಾಡುತ್ತಾರೆ? ಕೆಲವೊಂದಕ್ಕೆ ಅನುಮತಿ ಕೊಡದೇ ಇರುವಂತಹ ದುಸ್ಥಿತಿ ಬಂದಿರುವ ಹಿನ್ನಲೆಯಲ್ಲಿ, ಇದು ಅವಶ್ಯಕತೆ ಇದೆಯೇ ಎಂದು ಹೇಳುವಂಥಾದ್ದು. ಇವರು ಕಾನೂನು ತಂದಿರುವಂತಹ ಹಿನ್ನಲೆಯಲ್ಲಿ, ಒಂದು ಅರ್ಥದಲ್ಲಿ ನಾನು ಅದನ್ನು ಸ್ವಾಗತ ಮಾಡುತ್ತಿದ್ದೆ. ಬಹುಶಃ ಇದರಲ್ಲಿ ಇನ್ನೂ ಸ್ವಲ್ಪ ಬದಲಾವಣೆಗಳನ್ನು ತರುವುದಕ್ಕೆ ಪ್ರಯತ್ನ ಮಾಡಬೇಕು. ಇವತ್ತು ಶಿಕ್ಷಣ ಕ್ಷೇತ್ರ ವ್ಯಾಪಾರಿ ಕ್ಷೇತ್ರ ಆಗುತ್ತಾ ಇದೆ. ಬೇರೆ ಎಲ್ಲಾ ಕ್ಷೇತ್ರಗಳಿಗಿಂತ ಆಕರ್ಷಣೀಯವಾದ ಮತ್ತು ಧನ ಸಂಪಾದನೆಯ ಒಳ್ಳೆಯ ಕ್ಷೇತ್ರವಾಗಿದೆ. ಈ ನಿಟ್ಟಿನಲ್ಲಿ ಶಿಕ್ಷಣ ಕ್ಷೇತ್ರ ಇವತ್ತು ಎಲ್ಲಾ ತರಹದ ಮೌಲ್ಯಗಳನ್ನು ಅಪಮೌಲ್ಯ ಮಾಡತಕ್ಕ ಕ್ಷೇತ್ರವಾಗಿ ಬೆಳೆಯುತ್ತಾ ಇದೆ. ಇಂತಹ ಸಂದರ್ಭದಲ್ಲಿ ಅದಕ್ಕೆ ತಿದ್ದುಪಡಿ ತಂದು ಕಡಿವಾಣ ಹಾಕುವುದಕ್ಕೆ ತಾವೇನಾದರೂ ಯೋಚನೆ ಮಾಡಬೇಕು ಮತ್ತು ಅಂತಹ ತಿದ್ದುಪಡಿಗಳನ್ನು ಇಲ್ಲಿ ತಂದಿದ್ದರೆ, ಅದು ಸ್ವಾಗತಾರ್ಹ ಬೆಳವಣಿಗೆಯಾಗುತ್ತಿತ್ತು. ಬಹುಶಃ ಇದರಲ್ಲಿ ಯಾವುದೇ ರೀತಿಯ ಚಿಂತನೆ ಆಗಿಲ್ಲ. ಸಮಾಜದ ಸಮಸ್ಯೆಗಳಿಗೆ ಸ್ಪಂದಿಸುವ ನಿಟ್ಟಿನಲ್ಲಿ, ವಿಶ್ವವಿದ್ಯಾನಿಲಯಗಳು, ಕಾಲೇಜುಗಳಲ್ಲಿ ಇರತಕ್ಕಂಥ ಶಿಕ್ಷಣ ವ್ಯವಸ್ಥೆಯಲ್ಲಿ ಬದಲಾವಣೆ ತರಬೇಕೆಂಬ ಚಿಂತನೆಯಾದರೂ ಇದರಲ್ಲಿ ಪ್ರತಿಬಿಂಬಿತವಾಗಿದ್ದರೆ ಅದನ್ನು ಸ್ವಾಗತ ಮಾಡಬಹುದಿತ್ತು. ಈ ಸಂದರ್ಭದಲ್ಲಿ ನಾನು ಎರಡು ಮುಖ್ಯ ಅಂಶಗಳನ್ನು ಹೇಳಬಯಸುತ್ತೇನೆ. ಸೆನೆಟ್ ವ್ಯವಸ್ಥೆಯನ್ನು ದಯಪಟ್ಟು ರದ್ದುಪಡಿಸಬೇಡಿ. ಯಾವುದೇ ಕಾರಣಕ್ಕೆ ರಾಜ್ಯಪಾಲರ ಸ್ಥಾನಮಾನವನ್ನು, ವೈಸ್‌ಚಾನ್ಸಲರ್‌ಗಿಂತ ಕಡಿಮೆಗೊಳಿಸುವಂತಹ ವ್ಯವಸ್ಥೆ ಮಾಡಬೇಡಿ. ಅವರ ಸ್ಥಾನಮಾನಗಳನ್ನು ಉಳಿಸಿಕೊಂಡು, ಅವರಿಗೆ ಗೌರವವನ್ನು ಕೊಡುವ ನಿಟ್ಟಿನಲ್ಲಿ, ಸೂಕ್ತ ರೀತಿಯ ತಿದ್ದುಪಡಿಯನ್ನು ತರಬೇಕೆಂದು ವಿನಂತಿ ಮಾಡುತ್ತಿದ್ದೇನೆ. ಸೆಕ್ಷನ್ ೭೧ರಲ್ಲಿ ಕರ್ನಾಟಕ ರಾಜ್ಯ ಅಂತರ ವಿಶ್ವವಿದ್ಯಾಲಯಗಳ ಸಮಿತಿಯಲ್ಲಿ ರಾಜ್ಯಪಾಲರಿಗೆ ಯಾವುದೇ ಪಾತ್ರವಿಲ್ಲ. ಆದರೆ, ಅವರು ಎಲ್ಲಾ ವಿಶ್ವ ವಿದ್ಯಾಲಯಗಳ

ಕುಲಪತಿಗಳಾಗಿರುತ್ತಾರೆ. ಉನ್ನತ ಶಿಕ್ಷಣ ಸಚಿವರ ಅಧ್ಯಕ್ಷ ಸ್ಥಾನದಲ್ಲಿ ಎಲ್ಲಾ ಆಗುತ್ತೆ. ಅವರಿಗೆ ಏನು ಮಾನ್ಯತೆ ಇರುತ್ತದೆ ಅಂಥಾದ್ದರ ಬಗ್ಗೆ ತಿದ್ದುಪಡಿಯನ್ನು ತರತಕ್ಕಂಥಾದ್ದು ಅವಶ್ಯಕತೆ ಇದೆ. ಇದರ ಬಗ್ಗೆ ತಾವು ಪುನರ್ ವಿಮರ್ಶೆಯನ್ನು ಮಾಡಬೇಕು. ಒಳ್ಳೆಯ ಅಂಶಗಳನ್ನು ಸೇರಿಸುವುದಕ್ಕೆ ಸಾಧ್ಯವಿದ್ದರೆ, ಖಂಡಿತಾ ಅದನ್ನು ಸೇರಿಸಬೇಕು. ಜನರ ಆಶೋತ್ತರಗಳಿಗೆ ಸ್ಪಂದಿಸುವ ನಿಟ್ಟಿನಲ್ಲಿ, ಸಮಾಜಕ್ಕೆ ಹೆಚ್ಚು ಸ್ಪಂದಿಸುವ ನಿಟ್ಟಿನಲ್ಲಿ ಶಿಕ್ಷಣ ಪದ್ಧತಿಯನ್ನು ತರುವ ಬಗ್ಗೆ ವಿಶೇಷ ಪ್ರಯತ್ನಗಳನ್ನು ತಾವು ಮಾಡಿದಲ್ಲಿ ಅದು ಸ್ವಾಗತಾರ್ಹವಾಗುತ್ತದೆಂಬ ಮಾತನ್ನು ಹೇಳಿ ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ.

+ ಶ್ರೀ ಎಸ್.ಎಸ್.ಪಾಟೀಲ್(ಮುಂಡರಗಿ): ಮಾನ್ಯ ಅಧ್ಯಕ್ಷರೆ, ಮೊದಲಿನಿಂದಲೂ ನಾವು ಈ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಒಪ್ಪಿಕೊಂಡು ಬಂದಿದ್ದೇವೆ. ದೇಶಕ್ಕೆ ಸ್ವಾತಂತ್ರ್ಯ ಬಂದ ನಂತರ ಈ ದೇಶಕ್ಕೆ ಯಾವ ವ್ಯವಸ್ಥೆ ಬೇಕೆಂಬ ಬಗ್ಗೆ ಚಿಂತನೆ ನಡೆದು ಕೊನೆಗೆ ಈ ದೇಶಕ್ಕೆ ಪ್ರಜಾಪ್ರಭುತ್ವ ವ್ಯವಸ್ಥೆ ಬೇಕೆಂದು ಒಪ್ಪಿಕೊಂಡು ಬಂದಿದ್ದೇವೆ. ನಾನು ಹಿಂದೆಯೂ ಇದರ ಮೇಲೆ ಮಾತನಾಡುವಾಗ ಹೇಳಿದ್ದೆ. ಕರ್ನಾಟಕ ಯೂನಿವರ್ಸಿಟಿಯಲ್ಲಿ ಚುನಾಯಿತ ವೈಸ್-ಚಾನ್ಸಲರ್ ಇದ್ದರು. ನನಗೆ ತಿಳಿದಮಟ್ಟಿಗೆ ಶ್ರೀ ಪಾವಟೆಯವರು, ತದನಂತರ ಶ್ರೀ ಅಡ್ಕೆಯವರು ಕೊನೆಯ ವೈಸ್ ಚಾನ್ಸಲರ್ ಆಗಿದ್ದರು. ಆ ಘನತೆ, ಆ ಗೌರವ ನೋಡಿದರೆ, ಒಬ್ಬ ರಾಜ್ಯಪಾಲರ ಲೆವಲ್ ಇರತಕ್ಕಂಥ ವೈಸ್ ಚಾನ್ಸಲರ್, ಇವತ್ತು ನಾಮಿನೇಷನ್ ಎಂದ ಕೂಡಲೇ ಯಾರ ಯಾರ ಹತ್ತಿರ ಅಡ್ಡಾಡಬೇಕು. ಅಯ್ಯೋ ಅದನ್ನು ನೋಡಬಾರದು. ಅದು ಕರ್ಮ. ನಿಜವಾಗಿಯೂ ನಾವು ಅದನ್ನು ನೋಡಿದ್ದೇವೆ. ಅದರಿಂದ ಬಹಳ ಅನ್ಯಾಯವಾಗುತ್ತದೆ. ಇದನ್ನು ರಾಜ್ಯಪಾಲರಿಗೆ ಕೊಡುವುದೂ ತಪ್ಪು, ಸರ್ಕಾರ ಇಟ್ಟುಕೊಳ್ಳುವದೂ ತಪ್ಪು. ನಾವು ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಒಪ್ಪಿಕೊಂಡು ಬಂದಿರುತ್ತೇವೆ. ನೀವು ಬೇಕಾದರೆ ಕರ್ನಾಟಕ ಯೂನಿವರ್ಸಿಟಿಯಿಂದ ಎಲ್ಲಾ ವಿವರವಾದ ಮಾಹಿತಿ ತರಿಸಿ. ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಹಿಂದೆ ಹೇಗಿತ್ತು ಎಂಬ ಬಗ್ಗೆ ಮಾಹಿತಿ ತರಿಸಿ. ಆ ರೀತಿ ಚುನಾವಣೆಯ ವ್ಯವಸ್ಥೆ ಮೇಲೆ ಎಲ್ಲವನ್ನೂ ತರುವ ವ್ಯವಸ್ಥೆ ಮಾಡಬೇಕು. ಪ್ರಜಾಪ್ರಭುತ್ವದಲ್ಲಿ ಬಹಳ ವಿಶ್ವಾಸವಿದ್ದಂಥ ಪಕ್ಷ ಇವತ್ತು ಅಧಿಕಾರಕ್ಕೆ ಬಂದಿದೆ. ಆ ಪ್ರಜಾಪ್ರಭುತ್ವದ ಅನುಸಾರ ಚುನಾವಣೆಯ ಮೂಲಕ ಎಲ್ಲವನ್ನೂ ಮಾಡುತ್ತೇವೆಂದು ತಾವು ಹೇಳಿದರೆ ಇವತ್ತೇ ನಾವು ಅದಕ್ಕೆ ಒಪ್ಪಿಗೆ ಕೊಟ್ಟೇಬಿಡುತ್ತೇವೆ. ಉಪಕುಲಪತಿಯವರು ಖಂಡಿತವಾಗಿ ಚುನಾಯಿತ ಪ್ರತಿನಿಧಿಯಾಗಿರಬೇಕು. ದಯವಿಟ್ಟು ಇದನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇಲ್ಲಿ ಉಪಕುಲಪತಿಗಳಿಗೆ ೬೫ ವರ್ಷ ವಯಸ್ಸನ್ನು ಇಟ್ಟಿದ್ದೀರಿ. ಏಕೆ ಇಟ್ಟಿದ್ದೀರಿ? ಯಾರಿಗೂ ಇಲ್ಲದನ್ನು ಇವರಿಗೇಕೆ ತರುತ್ತೀರಿ? ಅನುಭವ ಜಾಸ್ತಿಯಾದಂತೆಲ್ಲಾ

ವಯಸ್ಸಾದಂತೆಲ್ಲಾ ಜ್ಞಾನ ಜಾಸ್ತಿಯಾಗುತ್ತದೆ ನಿಜ. ಆದರೆ ಇವರಿಗೇಕೆ ವಯಸ್ಸಿನ ಮಿತಿಯನ್ನು ಇಡುತ್ತೀರಿ? ಇದನ್ನು ತೆಗೆದುಬಿಡಿ. ಅನಂತರ ಮಾನ್ಯ ಸೋಮಶೇಖರ್‌ರವರು ಹೇಳಿರುವಂತೆ ಉಪಕುಲಪತಿಯವರ ಅವಧಿಯನ್ನು ಒಂದೇ ಟರ್ಮ್ ಮತ್ತು ಐದು ವರ್ಷ ಎಂದು ಮಾಡಿಬಿಡಿ. ಮೂರು ವರ್ಷ ಬಹಳ ಕಡಿಮೆ ಅವಧಿಯಾಗುತ್ತದೆ. ಆದ್ದರಿಂದ, ಇದನ್ನು ಐದು ವರ್ಷ ಮಾಡಿ. ಈ ಮೂರು ಸಲಹೆಗಳನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಡಿ.ವಿ.ಸದಾನಂದಗೌಡ(ಪುತ್ತೂರು): ಮಾನ್ಯ ಅಧ್ಯಕ್ಷರೆ, ನಾನು ಯಾವುದೇ ಸೆಕ್ಷನ್‌ಗಳ ಬಗ್ಗೆ ಮಾತನಾಡಲು ಹೋಗುವುದಿಲ್ಲ. ಇಲ್ಲಿ ತಮ್ಮ ಜೊತೆ ಯಾವುದೇ ಬಿಲ್ಲಿನ ಬಗ್ಗೆ ಮಾತನಾಡುವುದು ಗಾಳಿಯ ಜೊತೆ ಗುದ್ದಾಟ ಮಾಡುವುದು ಎರಡೂ ಒಂದೇ. ಏಕೆಂದರೆ, ಅದರ ಪ್ರಾರಂಭಿಕ ಹಂತದಿ,ದ ರಿಪೀಲ್ಸ್ ಅಂಡ್ ಸೇವಿಂಗ್ಸ್‌ವರೆಗೆ ಏನೆಲ್ಲಾ ಇದೆ ಅದರಲ್ಲಿ ಯಾವುದೇ ಬದಲಾವಣೆಗಳನ್ನು ಯಾವುದೇ ಸಂದರ್ಭದಲ್ಲಿ ಮಾಡಲು ಇದುವರೆಗೆ ತಾವು ಒಪ್ಪಿಕೊಂಡಿಲ್ಲ. ಸದನದ ಸಮಯವನ್ನು ವ್ಯಯ ಮಾಡುವ ಕೆಲಸವಾಗುತ್ತಿದೆಯೆಂದು ಭಾವಿಸುತ್ತೇನೆ. ಈ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಹಿಂದಿನ ಲಕೋಟೆ ಪ್ರಕರಣಗಳನ್ನು, ನಾಮಕರಣ ಪ್ರಕರಣಗಳನ್ನೆಲ್ಲಾ ಬಿಡುತ್ತೀರೆಂದು ನನಗೆ ವಿಶ್ವಾಸವಿತ್ತು. ರಾಜಕೀಯ ಹಸ್ತಕ್ಷೇಪವನ್ನು ದೂರ ಮಾಡುತ್ತೀರಿ ಎಂಬ ವಿಶ್ವಾಸವಿತ್ತು. ಆದರೆ ಈಗ ಪ್ರತಿಯೊಂದರಲ್ಲೂ ರಾಜಕೀಯ ಹಸ್ತಕ್ಷೇಪ ಮಾಡುವ ಪ್ರಯತ್ನಗಳಾಗಿದೆ. ಜಂಟಿ ಸಲಹಾ ಸಮಿತಿಯಲ್ಲಿ ಹಲವಾರು ಪ್ರಮುಖರನ್ನು ಕರೆದು ಅವರ ಸಲಹೆಗಳನ್ನು ಪಡೆಯುವ ಪ್ರಯತ್ನ ಮಾಡಿದ್ದಾರೆ. ಅವರುಗಳು ಏನು ಸಲಹೆ ಸೂಚನೆಗಳನ್ನು ಕೊಟ್ಟಿದ್ದಾರೋ ಗೊತ್ತಿಲ್ಲ. ಆದರೆ ಹೊರಗಡೆ ಬಂದು ಈ ಬಿಲ್ಲಿನ ವಿರುದ್ಧವಾಗಿ ಮಾತನಾಡುವುದನ್ನು ಪತ್ರಿಕೆಗಳಲ್ಲಿ ನಾವು ನೋಡಿದ್ದೇವೆ. ತಾವೇನು ಪ್ರಮುಖ ವ್ಯಕ್ತಿಗಳನ್ನು ಕರೆದು ಮಾತನಾಡಿದ್ದೀರಿ, ಅವರ ಸಲಹೆ ಸೂಚನೆಗಳೇನನ್ನು ಸ್ವೀಕಾರ ಮಾಡಿದ್ದೀರಿ ಎಂಬುದು ನಮಗೆ ಗೊತ್ತಾಗುತ್ತಿಲ್ಲ. ಸೆಕ್ಷನ್ ೮೬ರವರೆಗೆ ಯಾವುದಾದರೂ ಸೆಕ್ಷನ್‌ನಲ್ಲಿ ಏನಾದರೂ ಸೇರಿಸಿದ್ದೀರಾ ಯಾವುದನ್ನಾದರೂ ಬಿಟ್ಟಿದ್ದೀರಾ ಎಂಬ ಬಗ್ಗೆ ಹೇಳಬೇಕು. ಸರ್ಕಾರದ ಹಸ್ತಕ್ಷೇಪ ವಿದ್ಯಾಕ್ಷೇತ್ರದಲ್ಲಾಗಬೇಕು ಎಂಬ ಏಕೈಕ ಉದ್ದೇಶದಿಂದ ನೇಮಕಾತಿ, ನಾಮಿನೇಷನ್ಸ್, ಸಿಬ್ಬಂದಿಯ ನೇಮಕ ಮಾಡುವವರೆಗೆ ಸರ್ಕಾರದ ಪ್ರತಿನಿಧಿಗಳನ್ನು ಇಡುವ ಪ್ರಯತ್ನಗಳನ್ನು ಮಾಡಿದ್ದೀರಿ.

ಡಾ: ಭಾರತಿಶಂಕರ್ (ಟಿ.ನರಸೀಪುರ): ತಮ್ಮ ಕೇಂದ್ರ ಸರ್ಕಾರ ಸಂವಿಧಾನವನ್ನೇ ತಿದ್ದುಪಡಿ ಮಾಡಲು ಹೊರಟಿದ್ದೀರಲ್ಲಾ!

ಶ್ರೀ ಎ.ಮಂಜು (ಅರಕಲಗೂಡು): ಮಾನ್ಯ ಅಧ್ಯಕ್ಷರೆ, ಮಾನ್ಯ

ಸದಾನಂದಗೌಡರು ಮಾತನಾಡುತ್ತಾ, ಜಂಟಿ ಸಲಹಾ ಸಮಿತಿಯಲ್ಲಿ ಹಲವಾರು ಮಹನೀಯರನ್ನು ಕರೆಸಿ ಮಾತನಾಡಿದ್ದಾರೆ, ಅವರು ಏನು ಹೇಳಿದ್ದಾರೆ ಎಂಬುದು ನಮಗೆ ಗೊತ್ತಿಲ್ಲವೆಂದು ಹೇಳಿದರು. ಜಂಟಿ ಸಲಹಾ ಸಮಿತಿಯಲ್ಲಿ ತಮ್ಮ ಪಕ್ಷದವರನ್ನೂ ಸದಸ್ಯರನ್ನಾಗಿ ಮಾಡಿದ್ದಾರಲ್ಲಾ ಅವರ ಮುಂದಿಟ್ಟೇ ತೀರ್ಮಾನ ಮಾಡಿರುವುದು. ತಾವು ಸರ್ಕಾರವೇನು ನಡೆಸುತ್ತಿದ್ದೀರಿ ಅಲ್ಲಿ ಸಂವಿಧಾನವನ್ನೇ ತಿದ್ದುಪಡಿ ಮಾಡಲು ಹೊರಟಿರುವಾಗ ಅದಕ್ಕಿಂತ ಇದು ಕಡೆಯೇನು?

ಶ್ರೀ ಡಿ.ವಿ.ಸದಾನಂದಗೌಡ: ಎಲ್ಲಿಯೂ ಸಲ್ಲದವರು ಕೆಲವರು ಇದ್ದಾರೆ ಈ ಸಮಾಜದಲ್ಲಿ. ಏನೇನೋ ಸ್ಥಾನಗಳನ್ನು ಪಡೆದುಕೊಂಡು ಬಂದು ಎಲ್ಲಿಯೂ ಸಲ್ಲದಿದ್ದಾಗ ಏನೆಲ್ಲಾ ಮಾತನಾಡುವವರಿದ್ದಾರೆ. ಈ ರೀತಿ ಮನುಷ್ಯರು ಮಾತನಾಡತಕ್ಕದ್ದರ ಬಗ್ಗೆ ಮಾನ್ಯ ಕಾಗೋಡು ತಿಮ್ಮಪ್ಪನವರಿಗೆ ಗೊತ್ತಿದೆ.

ಅಧ್ಯಕ್ಷರು: ತಾವು ವಿಚಾರಕ್ಕೆ ಬನ್ನಿ.

ಶ್ರೀ ಎಸ್.ಸುರೇಶ್‌ಕುಮಾರ್: ಯಾರು ಸರಿಯಾಗಿ ಮಾತನಾಡುತ್ತಾರೋ ಅವರನ್ನೇ ಕಂಟ್ರೋಲ್ ಮಾಡುತ್ತೀರಿ, ಯಾರು ಮಧ್ಯೆ ಮಧ್ಯೆ ಮಾತನಾಡುತ್ತಾರೋ ಅವರನ್ನು ಕಂಟ್ರೋಲ್ ಮಾಡುವುದಿಲ್ಲ.

ಅಧ್ಯಕ್ಷರು: ಅವರನ್ನೂ ಮಾಡುತ್ತೇನೆ.

ಶ್ರೀ ಡಿ.ವಿ.ಸದಾನಂದಗೌಡ: ಹಲವಾರು ಸಂದರ್ಭಗಳಲ್ಲಿ ಯಾವುದಾದರೂ ತಿದ್ದುಪಡಿಯನ್ನು ಮಾಡಬೇಕೆಂದು ತಾವು ಹೇಳಿದರೆ, ಇದನ್ನು ಪೂರ್ತಿ ಕೈಬಿಡಬೇಕು ಎಂಬುದು ನಮ್ಮ ಸಲಹೆಯಾಗಿದೆ. ಆ ರೀತಿಯ ಪರಿಸ್ಥಿತಿಯಾಗಿದೆ. ಒಳ್ಳೆಯ ವಿಚಾರಗಳು ಇಲ್ಲವೆಂದು ನಾನು ಹೇಳುತ್ತಿಲ್ಲ. ರಾಜ್ಯಪಾಲರಿಗೆ ಸಂವಿಧಾನದತ್ತವಾದಂಥ ಇರುವ ಗೌರವಕ್ಕೆ ಚ್ಯುತಿಯನ್ನು ತರಬಾರದು, ಆ ರೀತಿ ಯಾವುದೇ ಕೆಲಸ ಸರ್ಕಾರದಿಂದ ಆಗಬಾರದು, ರಾಜ್ಯಪಾಲರಿಗೆ ಇರುವಂಥ ಗೌರವವನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಏನೆಲ್ಲಾ ಹಸ್ತಕ್ಷೇಪ ಮಾಡುವಂತಹ ವ್ಯವಸ್ಥೆಗಳನ್ನು ಈ ಕಾನೂನಿನಲ್ಲಿ ತಿದ್ದುಪಡಿ ರೂಪದಲ್ಲಿ ತಂದಿದ್ದೀರಿ, ಅದನ್ನೆಲ್ಲಾ ಕೈಬಿಡಬೇಕೆಂಬ ಆಗ್ರಹವನ್ನು ನಾನು ಮಾಡಬಯಸುತ್ತೇನೆ. ಸರ್ಕಾರದಿಂದ ಕೆಲವರನ್ನು ನಾಮಕರಣ ಮಾಡಬೇಕೆಂದಿದ್ದೀರಿ. ಆ ರೀತಿ ಮಾಡುವ ಸಂದರ್ಭದಲ್ಲೂ ವಿದ್ಯಾ ಕ್ಷೇತ್ರದಲ್ಲಿ ಸ್ವಲ್ಪಮಟ್ಟಿಗೆ ವಿಶೇಷವಾಗಿ ಮಾಡಲು ಸಾಧ್ಯವಿದ್ದರೆ ಅಂತವರನ್ನು ನಾಮಕರಣ ಮಾಡಬೇಕೆಂದಿದ್ದರೂ ರಾಜಕೀಯಕರಣವಾಗುತ್ತದೆ ಎಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಅದನ್ನು ಮಾಡಬಾರದು ಎಂಬುದು ನಮ್ಮ ವಿನಂತಿ. ಇಲ್ಲಿ ಕೆಲವು ಸೆಕ್ಷನ್‌ಗಳ ಬಗ್ಗೆ ಇತರರು ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ.

ಅದೇ ಪುನರಾವರ್ತನೆಯಾಗಬಾರದೆಂದು ನಾನು ಹೆಚ್ಚು ಹೇಳಲು ಹೋಗುವುದಿಲ್ಲ. ಸೆಕ್ಷನ್ ೮ ರಿಂದ ೧೪ರವರೆಗೆ ಓದಿದರೆ ನೇರವಾಗಿ ರಾಜಕೀಯ ಪಕ್ಷದಿಂದಲೇ ವಿಶ್ವವಿದ್ಯಾನಿಲಯಗಳನ್ನು ನಡೆಸತಕ್ಕ ತೀರ್ಮಾನಕ್ಕೆ ತಾವೆಲ್ಲರೂ ಬಂದಂತೆ ಕಾಣುತ್ತದೆ. ಇದು ಸರಿಯಾಗಿ ಕಾಣುವುದಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ತಾವು ಆ ರೀತಿ ಹೇಳಬಾರದು. ಆ ರೀತಿ ನೋಡಿದರೆ, ತಮಿಳುನಾಡಿನಲ್ಲಿ ರಾಜ್ಯಪಾಲರು ಸಂವಿಧಾನಾತ್ಮಕವಾಗಿ ನಡೆದುಕೊಂಡರೆ ಕೇಂದ್ರದ ತಮ್ಮ ಸರ್ಕಾರ ಅವರ ರಾಜೀನಾಮೆ ತೆಗೆದುಕೊಂಡಿತು. ಇವತ್ತು ರಾಜ್ಯಪಾಲರು ಯಾರ ಹೆಸರಿನಲ್ಲಿ, ಯಾರ ಶಿಫಾರಸ್ಸಿನಲ್ಲಿ ನೇಮಕವಾಗುತ್ತಾರೆ? ಭಾರತ ಸರ್ಕಾರದವರು ರಾಷ್ಟ್ರಾಧ್ಯಕ್ಷರಿಗೆ ಹೆಸರನ್ನು ಕಳುಹಿಸಿ ಇಂಥವರಿಗೇ ರಾಜ್ಯಪಾಲರನ್ನಾಗಿ ಮಾಡಬೇಕೆಂದು ಹೇಳುತ್ತಾರೆ. ರಾಜ್ಯಪಾಲರ ಸ್ಥಾನಕ್ಕೆ ಚ್ಯುತಿ ತರಬೇಕು ಎಂಬುದು ನಮ್ಮ ಉದ್ದೇಶವಲ್ಲ. ಆದರೆ ತಮಿಳುನಾಡಿನಲ್ಲಿ ನಡೆದಿದ್ದೇನು? ತಾವು ಅದನ್ನು ಮಾತ್ರ ಒಂದು ಕಡೆ ಇಟ್ಟಿರಿ, ಆದರೆ ಇಂಥ ಪ್ರೋಗ್ರೆಸಿವ್ ಬಿಲ್ಲನ್ನು ನಿಮ್ಮ ಮುಂದಿಟ್ಟರೆ ಅದಕ್ಕೆ ಚುಚ್ಚಿ ಚುಚ್ಚಿ ಮಾತನಾಡುತ್ತಿದ್ದೀರಿ. ಸಿಂಡಿಕೇಟ್ ಚುನಾವಣೆಯ ಬಗ್ಗೆ ಮಾನ್ಯ ಯೋಗೇಶ್ ಭಟ್‌ರವರು ಹೇಳಿದರು. ಕೃಷಿ ವಿಶ್ವವಿದ್ಯಾನಿಲಯ, ವಿಶ್ವೇಶ್ವರರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯ, ರಾಜೀವ್‌ಗಾಂಧಿ ವಿಶ್ವವಿದ್ಯಾನಿಲಯ ಇಲ್ಲಿ ಚುನಾವಣೆಗಳು ಇದೆಯೇ? ಜನರಲ್ ವಿಶ್ವವಿದ್ಯಾನಿಲಯಕ್ಕೇಕೆ ತಾವು ಗಂಟು ಬಿದ್ದಿದ್ದೀರಿ?

ಶ್ರೀ ಡಿ.ವಿ.ಸದಾನಂದಗೌಡ: ಮಾನ್ಯ ಖರ್ಗೆಯವರು ಮಾತನಾಡಿದ ವಿಚಾರದ ಬಗ್ಗೆ ನಾನು ಹೆಚ್ಚು ಮಾತನಾಡುವುದಿಲ್ಲ.

ಶ್ರೀ ಜಗದೀಶ್ ಶೆಟ್ಟರ್(ವಿರೋಧ ಪಕ್ಷದ ನಾಯಕರು): ತಮಿಳುನಾಡಿನಲ್ಲಿ ರಾಜ್ಯಪಾಲರು ಹೇಗೆ ನಡೆದುಕೊಂಡರು? ಅದಕ್ಕೆ ಕೇಂದ್ರ ಸರ್ಕಾರ ಹೇಗೆ ನಡೆದುಕೊಂಡಿತು ಎಂಬುದರ ಬಗ್ಗೆ ಚರ್ಚೆ ಮಾಡಲು ಇದು ವೇದಿಕೆಯಲ್ಲ. ಹಾಗೆ ಮಾಡಿದರೆ ಕಾಂಟ್ರವರ್ಶಿಯಾಗುತ್ತದೆ. ಅಲ್ಲಿನ ರಾಜ್ಯಪಾಲರು ಹೇಗೆ ನಡೆದುಕೊಂಡರು, ಪ್ರಮಾಣ ವಚನ ತೆಗೆದುಕೊಳ್ಳುವಾಗ ಏನು ಮಾಡಿದರು ಎಂಬ ಬಗ್ಗೆ ಚರ್ಚೆ ಮಾಡಿಕೊಂಡು ಹೋದರೆ ಅದು ಸರಿಯಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ರಾಜ್ಯಪಾಲರನ್ನು ಇಲ್ಲಿ ಹೇಗೆ ನಡೆಸಿಕೊಳ್ಳುತ್ತಿದ್ದಾರೆ ಎಂಬುದು ಈ ಬಿಲ್ಲಿನಿಂದಲೇ ಗೊತ್ತಾಗುತ್ತದೆ.

೮.೦೦ ಪಿಎಂ

ಶ್ರೀ ಡಿ.ವಿ.ಸದಾನಂದಗೌಡ: ಎರಡನೆಯದಾಗಿ ಮಾನ್ಯ ಖರ್ಗೆಯವರಿಗೆ ಚೆನ್ನಾಗಿ ಗೊತ್ತು, ತಮಿಳುನಾಡಿನ ರಾಜ್ಯಪಾಲರು ಮಾಡಿದ್ದು ತಪ್ಪು, ಅವರು ಕೊಟ್ಟ ರಾಜೀನಾಮೆಯಿಂದಲೇ ಅದು ಜಗಜ್ಜಾಹೀರಾಗಿದೆ, ಅದರ ಬಗ್ಗೆ ನಾವು ಚರ್ಚಿಸುವ ಅವಶ್ಯಕತೆಯಿಲ್ಲ. ಈ ಹಿನ್ನೆಲೆಯಲ್ಲಿ ಸೆಕ್ಷನ್ ೨೮ನ್ನು ಆಮೂಲಾಗ್ರವಾಗಿ ಬದಲಾವಣೆ ಮಾಡಬೇಕಾಗಿದೆ. ಒಟ್ಟಾರೆಯಾಗಿ ಇವತ್ತಿನ ದಿವಸ ವಿದ್ಯಾ ಕ್ಷೇತ್ರಕ್ಕೆ ಒಂದು ಮಾರಕವಾದ ಕಾನೂನನ್ನು ತಂದಿದ್ದೀರಿ. ಒಟ್ಟಾರೆ ಹೊಸ ಕಾನೂನನ್ನು ಪರಿವರ್ತನೆ ಮಾಡಿ ರಾಜಕೀಯ ಹಸ್ತಕ್ಷೇಪಕ್ಕೆ ಆಮೂಲಾಗ್ರ ಪ್ರೋತ್ಸಾಹ ಕೊಡಲು ತಾವು ಹೋಗುತ್ತಿದ್ದೀರಿ. ಇದನ್ನು ಕೈಬಿಡಬೇಕೆಂದು ನಾನು ಮಾನ್ಯ ಅಧ್ಯಕ್ಷರ ಮೂಲಕ ತಮ್ಮನ್ನು ಆಗ್ರಹಿಸುತ್ತೇನೆ.

+ ಶ್ರೀ ಬಿ.ಎನ್.ಬಚ್ಚೇಗೌಡ (ಹೊಸಕೋಟೆ): ಮಾನ್ಯ ಅಧ್ಯಕ್ಷರೇ, ಶಿಕ್ಷಣ ಸಚಿವರು ಕಳೆದ ಸದನದಲ್ಲಿ ತರಬೇಕಾದ್ದನ್ನು ಕಾದು ಈಗ ಈ ವಿಧೇಯಕವನ್ನು ಸಭೆಯ ಮುಂದೆ ತಂದಿದ್ದಾರೆ. ತಜ್ಞರ ಸಮಿತಿ ವರದಿ ಪ್ರಕಾರ ಇಡೀ ದೇಶಕ್ಕೇ ಇದು 'ಕರ್ನಾಟಕ ಮಾದರಿ' ಎಂದು ಕಾಣಬೇಕೆಂದು, ಸಾಕಷ್ಟು ಶಿಕ್ಷಣ ತಜ್ಞರನ್ನು ಇದರಲ್ಲಿ ನೇಮಕ ಮಾಡಿ, ಅದರ ಜೊತೆಗೆ ಸಾರ್ವಜನಿಕರ ಅಭಿಪ್ರಾಯವನ್ನೂ ಪಡೆದು, ಆಂಧ್ರಪ್ರದೇಶದ ಹೈದರಾಬಾದ್(ವಿಶ್ವವಿದ್ಯಾನಿಲಯಕ್ಕೂ) ಹೋಗಿ ವಿಚಾರ ಮಾಡಿ ತಂದಿರುವ ಬಿಲ್ ಇದು ಬಹಳ ಸಮಗ್ರವಾಗಿದೆ. ಒಂದು ಮಾದರಿ ಬಿಲ್ ಇದು ಎಂದಿದ್ದಾರೆ. ಅದಕ್ಕೆ ಸಚಿವರು ಇದನ್ನು ಪ್ರತಿಷ್ಠೆಯಾಗಿ ಇಟ್ಟುಕೊಳ್ಳಬಾರದು. ನಾವು ತಂದಿದ್ದೇವೆ, ನಾವು ಹೇಳಿದ್ದೇ ಆಗಬೇಕೆಂಬ ಅಭಿಪ್ರಾಯವನ್ನು ಅವರು ಬಿಡಬೇಕಾಗುತ್ತದೆ. ಕಾರಣ, ಇವತ್ತು ಜಂಟಿ ಸಲಹಾ ಸಮಿತಿ ಕೊಟ್ಟಿರುವ ವರದಿ ಇದೆ, ಇನ್ನೊಂದು ಕಡೆ ಶ್ರೀ ನಂಜುಂಡಪ್ಪ, ಡಾ.ಸವದತ್ತಿ ಶ್ರೀ ಸೋಮಶೇಖರಪ್ಪ ಮುಂತಾದ ೧೦ ಜನ ತಜ್ಞರು ವರದಿ ಕೊಟ್ಟಿರುವುದೂ ಇದೆ. ಸಾರ್ವಜನಿಕರ ಅಭಿಪ್ರಾಯಗಳೂ, ಅನೇಕ ಟೀಕೆ ಟಿಪ್ಪಣಿಗಳೂ ಬಂದಿವೆ. ವಿದ್ಯಾರ್ಥಿ ಪರಿಷತ್ ವಿದ್ಯಾರ್ಥಿ ಸಂಘಟನೆಗಳು ಇದರ ಬಗ್ಗೆ ಚಳುವಳಿ ರೂಪಿಸಿರುವುದು ಹೀಗೆ ಬಹಳ ಟೀಕೆಗೆ ಗುರಿಯಾಗಿರುವುದನ್ನು ನಾವು ಕಾಣುತ್ತಿದ್ದೇವೆ. ಅದಕ್ಕೇ ನಾನು ಹೇಳುವುದು, ಡಾ|| ಪರಮೇಶ್ವರ ಅವರು ಇದರಲ್ಲಿ ಸಾಕಷ್ಟು ಅನುಭವ ಇರುವವರು, ಒಂದು ಒಳ್ಳೆಯ ಉದ್ದೇಶದಿಂದ, ಇಡೀ ರಾಷ್ಟ್ರಕ್ಕೆ ಮಾದರಿಯಾಗಿ ಇದಿರಬೇಕು, ಬೇರೆ ರಾಜ್ಯಗಳವರು ಇಲ್ಲಿ ಬಂದು ನೋಡುವ ಹಾಗಿರಬೇಕು ಎಂದು ಹೇಳಿ, ಅವರು ತಮ್ಮ ಕೋಣೆಯಲ್ಲಿ ಅನೇಕ ವಿಷಯಗಳನ್ನು ನಮಗೆ ತಿಳಿಸುತ್ತೇವೆ ಎಂದು ಹೇಳಿದ್ದಾರೆ, ನಾವು ಆ ಚರ್ಚೆಯಲ್ಲಿರಲಿಲ್ಲ. ಏನಾಗಿದೆ ಎಂದು ನಮಗೆ ಗೊತ್ತಿಲ್ಲ. ಇವತ್ತು ಒಂದು ವಿಷಯ ಬಹಳ ಮುಖ್ಯವಾಗಿ ಈ ಚರ್ಚೆಯಲ್ಲಿ ಕಂಡಿದ್ದು ಎಂದರೆ, ಮುಖ್ಯಮಂತ್ರಿಗಳು ಅಥವಾ ಸರ್ಕಾರ ನೇರವಾಗಿ ವೈಸ್ ಚಾನ್ಸಲರನ್ನು ನೇಮಕ ಮಾಡುವುದು. ಇಷ್ಟು ದಿವಸ ಸರ್ಚ್ ಕಮಿಟಿ ಎಂದು

ಹೇಳಿ ಅದರಿಂದ ಮೂರು ಹೆಸರನ್ನು ಕಳುಹಿಸಿದ್ದರೆ ರಾಜ್ಯಪಾಲರು ಅಂತಿಮವಾಗಿ ಅವರಿಗೆ ಯಾರದೋ ಒಂದು ಹೆಸರನ್ನು ನೇಮಿಸುವ ಪದ್ಧತಿ ಹೋಗಬೇಕು, ಸರ್ಕಾರದ ಕೈಯಲ್ಲಿಟ್ಟುಕೊಂಡು ಅವರಿಗೆ ಬೇಕಾದವರನ್ನು ನೇಮಿಸಬಹುದೆಂಬುದರ ಬಗ್ಗೆ ಇವತ್ತಿನ ಗೊಂದಲವನ್ನು ನಾವು ಕಾಣುತ್ತಿದ್ದೇವೆ. ಇದನ್ನು ಸರ್ಕಾರ ಕೈಬಿಡಬೇಕು. ಮೂರು ಜನರನ್ನು ಶಿಫಾರಸ್ ಮಾಡುವ ಯಥಾಸ್ಥಿತಿ ಏನಿದೆ ಅದನ್ನು ಮುಂದುವರೆಸಿಕೊಂಡು ಹೋದರೆ ಅದು ಗೌರವ ತರುವಂಥಾದ್ದು ಇಲ್ಲಿ ಲೋಪವನ್ನು ಕಾಣುವಂಥದ್ದು. ಇನ್ನೊಂದು, ಸೆನೆಟ್. ಸೆನೆಟ್‌ನಲ್ಲಿ ೬೮ ಅಥವಾ ೭೦ ಜನ ಇದ್ದಾರೆ ಚುನಾಯಿತರಾಗಿರುವವರು, ಬೇಕಾದರೆ ಅದರ ಸಂಖ್ಯೆಯನ್ನು ಕಡಿಮೆ ಮಾಡಬಹುದು. ಜಾಸ್ತಿ ಜನ ಸೆನೆಟ್ ಮೆಂಬರ್ಸಿದ್ದರೆ ಸಾಕಷ್ಟು ಚರ್ಚೆಗಳು ಅನಾವಶ್ಯಕ ಡಿಲೇ ಆಗುವಂಥಾದ್ದು ಟ್ಯಾಕ್ಟಿಕ್ಸ್ ಇವೆಲ್ಲಾ ಇರುತ್ತವೆ. ಆದ್ದರಿಂದ ಪ್ರಜಾಪ್ರಭುತ್ವದಲ್ಲಿ ಚುನಾಯಿತರಾದವರಿದ್ದರೆ ಅದಕ್ಕೆ ಬೆಲೆ ಇರುತ್ತದೆ, ಶೋಭೆ ಇರುತ್ತದೆ, ಅವರು ವೈಸ್ ಚಾನ್ಸಲರ್ ಮಾಡವುದರ ಮೇಲೆ ಹತೋಟಿ ಇಟ್ಟುಕೊಳ್ಳಬಹುದು, ಅವರ ಆಡಳಿತದಲ್ಲಿ ಕಡಿವಾಣ ಹಾಕಬಹುದಿರುತ್ತದೆ, ಇಂಥ ಲೋಪಗಳನ್ನು ಸರಿಪಡಿಸುವ ದೃಷ್ಟಿಯಿಂದ ತಾವೇನು ಇವತ್ತು ನಾಮಿನೇಟ್ ಮಾಡುತ್ತೇವೆಂದು ಸರ್ಕಾರ ಹೇಳುತ್ತಿದೆ ಇದು ಜಾಸ್ತಿಯಾಗುತ್ತದೆ. ಇವತ್ತೇನು ಅಕೆಡಿಮಿಕ್ ಕೌನ್ಸಿಲ್ ಎಂದು ಕರೆಯುವುದರಲ್ಲಿ ೨೭೦,೩೦೦ ಪ್ರೊಫೆಸರ್‌ಗಳೇನು ಬಂದು ಕೂರುತ್ತಿದ್ದಾರೆ ಅವರೆಲ್ಲಾ ಸದಸ್ಯರೇ. ಅವರ ಜೊತೆಗೆ ತಾವೇನು ಮತ್ತೆ ನಾಮಿನೇಟ್ ಮೂಲಕ ಸೇರಿಸುತ್ತಿದ್ದೀರಿ ಇದು ಇನ್ನಷ್ಟು ಜಾಸ್ತಿಯಾಗಿ ಸಮಸ್ಯೆ ಪರಿಹಾರವಾಗುವುದಿಲ್ಲ. ಆದ್ದರಿಂದ ಈ ನಾಮಕರಣ ಪದ್ಧತಿಯನ್ನು ಕೈಬಿಡಬೇಕು. ಎಲ್ಲಾ ಕ್ಷೇತ್ರದಲ್ಲೂ ನಾಮಿನೇಷನ್ ಬೇಡ ಎಂದು ನಾವೆಲ್ಲಾ ಪ್ರತಿಪಾದಿಸಿಕೊಂಡು ಬಂದಿದ್ದೇವೆ. ಮತ್ತೆ ನಾಮಕರಣಗಳನ್ನೇ ಹೆಚ್ಚು ಮಾಡಿಕೊಂಡು ಹೋಗುವುದರಲ್ಲಿ ಅರ್ಥವಿಲ್ಲ. ಆಮೇಲೆ ಲೆಕ್ಕ ಪರಿಶೋಧಕರು ಎಂದು ಮಾಡಿದೀರಿ, ಇವತ್ತೇನು ಏಜೀಸ್‌ಯಿಂದ ಹೋಗುವವರು, ಸ್ಟೇಟ್ ಅಕೌಂಟ್‌ನಿಂದ ಕಳುಹಿಸುವವರನ್ನು ಬಿಟ್ಟು ಯಾರಾದರೂ ಚಾರ್ಟರ್ಡ್ ಅಕೌಂಟೆಂಟ್ ಆಗಬಹುದು ಎಂದು ತಾವು ನಮೂದು ಮಾಡಿದ್ದೀರಿ. ಏವಿ ಅವನನ್ನು ನೇಮಿಸಿಕೊಳ್ಳಬಹುದು ಎಂದು. ಅವರು ಮಾಡಿರುವ ಎಲ್ಲಾ ವ್ಯವಹಾರ, ಅವ್ಯವಹಾರಗಳನ್ನೆಲ್ಲಾ ಓಕೆ ಮಾಡಿಕೊಳ್ಳಬಹುದು, ಯಾರನ್ನೋ ಚಾರ್ಟರ್ಡ್ ಅಕೌಂಟೆಂಟ್ ಮಾಡಿಕೊಳ್ಳಬಹುದು, ಅದರಲ್ಲಿ ಕಾನೂನು ಕಡಿವಾಣ ಏನಿರುತ್ತದೆ? ಇವತ್ತು ಆಡಿಟರ್ ಜನರಲ್, ಅಕೌಂಟೆಂಟ್ ಜನರಲ್ ಕಳುಹಿಸಿದ ವ್ಯಕ್ತಿ ಬಿಟ್ಟು ಅವರೇ ಯಾರನ್ನೋ ನೇಮಿಸಿಕೊಳ್ಳುವಂಥಾದ್ದು. ಮತ್ತೆ ರಿಜಿಸ್ಟ್ರಾರ್ ಇವ್ಯಾಲ್ಯೂಯೇಷನ್ ಏನಿದ್ದಾರೆ ಅವರು ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುವವರನ್ನು ಆಡಳಿತದಲ್ಲಿ ಸೇರಿಸುವಂತಹುದನ್ನು ತಾವು ತಂದಿದ್ದೀರಿ. ಅವರೇನು ಸೇರುವಂಥದ್ದು? ಆಡಳಿತ ವ್ಯವಹಾರಗಳಿಗೆ ಆತ ಸೆಕ್ರೆಟರಿಯಾಗಿರಬೇಕು. ಅವನ ಹೇಗೆ ಸದಸ್ಯನಾಗಿ ಅಲ್ಲಿ

ಕಾರ್ಯನಿರ್ವಹಿಸುವುದು? ಇವುಗಳ ಬದಲಾವಣೆ ಇವತ್ತು ಆಗಬೇಕಾಗಿರುವುದು ಇದೆ. ರಿಜಿಸ್ಟ್ರಾರ್‌ರನ್ನು ನಾಮನಿರ್ದೇಶನ ಮಾಡುತ್ತೇವೆ, ಅವನೂ ಒಳಗೆ ಹೋಗಿ ಕೆಲಸ ಮಾಡುತ್ತಾನೆ ಅಂದರೆ ಅದು ತಪ್ಪಾಗುತ್ತದೆ. ಇಂಥ ಅನೇಕ ಇಶ್ಯೂಗಳು ಏನಿವೆ ಇವು ಬದಲಾವಣೆ ಆಗಬೇಕಾಗುತ್ತದೆ. ಆ ದೃಷ್ಟಿಯಿಂದ ಇವತ್ತೇನು ಒಳ್ಳೆಯ ಉದ್ದೇಶ ಇಟ್ಟುಕೊಂಡು ಇದನ್ನು ತಂದಿರುವ ಶಿಕ್ಷಣ ಸಚಿವರು, ಸ್ವತಃ ತಮಗೇ ಅನುಭವವಿದ್ದರೂ, ಬೇರೆಯವರಿಂದ ತಿಳಿದು, ಇದನ್ನು ಗೊಂದಲ ಮಾಡದೆ, ಟೀಕೆಗೆ ಅವಕಾಶವಿಲ್ಲದೆ, ನಮ್ಮ ಸಲಹೆಗಳನ್ನೂ ಅದರಲ್ಲಿ ಸೇರಿಸಿ, ಆಮೇಲೆ ಮಾದರಿಯಾದ ಸಮಗ್ರವಾದ ಬಿಲ್ ಆಗಿ ಬರಲಿ ಎಂದು ಹೇಳಿ ತಾವೇನು ಸೂಚಿಸಿದ್ದೀರಿ ಅವನ್ನು ಹಿಂದಕ್ಕೆ ಪಡೆಯಿರಿ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

\+ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೇ, ಈಗ ನಮ್ಮ ನಾಯಕರು ಮಾತನಾಡಿದ್ದಾರೆ. ನಾನು ವಿಸ್ತೃತವಾದ ವಿವರಗಳಿಗೆ ಹೋಗುವುದಿಲ್ಲ. ಇದರಲ್ಲಿ ಒಳ್ಳೆಯ ಅಂಶಗಳಿವೆ, ಅವನ್ನು ನಾನು ಸ್ವಾಗತಿಸುತ್ತೇನೆ. ಇದರಲ್ಲಿ ಯಾವುದೂ ಒಳ್ಳೆಯ ಅಂಶಗಳಿಲ್ಲವೆಂದು ಸಾರಾಸಗಟಾಗಿ ತಿರಸ್ಕಾರ ಮಾಡುವವರು ನಾವಲ್ಲ. ಆದರೆ ಮೂಲಭೂತವಾಗಿ ನಾನು ಒಂದು ಅಂಶವನ್ನು ತಮ್ಮೆದುರು ಪ್ರಸ್ತಾಪಿಸಬೇಕೆಂದಿದ್ದೇನೆ. ವಿಸಿ ಕುರಿತು ಸಾಕಷ್ಟು ಪ್ರಸ್ತಾಪವಾಗಿದೆ. ಸನೆಟ್ ಬಗ್ಗೆ ನನ್ನ ಅಭಿಪ್ರಾಯವೇನೆಂದರೆ ನಾವೆಲ್ಲ ನೇಮಕ ಬಹಳ ಗಂಭೀರವಾಗಿ ಯೋಚನೆ ಮಾಡಬೇಕಾಗಿರುವುದು ಇಂದಿನ ಯುವಕರು ಜವಾಬ್ದಾರಿಯುತವಾದ ರಾಷ್ಟ್ರದ ಪ್ರಜೆಗಳು, ಅವರು ಈ ದೇಶವನ್ನು ಮುನ್ನಡೆಸಲು ಬೇಕಾದ ಸರಿಯಾದ ಶಿಕ್ಷಣದ ವಾತಾವರಣ ಅವರಿಗೆ ನಾವು ಕೊಡುವುದರ ಜೊತೆಯಲ್ಲಿ ಅವರಿಗೆ ಸಾಮಾಜಿಕ ಜವಾಬ್ದಾರಿಯ ಬಗ್ಗೆ ಅರಿವಾಗಲು ಬೇಕಾಗಿರುವಂತಹ ರೈಟ್ ಟು ಪಾರ್ಟಿಸಿಪೇಷನ್ ಬಗ್ಗೆ ನಾವು ಯೋಚನೆ ಮಾಡಬೇಕಾಗಿದೆ. ಅವರ ರೈಟ್ ಟು ಜಾಬ್ ಅಥವಾ ರೈಟ್ ಟು ಎಜ್ಯುಕೇಷನ್ ಭಾಗಗಳಿಗೆ ಹೋಗುವುದಿಲ್ಲ. ಆದರೆ ರೈಟ್ ಟು ಪಾರ್ಟಿಸಿಪೇಷನ್ ಇದೆಯಲ್ಲಾ, ಅವರು ಸಮಾಜದ ಆಗುಹೋಗುಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಡಬೇಕಾದ್ದು ನಮ್ಮ ಜವಾಬ್ದಾರಿ. ಈ ಸಂದರ್ಭದಲ್ಲಿ ನಾವು, ಎಲ್ಲೋ ಒಂದು ಕಡೆ ಚುನಾವಣೆ ನಡೆಯುವಾಗ ಗೂಂಡಾಗಿರಿ ಆಗುತ್ತದೆ, ಹಣ ಖರ್ಚಾಗುತ್ತದೆ ಎಂದು ಹೇಳುತ್ತೇವೆ. ಹಾಗಾದರೆ ನಮ್ಮ ಚುನಾವಣೆಯಲ್ಲಿ ಅದು ಆಗುವುದಿಲ್ಲವೇನು? ನೆಗಡಿ ಆಗಿದೆ ಎಂದು ಮೂಗನ್ನೇ ಕತ್ತರಿಸುವುದು ಪರಿಹಾರವಲ್ಲ. ನೇಗಡಿಯಾಗಿದೆ ಅಂದರೆ ನೆಗಡಿಗೆ ಔಷಧಿ ಯಾವುದು ಎಂಬುದನ್ನು ನಾವು ಹುಡುಕಬೇಕು. ಹಾಗಾಗಿ ಭವಿಷ್ಯದ ಒಂದು ವಿಶಾಲವಾದಂಥ ದೃಷ್ಟಿಕೋನವನ್ನು, ಆ ಜವಾಬ್ದಾರಿಯನ್ನು ನಾವು, ಈ ಸದನ ಹೊತ್ತು ಯುವಕರಲ್ಲಿ ಆ ರೀತಿ ಸಾಮಾಜಿಕವಾದಂಥ ಜವಾಬ್ದಾರಿಯನ್ನು ನಿರ್ವಹಿಸುವುದಕ್ಕೆ ಬೇಕಾಗಿರುವಂಥ

ಒಂದು ಮುಕ್ತ ಅವಕಾಶಗಳನ್ನು ಕಲ್ಪಿಸಿ ಕೊಡುವಂಥಾದ್ದು ಈ ಸದನದ ಕರ್ತವ್ಯವಾಗಬೇಕು. ಅದನ್ನು ಮೊಟಕುಮಾಡಿ ಸಮಾಜದಲ್ಲಿ ನಾಳೆ ಜವಾಬ್ದಾರಿಯುತ ಸ್ಥಾನವನ್ನು ಅವರು ಸಮರ್ಥವಾಗಿ ನಿರ್ವಹಿಸದೇ ಇರುವಂಥ ಕೃತ್ಯಗಳನ್ನು ನಾವು ಈ ಸದನದ ಮೂಲಕ ಮಾಡಬಾರದು. ನಾವು ಅವರ ಬೆಳವಣಿಗೆಗೆ ಬೇಕಾಗಿರುವ ಅವರ ಪ್ರತಿಭೆಗಳಿಗೆ ರಚನಾತ್ಮಕವಾದ ದೃಷ್ಟಿಕಕೋನವನ್ನು ಕೊಟ್ಟು ಅದು ಸಮಾಜದ ಅಭಿವೃಧ್ಧಿಗೆ, ಅವರ ವೈಯಕ್ತಿಕ ಜೀವನದ ಅಭಿವೃದ್ಧಿಗೆ ಪೂರಕವಾಗುವಂಥ ರೀತಿಯಲ್ಲಿ ನಾವು ನಿಯಮಗಳನ್ನು ರೂಪಿಸಬೇಕು. ಹಾಗಾಗಿ ಇದು ಬಹಳ ದೊಡ್ಡ ಜವಾಬ್ದಾರಿ ಇದೆ. ಈ ಬಿಲ್‌ನಲ್ಲಿ ಸೆನೆಟ್‌ನ್ನು ರದ್ದು ಮಾಡುವಂಥಾದ್ದು ಅತ್ಯಂತವಾಗಿ ಖಂಡಿಸಲೇಬೇಕಾದಂಥ ಒಂದು ಅಂಶ. ಇದು ಯುವಕರ ಭವಿಷ್ಯವನ್ನು, ಆ ಪ್ರತಿಭೆಯನ್ನು ಚಿಗುಟಿ ಹಾಕುವಂಥ, ಅದು ಅಲ್ಲಿಯೇ ಕಮರಿಹೋಗುವಂತೆ ಮಾಡುವ ಒಂದು ಪ್ರಯತ್ನ ಸರ್ಕಾರದ್ದು ಎಂದು ನಾವು ಹೇಳಬೇಕಾಗುತ್ತದೆ. ನಾನು ಹಿಂದೊಂದು ಸಂದರ್ಭದಲ್ಲಿ ಹೇಳಿದ್ದೆ, ನಮಗೆ ೧೮ ವರ್ಷಕ್ಕೆ ಮತದಾನದ ಹಕ್ಕನ್ನು ಕೊಡಬೇಕೆಂದು ಯುವ ಆಂದೋಲನದಲ್ಲಿ ನಡೆಯಿತು. ಅದನ್ನು ಸರ್ಕಾರ ಹತ್ತಿಪ್ಪತ್ತು ವರ್ಷಗಳಲ್ಲಿ ಮನಗಂಡು ಯುವಕರ ಒತ್ತಡಕ್ಕೆ ಒಂದು ಮನ್ನಣೆಯನ್ನು ಕೊಡಬೇಕಾದಂಥ ಸ್ಥಿತಿ ಬಂತು. ೧೮ ವರ್ಷಕ್ಕೆ ನಾವು ರೈಟ್-ಟು-ವೋಟಿಂಗ್ ಕೊಡಬೇಕಾದ ವ್ಯವಸ್ಥೆಯನ್ನು ನಿರ್ಮಾಣ ಮಾಡಿದೆವು. ಅಂದರೆ ನಾವು ರೈಟು-ಟು-ವೋಟನ್ನು ೧೮ ವರ್ಷಕ್ಕೆ ಕೊಡುವ ಸಂದರ್ಭದಲ್ಲಿ ಇವರ್‍ಯಾರೂ ಅಪ್ರಬುದ್ಧರಲ್ಲ, ಯುವಕರು ಜವಾಬ್ದಾರಿಯನ್ನು ಹೊತ್ತಿರುವಂಥವರ್‍ಯಾರೂ ಇವರು ಬೇಜವಾಬ್ದಾರರಲ್ಲ. ಇವರು ತಮ್ಮ ಜೀವನದ ಜೊತೆಗೆ ಸಮಾಜ ಜೀವನ, ರಾಷ್ಟ್ರ ಜೀವನವನ್ನು ಭವ್ಯವಾಗಿ ನಿರೂಪಿಸಬೇಕೆನ್ನುವಂಥ ನಮಗಿಂತ ಹೆಚ್ಚು ಆ ಒಂದು ಆಶಾ ಗೋಪುರವನ್ನು ಕಟ್ಟುವಂಥ ಸಾಮರ್ಥ್ಯವಿರುವಂಥವರು. ಹಾಗಾಗಿ ಈ ಒಂದು ಪ್ರತಿಭೆಯನ್ನು ಚಿವುಟುವಂಥ ಪ್ರಯತ್ನವಾಗಬಾರದು. ಸೆನೆಟ್ ಚುನಾವಣೆಗೆ ಅವಕಾಶವನ್ನು ಮಾಡಿ ಕೊಡಬೇಕು. ಇರುವ ಲೋಪದೋಷಗಳನ್ನು ಹೇಗೆ ಸರಿಪಡಿಸಬೇಕೆನ್ನುವ ಬಗ್ಗೆ ನಾವು ಮತ್ತೆ ಮತ್ತೆ ಕುಳಿತು ಚರ್ಚೆಯನ್ನು ಮಾಡೋಣ. ನಾವಷ್ಟೇ ಅಲ್ಲ, ವಿಶ್ವವಿದ್ಯಾನಿಲಯಗಳಿವೆ ಬೇರೆ ಬೇರೆ ಗಣ್ಯರು ಅನೇಕರು ಇದ್ದಾರೆ. ಹಾಗಾಗಿ ನಾವು ಕುಳಿತು ಚರ್ಚೆ ಮಾಡಿ ಸೆನೆಟ್ ಇರುವ ಒಂದು ಅವಕಾಶವನ್ನು ಕಲ್ಪಿಸಿಕೊಡಬೇಕು. ಆ ರೀತಿ ಈ ಸದನ ಅಷ್ಟು ಜವಾಬ್ದಾರಿಯುತವಾಗಿ ಯೋಚನೆಯನ್ನು ಮಾಡಿ ಮುಂದಿನ ಭವಿಷ್ಯದ ದೃಷ್ಟಿಯಿಂದ ಸೆನೆಟ್ ಚುನಾವಣೆಯನ್ನು ಇಡಬೇಕೆನ್ನುವ ಮಾತನ್ನು ಬಹಳ ಸಂಕ್ಷಿಪ್ತದಲ್ಲಿ ಹೇಳುತ್ತೇನೆ. ಇನ್ನೊಂದು ಅಂಶವೇನೆಂದರೆ, ನಾನು ಬಹಳ ವಿವರಗಳಿಗೆ ಹೋಗದೆ, ಒಂದು ವಿಷಯ ಪ್ರಸ್ತಾಪವಾಗದೇ ಇರುವುದರ ಬಗ್ಗೆ ಮಾನ್ಯ ಪರಮೇಶ್ವರ್‌ರವರು ಗಮನಿಸಬೇಕು. ಇಲ್ಲಿ ರಿಜಿಸ್ಟ್ರಾರ್‌ರವರ ವಿಷಯದಲ್ಲಿ ಒಂದು ವಿಚಾರ ಇದೆ. ''ಕ್ಲಾಜ್

೧೭ರಲ್ಲಿ 'ಸೂಪರ್‌ಟೈಮ್ ಶ್ರೇಣಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಖಿಲ ಭಾರತ ಸೇವೆ ಸೇರಿದ ಒಬ್ಬ ಅಧಿಕಾರಿಯನ್ನು, ರಾಜ್ಯಸರ್ಕಾರವು ನೇಮಕ ಮಾಡಬಹುದು' ಎಂದು ಇದೆ ಅದು ಇರಲಿ. ಆದರೆ ''ಪರಂತು, ಅಂಥ ವ್ಯಕ್ತಿಯು ಲಭ್ಯವಿರದಿದ್ದಲ್ಲಿ ಸಿಂಡಿಕೇಟಿಗೆ ಕುಲಪತಿಯವರು ಶಿಫಾರಸ್ಸು ಮಾಡಿದ ಮೂವರಿಗಿಂತ ಕಡಿಮೆಯಾಗಿರದ ವ್ಯಕ್ತಿಗಳ ಪಟ್ಟಿಯಿಂದ..... ಎಂದು ಒಂದು ಪ್ಯಾರಾ ಇದೆ. ದಯವಿಟ್ಟು ಆ ಪ್ಯಾರಾವನ್ನು ಹಾಗೆ ಇಡಬೇಕು. ಏಕೆಂದರೆ ಯಾವ ಐ.ಎ.ಎಸ್. ಅಧಿಕಾರಿಗಳು ಅಲ್ಲಿ ರಿಜಿಸ್ಟ್ರಾರ್ ಆಗುವುದಕ್ಕೆ ಹೋಗುವುದಿಲ್ಲ. ಅದು ನಮಗೆ ಗೊತ್ತಿದೆ. ಒಮ್ಮೆ ರಿಜಿಸ್ಟ್ರಾರ್ ಆಗಲಿಕ್ಕೆ ಹೋದರೂ ಅವರು ಈ ಉಪಕುಲಪತಿಗಳನ್ನು ಸೂಪರ್‌ಸೀಡ್ ಮಾಡುವಷ್ಟು ಶಕ್ತಿಯನ್ನು ಹೊಂದಿರುತ್ತಾರೆ. ಇಲ್ಲಿ ಎಂ.ಎಸ್. ಬಿಲ್ಡಿಂಗ್ ಜೊತೆಗೆ, ವಿಧಾನಸೌಧದ ಜೊತೆಗೆ ಅವರು ಸಂಬಂಧವನ್ನು ಇಟ್ಟುಕೊಂಡು ಅಲ್ಲಿ ವೈಸ್ ಛಾನ್ಸಲರ್‌ಗಳನ್ನು ಮೂರನೇ ಕ್ಲಾಸ್ ನೌಕರರಂತೆ ನೋಡಿಕೊಳ್ಳುವ ಸಂದರ್ಭಗಳು ಒದಗಿಬರುತ್ತದೆ. ಹಾಗಾಗಿ ಐಎಎಸ್ ಅಧಿಕಾರಿಗಳಲ್ಲೂ ಒಳ್ಳೆಯವರಿದ್ದಾರೆ. ಅದೇ ರೀತಿ ಒಳ್ಳೆಯ ಶಿಕ್ಷಣದ ಬಗ್ಗೆ ಪ್ರೇಮ ಇರತಕ್ಕಂಥವರು, ಯುವಕರ ಬಗ್ಗೆ ಅವರ ಭವಿಷ್ಯದ ಬಗ್ಗೆ ಕಾಳಜಿ ಇರತಕ್ಕಂಥವರು ಅಲ್ಲಿ ಹೋಗಿ ಕೆಲಸ ಮಾಡಿದರೆ ಪರವಾಗಿಲ್ಲ. ಆದರೆ ಅದು ಸಾಧ್ಯವಿಲ್ಲವೆನ್ನುವುದು ನಮಗೆ ಮನವರಿಕೆಯಾಗಿರುವ ವಿಷಯವಾಗಿರುವುದರಿಂದ 'ಪರಂತು' ಎನ್ನುವುದಕ್ಕಿಂತ ಮುಂದೆ ಏನು ಇದೆ, ಅದನ್ನು ಹಾಗೆಯೇ ಇಡಬೇಕು. ನಮ್ಮ ಈ ಒಂದು ಮಸೂದೆಯಲ್ಲಿ ಅದು ಬಂದಿದೆ. ಅದು ಇಲ್ಲವೆಂದರೆ ಶಿಕ್ಷಣ ಕ್ಷೇತ್ರದಲ್ಲಿ ಯಾರು ತಜ್ಞರಿದ್ದಾರೋ ಅವರನ್ನಾದರೂ ನೇಮಕ ಮಾಡಿಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ಈ ವಿಷಯಗಳನ್ನು ಪ್ರಸ್ತಾಪಿಸುತ್ತಾ, ನಾನು ಕೊನೆಯಲ್ಲಿ ಒಂದು ವಿಷಯವನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತಿದ್ದೇನೆ. ಸರ್ಕಾರ ಇದರ ಬಗ್ಗೆ ಹಠ ಮಾಡುತ್ತಿದೆ. ಏಕೆ ಹಠ ಮಾಡುತ್ತಿದೆ ಎಂದು ನಮಗೆಲ್ಲರಿಗೂ ಗೊತ್ತಾಗಿದೆ. ವೈಸ್ ಛಾನ್ಸಲರ್ ಜೊತೆಗೆ ಯಾವುದೋ ಒಂದು ಕಾರಣಕ್ಕೆ......

ಅಧ್ಯಕ್ಷರು: ಅವೆಲ್ಲಾ ಬೇಡಿ. ದಯವಿಟ್ಟು ಸಬ್ಜೆಕ್ಟ್ ಮ್ಯಾಟರ್‌ಗೆ ಬನ್ನಿ. ತಾವು ಹೇಳಿದಂತೆ ೫ ನಿಮಿಷಗಳು ಮುಗಿದುಹೋಯಿತು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಶಿಕ್ಷಣ ಕ್ಷೇತ್ರ ಎಂದರೆ ಶಿಕ್ಷಣ ಕ್ಷೇತ್ರದಲ್ಲಿ ನಾವು ಈ ಬದಲಾವಣೆಯನ್ನು ಮಾಡುತ್ತಿರುವಂಥಾದ್ದು ಸುಶಿಕ್ಷಿತರ ಆ ಒಂದು ವರ್ಗದ ಸಮಾಜದ ಬಗ್ಗೆ ಕುರಿತು ನಾವು ಇನ್ನಷ್ಟು ಜವಾಬ್ದಾರಿಯುತವಾಗಿ ಯೋಚನೆ ಮಾಡುವಂಥವರು. ಶಿಕ್ಷಣ ಕ್ಷೇತ್ರದಲ್ಲಿ ಈ ಮಸೂದೆ ತರುವಂಥಾದ್ದನ್ನು, ದಯವಿಟ್ಟು ಗಡಿಬಿಡಿ ಮಾಡಿಕೊಂಡು, ಯಾವುದೋ ಒಂದು ಪ್ರತಿಷ್ಠೆಗೆ ಸಿಕ್ಕಿಕೊಂಡು ಅದನ್ನು

ತರುವಂತಾಗಬಾರದು. ಏಕೆಂದರೆ ಇದು ಲಾಂಗ್ ರನ್‌ಗೆ ಎಫೆಕ್ಟ್ ಆಗುತ್ತದೆ. ಅಶಿಕ್ಷಿತರು ಮಾಡುವಂಥ ಕೆಲಸವನ್ನು ನಾವು ಮಾಡಬಾರದು. ನಾವು ಸುಶಿಕ್ಷಿತರಾಗಿ, ಸುಶಿಕ್ಷಿತ ಸಮಾಜವನ್ನು ಸೃಷ್ಟಿಸುವುದಕ್ಕೋಸ್ಕರವಾಗಿ ಆ ಕೆಲಸವನ್ನು ಮಾಡಬೇಕು. ಇದರ ಹೊರತು ಇಲ್ಲಿ ನಮ್ಮ ಕೇವಲ ರಾಜಕೀಯ ಇಚ್ಛೆಯೇ ಮುಂದಾಗಿಬಿಟ್ಟರೆ ನಾವು ಈ ಮಸೂದೆಯಿಂದ ಭವಿಷ್ಯವನ್ನು ಒಳ್ಳೆಯ ರೀತಿಯಿಂದ ಕಾಣುವುದಕ್ಕೆ ಸಾಧ್ಯವಿಲ್ಲ. ಹಾಗಾಗಿ ಈ ಮಸೂದೆಯನ್ನು ಇನ್ನಷ್ಟು ಹೆಚ್ಚು ಪುನರ್‌ವಿಮರ್ಶೆಗೆ ಒಳಪಡಿಸಬೇಕು, ಸಾರ್ವಜನಿಕ ಚರ್ಚೆಗೆ ಅವಕಾಶ ಮಾಡಿಕೊಡಬೇಕು. ಯಾವ ಶಿಕ್ಷಣ ತಜ್ಞರೂ ಇದರ ಪರವಾಗಿಲ್ಲ. ಸರ್ಕಾರ ಮಾತ್ರ ಹಠ ಹಿಡಿದಿದೆ ಅಷ್ಟೆ. ಈ ಮಸೂದೆಯನ್ನು ಪಾಸ್ ಮಾಡುವುದಕ್ಕೆ ಬಿಡಬಾರದು ಎಂದು ಹೇಳಿ ಇಷ್ಟು ಹೊತ್ತು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳು.

+ ಡಾ|| ಜಿ.ಪರಮೇಶ್ವರ್ (ಉನ್ನತ ಶಿಕ್ಷಣ ಸಚಿವರು): ಮಾನ್ಯ ಅಧ್ಯಕ್ಷರೇ, ಮೊಟ್ಟಮೊದಲನೆಯದಾಗಿ ನಾನು ವಿರೋಧ ಪಕ್ಷದ ನಾಯಕರಿಗೆ, ಮಾನ್ಯ ಹಿರಿಯ ಸದಸ್ಯರಾದ ಸೋಮಶೇಖರ್‌ರವರಿಗೆ, ಮಾನ್ಯ ಬಚ್ಚೇಗೌಡರವರಿಗೆ, ಮಾನ್ಯ ವಿಶ್ವೇಶ್ವರ ಹೆಗಡೆಯವರಿಗೆ ಮತ್ತು ಮಾನ್ಯ ಸದಾನಂದಗೌಡರಿಗೆ, ಎಸ್.ಎಸ್.ಪಾಟೀಲರಿಗೆ ವಿಶೇಷವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಇದರ ಜೊತೆಗೆ ಇದಕ್ಕೂ ಮುಂಚೆ ಸುಮಾರು ೨೨ ಜನ ಗೌರವಾನ್ವಿತ ಸದಸ್ಯರು, ಎರಡೂ ಮನೆಯ ಸದಸ್ಯರು ಜಂಟಿ ಸಲಹಾ ಸಮಿತಿಯಲ್ಲಿ ಭಾಗವಹಿಸಿ ಅನೇಕ ಸಲಹೆ ಸೂಚನೆಗಳನ್ನು ಕೊಟ್ಟು ಯಾರೋ ನಾಲ್ಕೈದು ಜನ ಗೌರವಾನ್ವಿತ ಸದಸ್ಯರು ಕೊನೆಗೆ ಅವರ ಹೆಸರುಗಳನ್ನು ಹೇಳುವುದು ಬೇಡ, ಅದು ಗೊತ್ತಿರುವ ವಿಷಯ, ಅದರಲ್ಲಿ ರಾಜೀನಾಮೆಯನ್ನು ಕೊಡುವ ಸಂದರ್ಭ ಕೂಡ ಬಂದಿತ್ತು. ಅದರ ಜೊತೆಗೆ ಅವರಿಗೂ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ. ಜೊತೆಗೆ ಯಾರು ಇಡೀ ರಾಜ್ಯದ ವ್ಯಾಪ್ತಿಯಲ್ಲಿ ವಿಶೇಷವಾಗಿ ಶಿಕ್ಷಣ ತಜ್ಞರು, ಸಾರ್ವಜನಿಕರು ಮತ್ತು ಅನೇಕ ಜನ ಈ ಕ್ಷೇತ್ರದಲ್ಲಿ ಆಸಕ್ತಿಯನ್ನು ವಹಿಸಿದಂಥವರು ಬಂದು ಸಲಹೆ ಸೂಚನೆಗಳನ್ನು ನಮ್ಮ ಜಂಟಿ ಸಲಹಾ ಸಮಿತಿಗೆ ಕೊಟ್ಟರೋ ಅವರಿಗೂ ಕೂಡ ಈ ಸಂದರ್ಭದಲ್ಲಿ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ನಾನು ಬಹಳ ಸಂಕ್ಷಿಪ್ತವಾಗಿ ನನ್ನ ಉತ್ತರವನ್ನು ಮುಗಿಸುತ್ತೇನೆ. ಇವತ್ತು ವಿಶ್ವವಿದ್ಯಾನಿಲಯದ ಮಸೂದೆಯನ್ನು ತಂದಂಥ ಸಂದರ್ಭವನ್ನು ನಾನು ಆಗಲೇ ಹೇಳಿದ್ದೇನೆ. ಇವತ್ತು ರಾಜ್ಯದಲ್ಲಿ, ರಾಷ್ಟ್ರದಲ್ಲಿ ಮತ್ತು ಇಡೀ ಪ್ರಪಂಚದಲ್ಲಿ ಶಿಕ್ಷಣ ಕ್ಷೇತ್ರ ಬಹಳಷ್ಟು ಬದಲಾವಣೆಯನ್ನು ಕಾಣುತ್ತಿದೆ. It has become a global concept. It is no more a State or regional concept. ಅದಕ್ಕಾಗಿ ನಮ್ಮ ಬದಲಾವಣೆಯನ್ನು ನಾವೂ ಕೂಡ ತರಬೇಕೆನ್ನುವಂಥ ಒಂದುಕಾರಣದಿಂದ ಇದನ್ನು ತಂದೆವು ಎಂದು ಆಗಲೇ ನಾನು ಹೇಳಿದ್ದೇನೆ ಮತ್ತು

ಇವತ್ತಿನ ದಿವಸ ಕ್ವಾಲಿಟಿ ಛೇಂಜಸ್ ಶಿಕ್ಷಣದಲ್ಲಿ ಆಗಬೇಕು. ೫೦ ವರ್ಷಗಳ ಹಿಂದೆ ಎಷ್ಟು ಜನ ವಿದ್ಯಾರ್ಥಿಗಳಿದ್ದರು, ೧೯೭೬ರಲ್ಲಿ ಈ ರಾಜ್ಯದಲ್ಲಿ ಒಂದು ಶಿಕ್ಷಣ ಮಸೂದೆ ಬಂದಂಥ ಸಂದರ್ಭದಲ್ಲಿ ಎಷ್ಟು ಜನ ವಿದ್ಯಾರ್ಥಿಗಳಿದ್ದರು, ಎಷ್ಟು ಕಾಲೇಜುಗಳಿದ್ದವು, ಎಷ್ಟು ವಿಶ್ವವಿದ್ಯಾನಿಲಯಗಳಿದ್ದವು, ಇವೆಲ್ಲವೂ ಕೂಡ ಇವತ್ತು ಐದು ಪಟ್ಟು, ಹತ್ತು ಪಟ್ಟು ಹೆಚ್ಚಾಗಿದೆ. ಅಂದಮೇಲೆ ಅದಕ್ಕೆ ತಕ್ಕನಾಗಿ, ಅದಕ್ಕನುಗುಣವಾಗಿ ನಮ್ಮ ಶಾಸನಗಳು, ನಮ್ಮ ಮಸೂದೆಗಳು, ನಮ್ಮ ನೀತಿಗಳು ಬದಲಾವಣೆಯಾಗತಕ್ಕಂಥಾದ್ದು ಅವಶ್ಯಕ. ಉದಾಹರಣೆಗೆ ಇವತ್ತು ಕಳೆದ ಐದು-ಹತ್ತು ವರ್ಷಗಳಿಂದ ಕರ್ನಾಟಕ ರಾಜ್ಯದಲ್ಲಿ ಇಡೀ ರಾಷ್ಟ್ರಕ್ಕಲ್ಲ, ಇಡೀ ಪ್ರಪಂಚಕ್ಕೆ ಮಾದರಿಯಾಗುವಂತಹ ಇನ್‌ಫರ್ಮೇಷನ್ ಟೆಕ್ನಾಲಜಿ ರೆವಲ್ಯೂಷನ್ ಆಯಿತು. ಸ್ವಾಮಿ, ಏತಕ್ಕಾಯಿತು? ಈ ರಾಜ್ಯದಲ್ಲಿ ಪ್ರಥಮತಃ ಈ ಇಂಜಿನಿಯರಿಂಗ್ ಕಾಲೇಜುಗಳು ಬಂದ ಕಾರಣಕ್ಕಾಗಿ, ಈಗ ಹೆಚ್ಚು ಇಂಜಿನಿಯರಿಂಗ್ ಕಾಲೇಜುಗಳು ಬಂದ ಕಾರಣಕ್ಕಾಗಿ ಮತ್ತು ಒಳ್ಳೆಯ ಪ್ರತಿಭಾವಂತ ವಿದ್ಯಾರ್ಥಿಗಳು ತಮ್ಮ ಪದವಿಯನ್ನು ಪಡೆದುಕೊಂಡ ಮೇಲೆ ಹೊರ ರಾಜ್ಯಕ್ಕೆ, ಹೊರ ರಾಷ್ಟ್ರಕ್ಕೆ ಹೋಗಿ ಅಲ್ಲಿ ಒಳ್ಳೆಯ ಹೆಸರು ಮಾಡಿ ಇದೆಲ್ಲಾ ಆದ ಮೇಲೆ ಈ ಬದಲಾವಣೆ ತರತಕ್ಕಂಥ ಅವಶ್ಯಕತೆ ಇದೆ ಎನ್ನುವ ಮಾತನ್ನೂ ಕೂಡ ನಾನು ಹೇಳಿದ್ದೇನೆ. ಇವತ್ತು ಬೇರೆ ಬೇರೆ ಫಿಸಿಕ್ಸ್ ಇರಬಹುದು, ಮ್ಯಾಥಮ್ಯಾಟಿಕ್ ಇರಬಹುದು, ಬರೀ ಇಂಜಿನಿಯರಿಂಗ್ ಕಾಲೇಜು ಅಷ್ಟೇ ಅಲ್ಲ, ಒಳ್ಳೆಒಳ್ಳೆಯ ಮ್ಯಾಥಮೆಟೀಷಿಯನ್ಸ್ ನಮ್ಮಿಂದ ಹೋಗಿದ್ದಾರೆ. ಆ ಇಂಜಿನಿಯರಿಂಗ್ ಕಾಲೇಜು ಆಚೆ ಹೋಯಿತು. ಮೆಡಿಕಲ್ ಕಾಲೇಜು ಆಚೆ ಹೋಯಿತು. ಇವತ್ತು ಅವನ್ನೇ ಬೇರೆ ಪ್ರತ್ಯೇಕ ವಿಶ್ವವಿದ್ಯಾನಿಲಯಗಳನ್ನು ಮಾಡಿದರು. ತಾವೇ ಮಾಡಿದಿರಿ. ಆ ಬದಲಾವಣೆಗೆ ಅನುಗುಣವಾಗಿ ನಾವು ಇವತ್ತೂ ಕೂಡ ಆ ಬದಲಾವಣೆಯನ್ನು ತರಬೇಕು ಎನ್ನುವಂಥ ಮಾತನ್ನೂ ಕೂಡ ನಾನು ಹೇಳಿದ್ದೇನೆ. ನಾನು ನೇರವಾಗಿ ವಿಷಯಕ್ಕೆ ಬರುತ್ತೇನೆ. ಇದು ಗೊಂದಲ ತರತಕ್ಕಂತಹ ಮಸೂದೆ ಎಂದು ನಮ್ಮ ವಿರೋಧ ಪಕ್ಷದ ನಾಯಕರು ಹೇಳಿದರು. ಅವರ ಬಗ್ಗೆ ನನಗೆ ಬಹಳ ಗೌರವ ಇದೆ. ಅವರು ಬಹಳ ಚೆನ್ನಾಗಿ ಮಾತನಾಡುತ್ತಾರೆ, ಒಳ್ಳೆಯ ವಿಷಯಗಳನ್ನು ತಿಳಿದುಕೊಂಡಿದ್ದಾರೆ. ಆದರೆ ನನಗೆ ಆಶ್ಚರ್ಯ ಏನು ಆಯಿತು ಎಂದರೆ ಅವರು ಈ ಶಾಸನವನ್ನು 'ಮರಣ ಶಾಸನ' ಎಂದು ವರ್ಣನೆ ಮಾಡಿದ್ದಾರೆ. ಅದು ಯಾರಿಗೆ ನಾವು ಕೊಲೆ ಮಾಡುವುದಕ್ಕೆ ಹೊರಟಿದ್ದೇವೋ ನನಗಂತೂ ಗೊತ್ತಿಲ್ಲ. ಆದರೆ ಕಾಂಗ್ರೆಸ್ಸಿಕರಣ, ಮರಣ ಶಾಸನ ಖಂಡಿತವಾಗಿ ಇಲ್ಲ. ವಿರೋಧ ಪಕ್ಷದ ನಾಯಕರಿಗೆ ನಾನು ಹೇಳುತ್ತೇನೆ, ನನ್ನ ಆಸೆ ಅದಲ್ಲವೇ ಅಲ್ಲ. ಏಕೆಂದರೆ ಒಂದು ವಿಶ್ವವಿದ್ಯಾನಿಲಯದಲ್ಲಿ ಒಬ್ಬ ವೈಸ್ ಛಾನ್ಸಲರನ್ನು ಅಪಾಯಿಂಟ್‌ಮೆಂಟ್ ಮಾಡುವಂತಹ ಸಂದರ್ಭದಲ್ಲಿ ಸರ್ಕಾರಕ್ಕೆ ಯಾವುದೂ ಜವಾಬ್ದಾರಿ ಇರಬಾರದು ಎಂಬುದು ತಮ್ಮ ಆಸೆ. ಮಾನ್ಯ ಸೋಮಶೇಖರ್ ಅವರು ಅಟಾನಮಿ ಬಗ್ಗೆ ಹೇಳಿದ್ದು

ಏನು ಒಬ್ಬ ನ್ಯಾಯಾಧೀಶರು ಹೇಳಿರತಕ್ಕಂತಹ ಮಾತು ಅಟಾನಮಿ. It is an academic autonomy, it is not the administrative autonomy. What we should be concerned about is only the academic autonomy, not the administrative autonomy. ಇವತ್ತು ಸರ್ಕಾರ ಹಣ ಕೊಡುತ್ತದೆ. ಅಲ್ಲಿ ಯಾವ ರೀತಿ ಹಣ ಖರ್ಚಾಗುತ್ತದೆ? ಡೆವಲಪ್‌ಮೆಂಟಲ್ ಆಕ್ಟಿವಿಟೀಸ್ ಯಾವ ರೀತಿ ಆಗುತ್ತದೆ? ಯಾವ ರೀತಿ ಕಟ್ಟಡ ಮಾಡುತ್ತಾರೆ? ಯಾವ ರೀತಿ ಕೊಟ್ಟಿದ್ದಂತಹ ಆ ಜಾಗವನ್ನು ಉಳಿಸಿಕೊಂಡಿದ್ದಾರೆ? ಅಥವಾ ಬೇರೆ ಯಾರಿಗೋ ಮಾರಿದ್ದಾರೆ? ಇಂತಹ ವಿಚಾರಗಳು they have nothing to do with the academic matters. ನಾನು ತಮಗೆ ಒಂದು ವಿಚಾರವನ್ನು ಜ್ಞಾಪಕ ಮಾಡಿಕೊಟ್ಟರೆ ತಾವು ತಪ್ಪು ತಿಳಿಯಬಾರದು. ಕೇಂದ್ರ ಸರ್ಕಾರ ಇದ್ದಕ್ಕಿದ್ದ ಹಾಗೆ ಒಂದು ಸೂಚನೆಯನ್ನು ಎಲ್ಲಾ ವಿಶ್ವವಿದ್ಯಾನಿಲಯಗಳಿಗೆ ಕೊಟ್ಟರು. ಮಾನ್ಯ ಮುರಳಿ ಮನೋಹರ್ ಜೋಷಿಯವರು ಕೊಟ್ಟರು, ಅವರ ಬಗ್ಗೆ ನನಗೆ ಬಹಳ ಗೌರವ ಇದೆ. ಏಕೆಂದರೆ ಅವರು ಪ್ರೊಫೆಸರ್ ಆಗಿರತಕ್ಕವರು. ಈ ರಾಷ್ಟ್ರದಲ್ಲಿ we will have to re-write the Indian History as Hinduism and introduce courses like Astrology, Hindu Rituals, Vedic Mathematics at the University level. ಇದು ಯಾವ ಅಟಾನಮಿ ಸ್ವಾಮಿ? Is it not an interference in the academic autonomy, or the administrative autonomy. ಕೇಂದ್ರ ಸರ್ಕಾರದಲ್ಲಿ ಕುಳಿತುಕೊಂಡು ಯೂನಿವರ್ಸಿಟಿ ಗ್ರಾಂಟ್ಸ್ ಕಮಿಷನ್ನಿನ ಅಧ್ಯಕ್ಷರು ಅಥವಾ ಸಚಿವರು ಹೇಳುತ್ತಾರೆ. ಪ್ರತಿ ಒಂದು ವಿಶ್ವವಿದ್ಯಾನಿಲಯದಲ್ಲೂ ನೀವು ವೇದಿಕ್ ಸೈನ್ಸ್ ತರಬೇಕು ಅಥವಾ ನೀವು ಅಸ್ಟ್ರಾಲಜಿಯನ್ನು ತರಬೇಕು, ಪಿಎಚ್‌ಡಿ ಮಾಡಬೇಕು, ಎಂಎಸ್‌ಸಿ ಮಾಡಬೇಕು ಎಂದು ಹೇಳಿ ಅಕಾಡೆಮಿಕ್ ಮ್ಯಾಟರ್ಸ್‌ನಲ್ಲಿ ಇಂಟರ್‌ಫಿಯರ್ ಆಗುತ್ತಾರಲ್ಲಾ, ಅದರ ಬಗ್ಗೆ ತಾವು ಹೇಗೆ ವ್ಯಾಖ್ಯಾನ ಮಾಡುತ್ತೀರೋ ಗೊತ್ತಿಲ್ಲ. ಇವತ್ತು ಈ ೨೫೦, ೨೬೦ ವಿಶ್ವಿದ್ಯಾನಿಲಯಗಳು ನಮ್ಮ ರಾಷ್ಟ್ರದಲ್ಲಿ ಇರತಕ್ಕಂಥಹವು, which are under the control of U.G.C.? ಯಾರನ್ನು ಇದಕ್ಕೆ ಅಧ್ಯಕ್ಷರನ್ನು ಮಾಡುತ್ತಾರೆ? ಇಡೀ ೨೫೦, ೨೬೦ ಯೂನಿವರ್ಸಿಟಿಗಳನ್ನು ನೋಡತಕ್ಕ ಅಧ್ಯಕ್ಷರನ್ನು ಯಾರು ಸ್ವಾಮಿ ಅಪಾಯಿಂಟ್ ಮಾಡುವುದು? ಕೇಂದ್ರ ಸರ್ಕಾರ ಅಪಾಯಿಂಟ್‌ಮೆಂಟ್ ಮಾಡುತ್ತದೆ. ಕ್ಯಾಬಿನೆಟ್ ಮಾಡುತ್ತದೆ. ಅದಕ್ಕೆ ತಾವು ಏನು ಉತ್ತರ ಹೇಳುತ್ತೀರೋ ನನಗೆ ಗೊತ್ತಿಲ್ಲ? ಮತ್ತು ಜಡ್ಜಸ್‌ಗಳನ್ನು ಅಪಾಯಿಂಟ್ ಮಾಡುತ್ತಾದೆ. ಸರ್ಕಾರ ಜಡ್ಜಸ್‌ಗಳನ್ನು ಅಪಾಯಿಂಟ್ ಮಾಡುತ್ತವೆ. ರೆಕ್ಮಂಡೇಷನ್ ಸರ್ಕಾರ ಮಾಡುತ್ತದೆ. ಇಲ್ಲಿ ಕೂಡ ಕ್ವಾಸಿ ಗವರ್ನಮೆಂಟನ್ನು ಕ್ವಾಸಿ ಜುಡಿಷಿಯರಿ ಮಾಡತಕ್ಕದ್ದು ಸರ್ಕಾರ ಮಾಡುತ್ತದೆ. ಯಾವ ರೀತಿ, ಇದು ಏನೋ ಒಂದು ರೀತಿ ರಾಜಕೀಯ ಮಾಡುತ್ತಾರೆ.

ಯಾವ ರೀತಿ ಇದನ್ನು ನೀವು ವರ್ಣನೆ ಮಾಡುತ್ತೀರಿ ಎಂದು ಹೇಳಿ, ನನಗೆ ಗೊತ್ತಾಗುವುದಿಲ್ಲ. ಆದರೂ ಕೂಡ ಇವತ್ತು ವಿಶ್ವವಿದ್ಯಾನಿಲಯಕ್ಕೆ ವೈಸ್ ಛಾನ್ಸಲರನ್ನು ಅಪಾಯಿಂಟ್‌ಮೆಂಟ್ ಮಾಡುವಂತಹ ಒಂದು ಮಸೂದೆಯನ್ನು ೧೯೯೯ ಅಕ್ಟೋಬರ್‌ರಲ್ಲಿ ಮಾನ್ಯ ಸಿಂಧ್ಯಾ ಅವರು, ಮಾನ್ಯ ಸೋಮಶೇಖರ್ ಅವರು, ಮಾನ್ಯ ಪಾಟೀಲ್ ಅವರು, ಮಾನ್ಯ ಗೌಡರು ಇರತಕ್ಕ ಸಂದರ್ಭದಲ್ಲಿ ತಂದಿದ್ದಾರೆ. ಸ್ವಾಮಿ, ಕನ್ನಡ ವಿಶ್ವವಿದ್ಯಾನಿಲಯಕ್ಕೆ ವೈಸ್ ಛಾನ್ಸಲರನ್ನು ಅಪಾಯಿಂಟ್‌ಮೆಂಟ್ ಮಾಡತಕ್ಕಂತಹ ಮಸೂದೆಯನ್ನು ತಂದರು. ಅದು ಈಗಲೂ ಇದೆ. It is in existence. ಎರಡು ಜನರನ್ನು ವಿಶ್ವವಿದ್ಯಾನಿಲಯಕ್ಕೆ, ಹಂಪಿ ಯೂನಿವರ್ಸಿಟಿಗೆ ವೈಸ್ ಛಾನ್ಸಲರ್‌ನ್ನಾಗಿ ಮಾಡಿದೆವು. ಮೊನ್ನೆ ಕೂಡ ನಾವು ಮಾಡಿದ್ದೇವೆ. ತಾವು ಮಾಡಿದಂತಹ ಮಸೂದೆಯನ್ನು ಹಿಡಿದುಕೊಂಡೇ ಒಬ್ಬ ವೈಸ್-ಛಾನ್ಸಲರನ್ನು ಅಪಾಯಿಂಟ್‌ಮೆಂಟ್ ಮಾಡಿದೆವು. ದಯಮಾಡಿ ಅದರಲ್ಲಿ ಒಂದು ಪ್ಯಾರಾಗ್ರಾಫ್ ಓದುತ್ತೇನೆ

"The Government shall for the purpose of sub section constitute a search committee consisting of three persons of whom one shall be nominated by the Executive Committee"

ಆ ಸಿಂಡಿಕೇಟ್ ಏನು ಹೇಳುತ್ತದೆ ಅದು.

One shall be nominated by the U.G.c. and one shall be nominated by the Government.

The search Committee shall submit to the Government a Panel consisting of three names in alphabetical order. Such panel shall not contain the name of any member of the said Committee. The Government shall recommend to the Chancellor the name of one of the three persons. in the said Panel for being appointed as Vice Chancellor. the Government, may if necessary, obtain a new panel from the Search Commettee. Accordingly, upon such requisition by the Government, the Search Committee shall submit to the Government a new panel."

This is in existence.

ಇದಕ್ಕೆ ಬದಲಾಗಿ ಒಂದು ಶಬ್ದ ಕೂಡ ನನ್ನ ಈ ಪ್ರಪೋಸ್ಡ್ ಅಮೆಂಡ್‌ಮೆಂಟಿನಲ್ಲಿ ಇಲ್ಲ. ಈಗಾಗಲೇ ನಾವು ಇಬ್ಬರು ವೈಸ್ ಛಾನ್ಸಲರ್‌ಗಳನ್ನು ಅಪಾಯಿಂಟ್‌ಮೆಂಟ್ ಮಾಡಿದ್ದೇವೆ ಇದರ ಮೇಲೆ.

(ಗೊಂದಲ)

ಶ್ರೀ ಎ.ರಾಮದಾಸ್: ಬೇಡ ಎಂದ ಮೇಲೆ ಕೂರುತ್ತೇನೆ. ಒಳ್ಳೆಯ ವಿಚಾರವನ್ನು ನಿಮ್ಮ ಮುಂದೆ ಹೇಳಬೇಕು. ಇಲ್ಲಿ ಪ್ರಮುಖವಾಗಿ ಅದಾಗಿರುವಂತಹದನ್ನೂ ಕೂಡ ನಾವು ರೆಫರೆನ್ಸ್ ಮಾಡಿದ್ದೇವೆ.

ಶ್ರೀ ಡಿ.ಕೆ.ಶಿವಕುಮಾರ್ (ಸಹಕಾರ ಸಚಿವರು): ಸ್ವಾಮಿ, ತಾವು ಸೆನೆಟ್ ಕಮಿಟಿ ಮೆಂಬರ್ ಆಗಿದ್ದಿರಿ.

ಶ್ರೀ ಎ.ರಾಮದಾಸ್: ಹೌದು ಸಾರ್, ನಾವೇನೂ ಹೇಳುತ್ತಿಲ್ಲ.

ಶ್ರೀ ಡಿ.ಕೆ.ಶಿವಕುಮಾರ್: ಬೇರೆಯವರಿಗಾದರೂ ಅವಕಾಶ ಕೊಡಿ.

(ಗೊಂದಲ)

ಶ್ರೀ ಎ.ರಾಮದಾಸ್: ಅವರು ಮಾತನಾಡಿ ಎಂದರೂ ಮಾತನಾಡಿಲ್ಲ. ಅಲ್ಲಿ ಹೇಳಿದಂತಹ ವಿಷಯಕ್ಕೆ ಕನ್ನಡ ವಿಶ್ವವಿದ್ಯಾನಿಲಯ ಮತ್ತು ಇನ್ನೊಂದು ವಿಶ್ವವಿದ್ಯಾನಿಲಯಕ್ಕೆ ಸರ್ಕಾರ ನೇಮಕ ಮಾಡಿದಂತಹ ಸಂದರ್ಭದಲ್ಲಿ ಆ ಎರಡು ವಿಶ್ವವಿದ್ಯಾನಿಲಯಗಳೂ ಸಂಪೂರ್ಣವಾಗಿ ಸರ್ಕಾರದ ಹಣದಲ್ಲಿ, ರಾಜ್ಯ ಸರ್ಕಾರದ ಹಣದಲ್ಲಿ ರನ್ ಆಗುವಂಥದ್ದು. ನಡೆಸುವಂಥಾದ್ದು. ಆದರೆ ಬಾಕಿ ವಿಶ್ವವಿದ್ಯಾನಿಲಯಗಳು ರಾಜ್ಯ ಸರ್ಕಾರದ ಜೊತೆಯಲ್ಲಿ ಯುಜಿಸಿ ಹಣವನ್ನು ತೆಗೆದುಕೊಂಡು ಬರುವಂತಹ ವಿಶ್ವವಿದ್ಯಾನಿಲಯಗಳು ಇಷ್ಟೇ ನನ್ನ ಕ್ಲಾರಿಫಿಕೇಷನ್.

Dr.G.PARAMESHWAR: Vice Chancellor is the Vice Chancellor. Who pays the money, is different. ಯೂನಿವರ್ಸಿಟಿ ಗ್ರಾಂಟ್ಸ್ ಕಮಿಷನ್ ಸೆಪರೇಟ್ ಎಲ್ಲಿಂದಲೋ ಬಂದಿದ್ದು ಅಲ್ಲ. That is also under the Government. ಆದರೆ ಅದು ಕೇಂದ್ರ ಸರ್ಕಾರದ ಅಧೀನದಲ್ಲಿದೆ. ಇದು ರಾಜ್ಯ ಸರ್ಕಾರದ ಅಧೀನದಲ್ಲಿದೆ. ಇಷ್ಟೇ ವ್ಯತ್ಯಾಸ All India Council of Technical Education, which controls the entire technical education in the country. Who appoints its Chairman? National Council for Teachers Education - it is again an

important body. It is again appointed by the Central Government. ಯಾರು ಮಾಡುತ್ತಾರೆ ಸ್ವಾಮಿ? ಇವತ್ತು ನಾವು ಇದನ್ನು ಮಾಡಿದ್ದೇವೆ. ಮಾನ್ಯ ಜಗದೀಶ್ ಶೆಟ್ಟರ್ ಅವರು ಹೇಳಿದರು. ಯುಜಿಸಿ ಛೇರ್ಮನ್ ಅವರು ಒಂದು ಹೇಳಿಕೆ ಕೊಟ್ಟರು ಎಂದು ಹೇಳಿದರು. ತಮಗೇ ಗೊತ್ತಿದೆ, ತಾವು ಗೌರವಾನ್ವಿತ ಸದಸ್ಯರಾಗಿ ಸಮಿತಿಯಲ್ಲಿ ಇದ್ದಿರಿ. ಇದು ಚರ್ಚೆಗೆ ಬಂದಾಗ ಸನ್ಮಾನ್ಯ ರಾಮಯ್ಯನವರು ಇಲ್ಲಿ ಇಲ್ಲ. ಅವರು ಪ್ರಶ್ನೆಯನ್ನು ಎತ್ತಿದ್ದರು, ಯೂನಿವರ್ಸಿಟಿ ಗ್ರಾಂಟ್ಸ್ ಕಮಿಷನ್ನಿನ ಅಧ್ಯಕ್ಷರು ಏಕೆ ನಮ್ಮ ಸದಸ್ಯರ ಹಕ್ಕಿಗೆ ಚ್ಯುತಿ ಬರುವ ರೀತಿಯಲ್ಲಿ ಮಾತನಾಡಿದ್ದಾರೆ? ನಾವು ಶಾಸನ ಮಾಡುವವರು. ಶಾಸನ ಮಾಡುವುದಕ್ಕೆ ಯುಜಿಸಿಯ ಪರ್ಮಿಷನ್ ತೆಗೆದುಕೊಳ್ಳಬೇಕಾ? ನಮ್ಮ ಹಕ್ಕಿಗೆ ಇವರು ಅಡ್ಡ ಬರುತ್ತಿದ್ದಾರೆ ಎನ್ನುವಂತಹ ಪ್ರಶ್ನೆ ಮಾಡಿದರು. ತಾವೇ ನಿರ್ಣಯ ಮಾಡಿದಿರಿ. ಅವರಿಗೆ ಕಾಗದ ಬರೆದು ನೀವು ಹೇಳಿಕೆ ಕೊಟ್ಟಿರತಕ್ಕದ್ದು ನಿಜವೇ ಎಂದು ಕೇಳಬೇಕು ಎಂದು ಹೇಳಿದಿರಿ. ನಾವು ಕಾಗದ ಬರೆದೆವು. ಆದರೆ ಅವರು ಉತ್ತರ ಕೊಡಲಿಲ್ಲ. ಮತ್ತೊಂದು ಸಾರಿ ಪತ್ರ ಬರೆದೆವು. ಆಗಲೂ ಉತ್ತರ ಕೊಡಲಿಲ್ಲ ಆಯಿತು ಆಂಧ್ರಪ್ರದೇಶದಲ್ಲಿ ೧೯೯೯ರಲ್ಲಿ ಇದೇ ಬದಲಾವಣೆಯನ್ನು ತಂದಿದ್ದಾರೆ. ತಾವೂ ಕೂಡ ಇದ್ದಿರಿ. ಅನೇಕ ಗೌರವಾನ್ವಿತ ಸದಸ್ಯರು ನಮ್ಮ ಜೊತೆ ಆಂಧ್ರ ಪ್ರದೇಶದ ವಿಶ್ವವಿದ್ಯಾನಿಲಯಕ್ಕೆ ನಮ್ಮ ಸರ್ಕಾರದ ಜೊತೆಯಲ್ಲಿ ಚರ್ಚೆ ಮಾಡುವಾಗ ಇದ್ದಿರಿ. ಇವತ್ತು ಆಂಧ್ರ ಪ್ರದೇಶದಲ್ಲಿ ಏನು ಮಸೂದೆ ತಂದರು ಸ್ವಾಮಿ? ಅದರಲ್ಲಿ ಏನಾದರೂ ವ್ಯತ್ಯಾಸ ಇದೆಯಾ? ಸೇಮ್, ನಾನು ಏನು ಅಲ್ಲಿ ಕನ್ನಡದ ವಿಶ್ವವಿದ್ಯಾನಿಲಯದಲ್ಲಿ ಓದಿದೆ ಅಥವಾ ನಮ್ಮಲ್ಲಿ ಇದೆ, ಅದೇ ಇಲ್ಲಿದೆ, ೧೯೯೧ರಲ್ಲಿ. ಆದರೆ ವಿಶ್ವವಿದ್ಯಾನಿಲಯ ಯುಜಿಸಿಯವರು ಯಾವುದೇ ರೀತಿಯ ಫಂಡ್ಸನ್ನು ಕಟ್ ಮಾಡಲಿಲ್ಲ. ಕರ್ನಾಟಕಕ್ಕೆ ಮಾಡುತ್ತಾರಾ? Can they do it? ಆದ್ದರಿಂದ ಯುಜಿಸಿಯವರು ಈ ಒಂದು ಕಾರಣಕ್ಕಾಗಿ ನಮ್ಮ ವಿಶ್ವವಿದ್ಯಾನಿಲಯಕ್ಕೆ ಹಣ ನಿಲ್ಲಿಸುತ್ತಾರೆ ಎನ್ನತಕ್ಕ ಮಾತು ಸತ್ಯಕ್ಕೆ ದೂರವಾದುದು. ಅದು ಸಾಧು ಕೂಡ ಅಲ್ಲ.

೮.೩೦ ಪಿಎಂ

ಆದ್ದರಿಂದ ಇವತ್ತು ನಾವಾದರೂ ಮಾಡಿರುವುದೇನು? ಒಂದು ವಿಶ್ವವಿದ್ಯಾನಿಲಯಕ್ಕೆ ಒಬ್ಬರು ಉಪಕುಲಪತಿಯನ್ನು ಸರ್ಕಾರ ನೇಮಕ ಮಾಡುತ್ತದೆಂದರೆ This is an elected august body, which has created this Act. Is it not an insult to us if he says like that. If you say that this Government, which is elected by the people, and all of us, sitting here and make a law, which is enacted by this august body and all these respected members,

is it not an insult to say that the Government cannot appoint Vice-Chancellor. We are responsible to the people, who have elected us. ವಿಶ್ವವಿದ್ಯಾನಿಲಯದಲ್ಲಿ ಹಣ ಕಳ್ಳತನ ಆದರೆ, ಫಂಡ್ಸ್ ಮಿಸ್ ಅಪ್ರೋಪ್ರಿಯೇಷನ್ ಆದರೆ, ಯಾವುದೋ ಕೊಲೆಯಾದರೆ, ಪರೀಕ್ಷೆಗಳನ್ನು ಮುಂದೂಡಿದರೆ, ಪರೀಕ್ಷೆಯಲ್ಲಿ ಕಾಪಿ ಮಾಡಿದ್ದರೆ, ಪ್ರಶ್ನೆ ಪತ್ರಿಕೆಗಳು ಲೀಕೇಜ್ ಆದರೆ ಇಲ್ಲಿ ಸದನದಲ್ಲಿ ಬಂದು ಯಾರು ಉತ್ತರವನ್ನು ಕೊಡುತ್ತಾರೆ? ಸರ್ಕಾರದಲ್ಲಿ ತಾವೆಲ್ಲರೂ ಇದ್ದೀರಿ, ಎಲ್ಲಿಂದಲೋ ಭೂತ ಬಂದು ಸರ್ಕಾರವಾಗಿ ಕುಳಿತುಕೊಂಡಿಲ್ಲ. ತಾವು ದಯಮಾಡಿ ತಪ್ಪು ಕಲ್ಪನೆಯಾಗಿ ತಿಳಿದುಕೊಳ್ಳಬೇಡಿ. ರಾಜ್ಯಪಾಲರ ಹುದ್ದೆ ಬಹಳ ಗೌರವಯುತವಾದದ್ದು, ರಾಜ್ಯಪಾಲರು ಇರತಕ್ಕದ್ದು ಬಹಳ ಗೌರವಯುತವಾದ ಕೆಲಸವನ್ನು ಮಾಡಲು, ನಮಗ್ಯಾರಿಗೂ ಅವರ ಬಗ್ಗೆ ಅಗೌರವವಿಲ್ಲ. ಒಬ್ಬರು ಉಪಕುಲಪತಿಯವರನ್ನು ಸರ್ಕಾರ ನೇಮಕ ಮಾಡುತ್ತದೆಂದರೆ ಅದರಿಂದ ರಾಜ್ಯಪಾಲರಿಗೆ ಅಗೌರವ ಸೂಚಿಸಿದಂತಾಗುತ್ತದೆಂದರೆ ನಾವು ಏನು ಹೇಳಬೇಕು? ಆದ್ದರಿಂದ, ತಾವು ದಯಮಾಡಿ ಆ ಮಾತನ್ನು ವಾಪಸ್ ತೆಗೆದುಕೊಳ್ಳಬೇಕು. ಸೆನೆಟ್‌ನ್ನು ಅಬಾಲಿಷ್ ಮಾಡಿರುವ ಬಗ್ಗೆ ತಾವು ಹೇಳಿದ್ದೀರಿ. It is not my brain child. Let me tell you. It is the brain child of so many educationists at the national level. ಇದರ ಬಗ್ಗೆ ರಾಷ್ಟ್ರೀಯ ಮಟ್ಟದಲ್ಲಿ ಚರ್ಚೆಯಾಗಿ, ತಾವು ಹೇಳಿದ್ದ ಶಿಕ್ಷಣ ತಜ್ಞರೆಲ್ಲರೂ ಕಲೆತು ವಿಶೇಷವಾಗಿ ಚರ್ಚೆ ಮಾಡಿ ಯು.ಜಿ.ಸಿ.ಯವರಿಗೆ ಈ ಸೆನೆಟ್ ಪದ್ಧತಿಯನ್ನು ಅಬಾಲಿಷ್ ಮಾಡಿ ಎಂದು ಸಲಹೆ ಕೊಡುತ್ತಾರೆ. ಅದನ್ನು ಶ್ರೀ ನವನೀತರಾವ್ ಸಮಿತಿಯ ವರದಿಯಲ್ಲಿ ಹೇಳುತ್ತಾರೆ.

As per the existing situation in 1976, the Karnataka State Universities Act stipulates three major authorities of the University, the Senate, the Syndicate and the Academic Council. The other bodies are subsidiary to these three bodies. In the last two decades, various committees at the national level have come up with the proposal that the Senate is an out-moded concept and it is not serving any useful purpose for improving the quality of higher education or for the proper management of the institutions. Is it my brain child? ೧೯೯೭ರಲ್ಲಿ ಮಾನ್ಯ ಸೋಮಶೇಖರ್‌ರವರು ಒಂದು ಮಾಡೆಲ್ ಆ್ಯಕ್ಟ್‌ನ್ನು ತಂದಿದ್ದಾರೆ. ಅದು ನನ್ನ ಹತ್ತಿರವಿದೆ. ಮಾನ್ಯ ಸೋಮಶೇಖರ್‌ರವರು ಯೂನಿವರ್ಸಿಟಿ ಬಾಡೀಸ್‌ನಲ್ಲಿ ಮೂರು ಇರತಕ್ಕದ್ದನ್ನು ಎರಡು ಮಾಡಿದರು. ಸೆನೆಟ್

ತೆಗೆದು ಅಕೆಡಮಿಕ್ ಕೌನ್ಸಿಲ್ ಮತ್ತು ಸೆನೆಟ್‌ನ್ನು ಒಂದುಗೂಡಿಸಿ ಅಕೆಡಮಿಕ್ ಸೆನೆಟ್ ಎಂದು ಮಾಡಿದ್ದರು. ಇವತ್ತು ರಾಜ್ಯದಲ್ಲಿರುವ ವಿಶ್ವವಿದ್ಯಾನಿಲಯಗಳಲ್ಲಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯವನ್ನು ತಾವೇ ಕಾನ್‌ಸ್ಟಿಟ್ಯೂಟ್ ಮಾಡಿದ್ದು ಮೆಡಿಕಲ್ ವಿಶ್ವವಿದ್ಯಾನಿಲಯವನ್ನು ತಾವೇ ಕಾನ್‌ಸ್ಟಿಟ್ಯೂಟ್ ಮಾಡಿದ್ದು. ರಾಷ್ಟ್ರದಲ್ಲಿ ಇವೆರಡೂ ಪ್ರತಿಷ್ಠಿತ ವಿಶ್ವವಿದ್ಯಾನಿಲಯಗಳಾಗಿವೆ. ಆದರೆ ಇದಕ್ಕೆ ಸೆನೆಟ್ ಇಲ್ಲ. ಕೃಷಿ ವಿಶ್ವವಿದ್ಯಾನಿಲಯ ಧಾರವಾಡದಲ್ಲಿದೆ. ಇಡೀ ದೇಶದಲ್ಲಿ ಪ್ರತಿಷ್ಠಿತವಾದ ಕೃಷಿ ವಿಶ್ವವಿದ್ಯಾನಿಲಯವೆಂದು ಅದಕ್ಕೆ ಅವಾರ್ಡ್ ಕೊಟ್ಟರು. ಅಲ್ಲೂ ಸೆನೆಟ್ ಇಲ್ಲ. ಅಲ್ಲಿ ನಾನು ಎರಡು ಟರ್ಮ್ ಅಂದರೆ ಆರು ವರ್ಷ ಸಿಂಡಿಕೇಟ್ ಸದಸ್ಯನಾಗಿ ಕೆಲಸ ಮಾಡಿದ್ದೇನೆ. ಅಲ್ಲಿ ಬೋರ್ಡ್ ಆಫ್ ರೀಜೆಂಟ್ಸ್ ಮತ್ತು ಅಕೆಡಮಿಕ್ ಕೌನ್ಸಿಲ್ ಎಂಬ ಎರಡು ಬಾಡಿಗಳು ಮಾತ್ರ ಇದೆ. ಅಲ್ಲಿ ಚುನಾವಣೆ ಸಹ ಇಲ್ಲ. ಅಲ್ಲಿ ನಾಮಿನೇಷನ್ ಮಾಡಿದ್ದಾರೆ. ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯ ಮತ್ತು ಮೆಡಿಕಲ್ ವಿಶ್ವವಿದ್ಯಾನಿಲಯಗಳಲ್ಲಿ ಸಹ ಚುನಾವಣೆಗಳು ಇಲ್ಲ. ಆದರೆ, ಅವುಗಳು ಚೆನ್ನಾಗಿ ಕೆಲಸ ಮಾಡುತ್ತಿಲ್ಲವೆ? ಅಲ್ಲಿರುವ ಯುವಕರಿಗೆ ಅವಕಾಶವಿಲ್ಲವೆ? ಏಕೆ ನಾವು ತಪ್ಪು ಕಲ್ಪನೆ ಇಟ್ಟುಕೊಂಡು ಹೋಗಬೇಕು? This is the changing atmosphere in the education system. We need to change according to the requirement. ಹೋದ ವರ್ಷ ಇಂಜನಿಯರಿಂಗ್ ಕಾಲೇಜುಗಳಲ್ಲಿ ಕಂಪ್ಯೂಟರ್ ಸೈನ್ಸ್‌ಗೆ, ಮಾಹಿತಿ ತಂತ್ರಜ್ಞಾನಕ್ಕೆ ಪ್ರಾತಿನಿಧ್ಯವಿತ್ತು. ಆದರೆ ಈ ವರ್ಷ ಸಿ.ಇ.ಟಿ.ಯಲ್ಲಿ ನಾವು ಹೋಗಿ ನೋಡಿದರೆ ಮೊದಲ ಪ್ರಾತಿನಿಧ್ಯ ಎಲೆಕ್ಟ್ರಾನಿಕ್ಸ್‌ಗೆ ಬಂದಿದೆ. This is a market-oriented education. ಆದ್ದರಿಂದಲೇ ಮಾನ್ಯ ಮುಖ್ಯಮಂತ್ರಿಯವರು ಶಿಕ್ಷಣ ವ್ಯವಸ್ಥೆಯಲ್ಲಿ ಖಾಸಗಿಯವರ ಸಹಭಾಗಿತ್ವವಾಗಬೇಕೆಂದು ಹೇಳಿಕೆ ಕೊಟ್ಟಿದ್ದಾರೆ. ಕಾರ್ಪೊರೇಟ್ ಸೆಕ್ಟಾರ್‌ನವರೆಲ್ಲರೂ ಶಿಕ್ಷಣ ವ್ಯವಸ್ಥೆಯಲ್ಲಿ ಹಣವನ್ನು ಹಾಕಬೇಕು, ಖಾಸಗಿಯವರು ಮುಂದೆ ಬರಬೇಕೆಂದು ನಾವು ಕರೆ ಕೊಟ್ಟಿದ್ದೇವೆ. ಇನ್‌ಫೋಸಿಸ್‌ನವರು, ವಿಪ್ರೋದವರು ಕೋಟ್ಯಾಂತರ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇನ್‌ಫೋಸಿಸ್‌ನವರು ಕರ್ನಾಟಕ ವಿಶ್ವವಿದ್ಯಾನಿಲಯಕ್ಕೆ ಎರಡು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಹಾಗೆಯೇ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಹ ಹಣ ಕೊಟ್ಟಿದ್ದಾರೆ. ಅಭಿವೃದ್ಧಿ ಕೆಲಸಗಳಿಗಾಗಿ ಅವರು ಹಣವನ್ನು ಕೊಟ್ಟಿದ್ದಾರೆ. ಅಂಥ ಪರಿಸ್ಥಿತಿಯಲ್ಲಿ ಇವತ್ತು ಸೆನೆಟ್ ಅಬಾಲಿಷ್ ಮಾಡುತ್ತೇವೆಂದರೆ ಸರಿಯಲ್ಲವೆ? ಒಂದೊಂದು ವಿಶ್ವವಿದ್ಯಾನಿಲಯದ ಸೆನೆಟ್‌ನಲ್ಲಿ ೨೦೦ ರಿಂದ ೨೫೦ ಜನರು ಇದ್ದಾರೆ. ಅದರ ಸಂಖ್ಯೆಯಲ್ಲಿ ಅನ್‌ಲಿಮಿಟೆಡ್. ಅಲ್ಲಿ ಯಾರು ಡೆಲಿಬ್ರೇಷನ್ ಮಾಡುವವರು? ನಾನು ಮೂರು-ಮೂರು ವರ್ಷದ ಅಕೆಡಮಿಕ್ ಕೌನ್ಸಿಲ್ ರೆಸಲ್ಯೂಷನನ್ನು ನೋಡಿದ್ದೇನೆ, ಸೆನೆಟ್ ರೆಸಲ್ಯೂಷನ್‌ನ್ನು ಸಹ ನೋಡಿದ್ದೇನೆ. ನಾಲ್ಕೈದು ಜನರನ್ನು ಬಿಟ್ಟರೆ ಮತ್ತಾರೂ ಆ ಬಗ್ಗೆ ಮಾತನಾಡಿಯೇ ಇಲ್ಲ. ಆದ್ದರಿಂದ, ಅಕೆಡಮಿಕ್

ಕೌನ್ಸಿಲ್‌ನಲ್ಲಿ ಆ್ಯಕ್ಟೀವ್ ಪಾರ್ಟಿಸಿಪೇಷನ್ ಆಗಬೇಕು. ಒಳ್ಳೆಯ ಸಲಹೆ ಸೂಚನೆಗಳು ಬರಬೇಕು, ಎಂದು ಹೇಳಿದರೆ ನಾವು ಇವತ್ತು ತಪ್ಪು ಮಾಡಿದ್ದೇವೆಯೇ? ಮಾನ್ಯ ಮಂಜುನಾಥ್‌ರವರು ಉನ್ನತ ಶಿಕ್ಷಣ ಸಚಿವರಾಗಿದ್ದಾಗ ಶ್ರೀ ಸವದತ್ತಿಯವರ ಅಧ್ಯಕ್ಷತೆಯಲ್ಲಿ ರಿವ್ಯೂ ಕಮಿಷನ್‌ನ್ನು ಮಾಡುತ್ತಾರೆ. ಶ್ರೀ ಸವದತ್ತಿಯವರೂ ಸಹ ಸೆನೆಟ್ ಇರಬಾರದು, ತೆಗೆದುಹಾಕಿ ಎಂದು ಸಲಹೆ ಮಾಡುತ್ತಾರೆ.

'It is recommended that Senate be abolished and Academic Senate which will look after some of the functions of the Senate, in addition to those of the present Academic Council is introduced'

ಇದು ನನ್ನ ಶಿಫಾರಸ್ಸಲ್ಲ, ಅವರೂ ಸಹ ಒಬ್ಬರು ಶಿಕ್ಷಣ ತಜ್ಞರು, ಮಾನ್ಯ ಸವದತ್ತಿಯವರು ಸಹ ನಮ್ಮ ಜಂಟಿ ಸದನದ ಸಮಿತಿಗೆ ಬಂದು ಸಲಹೆಯನ್ನು ಕೊಟ್ಟು ಹೋಗಿದ್ದಾರೆ. ಆದ್ದರಿಂದ, ನಾವು ಏನೋ ಮಾಡಿಬಿಟ್ಟಿದ್ದೇವೆ ಎಂಬ ಕಲ್ಪನೆ ತಮಗೆ ಬರಬಾರದು. ಏಕೆಂದರೆ, ತಾವು ಹೇಳಿದ್ದನ್ನು ಜನರು ತಿಳಿದುಕೊಳ್ಳುತ್ತಾರೆ. ನಾವು ಇಂದ್ರಪ್ರಸ್ಥ ವಿಶ್ವವಿದ್ಯಾನಿಲಯ, ದೆಹಲಿ ಮತ್ತು ಜವಹರಲಾಲ್ ನೆಹರು ವಿಶ್ವವಿದ್ಯಾನಿಲಯಕ್ಕೆ ಹೋಗಿ ಬಂದಿದ್ದೇವೆ. ಅಲ್ಲಿಯೂ ಚುನಾವಣೆಗಳು ಇಲ್ಲ, ಸೆನೆಟ್ ಇಲ್ಲ. ಆದರೆ, ತಮಗೆ ಮಾನ್ಯ ಕೃಷ್ಣರವರ ಸರ್ಕಾರ ಏನೋ ದೊಡ್ಡ ತಪ್ಪು ಮಾಡಿದೆ, ಗೊಂದಲವನ್ನು ಸೃಷ್ಟಿ ಮಾಡಿದೆ ಎಂಬ ತಪ್ಪು ಕಲ್ಪನೆ ಬರುವುದಿದ್ದರೆ ನಾವು ಏನು ಹೇಳಬೇಕು? ಅಕೆಡಮಿಕ್ ಕೌನ್ಸಿಲ್‌ಗೆ ನಾವು ನಾಮಿನೇಷನ್ ಮಾಡುವ ಸಂಖ್ಯೆ ಕೇವಲ ಆರು. ಮಾನ್ಯ ವಿರೋಧ ಪಕ್ಷದ ನಾಯಕರು, ಎಲ್ಲವನ್ನೂ ನಾಮಿನೇಷನ್ ಮಾಡಿಯೇ ನಡೆಸಿಬಿಡುತ್ತೀರಾ ಎಂದು ಹೇಳಿದರು. ಅಕೆಡಮಿಕ್ ಕೌನ್ಸಿಲ್‌ನಲ್ಲಿ ಎಲ್ಲಾ ಪ್ರಿನ್ಸಿಪಾಲ್ಸ್, ಡೀನ್ಸ್, ಕೊಲಿಜಯೇಟ್ ಮತ್ತು ಟೆಕ್ನಿಕಲ್ ಎಜ್ಯುಕೇಷನ್‌ನ ನಿರ್ದೇಶಕರು ಮುಂತಾದವರು ಇರುತ್ತಾರೆ. ನಾಮಿನೇಷನ್ಸ್ ಯಾರದ್ದು ಎಂದರೆ six persons nominated by the State Government from amongst eminent educationists of whom one shall be a person belonging to SC/ST, one person belong to other backward classes, and one woman and one belonging to religious minorities and two others, general. ಉಳಿದವರೆಲ್ಲರೂ ಸಹ ವಿಶ್ವವಿದ್ಯಾನಿಲಯದ ಸಿಸ್ಟಂನಿಂದ ಬರತಕ್ಕವರು. ಅದರಲ್ಲಿ ಆರು ಜನ ವಿದ್ಯಾರ್ಥಿಗಳಿದ್ದಾರೆ. ಮಾನ್ಯ ಸದಸ್ಯರೊಬ್ಬರು ಇದರಲ್ಲಿ ಎನ್.ಎಸ್.ಯು.ಐ.ನವರು ಬಂದುಬಿಡುತ್ತಾರೆ, ಇನ್ಯಾವುದೋ ಪಕ್ಷದವರು ಬಂದು ಬಿಡುತ್ತಾರೆಂದು ಹೇಳಿದರು, ತಮಗೆ ಬೇಕಾದವರು ಬರುತ್ತಾರೆಂದು ಹೇಳಿದರು. ಅದಕ್ಕೂ ಅನುಮಾನ ಬೇಡವೆಂದು ಆನ್ ದಿ ಬೇಸಿಸ್ ಆಫ್ ಮೆರಿಟ್

ಎಂದು ನಾನು ಇಂಟ್ರೊಡ್ಯೂಸ್ ಮಾಡಿದ್ದೇನೆ. ಪೋಸ್ಟ್ ಗ್ರಾಜ್ಯುಯೇಟ್‌ಗೆ ಒಬ್ಬರು, ಗ್ರಾಜ್ಯುಯೇಷನ್‌ಗೆ ಒಬ್ಬರು, ಮಹಿಳೆಯರೊಬ್ಬರು, ಈ ರೀತಿ on the basis of merit ಅದನ್ನು ನಾವು ಮಾಡುವುದಿಲ್ಲ, ಉಪಕುಲಪತಿಯವರೆ ಮಾಡುತ್ತಾರೆ. On the recommendations of Chancellor, the State Government shall appoint, ಎಂದು ಇದ್ದುದನ್ನು ತೆಗೆದುಹಾಕಿ the Vice Chancellor himself can appoint ಎಂದು ಮಾಡಿದ್ದೇವೆ. ಇದರಿಂದಾಗಿ ಅವರೇ ಮಾಡಬಹುದು, ಕಡತ ನಮ್ಮ ಹತ್ತಿರದವರೆಗೂ ಬರುವಂತೆಯೇ ಇಲ್ಲ. ೫೫ ಜನ ಸದಸ್ಯರುಗಳೇನಿದ್ದಾರೆ ಅದರಲ್ಲಿ ೨೦ ಜನ ಗೌರವಾನ್ವಿತ ಶಿಕ್ಷಕರು ಇದ್ದಾರೆ, ಅಧಿಕಾರಿಗಳಿದ್ದಾರೆ. ಸರ್ಕಾರದಿಂದ ಉಪಕಾರ್ಯದರ್ಶಿ ಮಟ್ಟದ ಅಧಿಕಾರಿಯೊಬ್ಬರು ಹೋಗುತ್ತಾರೆ. ಇದರಿಂದ ಅಕೆಡಮಿಕ್ ಕೌನ್ಸಿಲ್ ಎಂದರೆ ಆ್ಯಕ್ಟೀವ್ ಪಾರ್ಟಿಸಿಪೇಷನ್ ಆಗುತ್ತದೆ. I have not compromised anywhere with the academic matters. ಸ್ಯಾಫ್ರನೈಜೇಷನ್ ಎನ್ನತಕ್ಕ ಮಾತು ಬರುತ್ತದೆ, ಅಂಥಾದ್ದು ಎಲ್ಲೂ ಇಲ್ಲ. The Education Minister, has nowhere, I promise you, interferes with the academic matters of the University. ಬೋರ್ಡ್ ಆಫ್ ಸ್ಟಡೀಸ್‌ನ್ನು ಅವರೇ ಮಾಡಿಕೊಳ್ಳಬೇಕು, ಕರಿಕ್ಯುಲಂ ಡೆವಲಪ್‌ಮೆಂಟ್‌ನ್ನು ಅವರೇ ಮಾಡಿಕೊಳ್ಳಬೇಕು, ಪರೀಕ್ಷೆಗಳನ್ನು, ಪತ್ರಿಕೆಗಳ ಸೆಟ್ಟಿಂಗ್‌ನ್ನು ಅವರೇ ಮಾಡಿಕೊಳ್ಳಬೇಕು. No where, the State Government or anybody, directs them to take up a cause of saffronisation or whatever you call it. ಅದನ್ನು ಮಾಡಲು ಸಾಧ್ಯವೇ ಇಲ್ಲ. ನೀವು ವೇದ ಪುರಾಣ ಟೀಚ್ ಮಾಡಿ ಎಂದು ನಾವು ಹೇಳಲು ಹೋಗುವುದೇ ಇಲ್ಲ, There is no provision here. ಆದ್ದರಿಂದ, ತಾವು ರಾಜಕೀಯ ಹಸ್ತಕ್ಷೇಪವನ್ನು ಸರ್ಕಾರ ಮಾಡುತ್ತಿದೆಯೆಂದು ಯಾವ ಮನಸ್ಸಿನಿಂದ ಹೇಳುತ್ತೀರಿ? ಚುನಾವಣೆಯನ್ನು ಅಬಾಲಿಷ್ ಮಾಡಿದರೆ, ಚುನಾವಣೆ ಬೇಕು ಎಂದು ತಾವೇ ಹೇಳುತ್ತೀರಿ. ರಾಜಕಾರಣ ಮಾಡುತ್ತಾರೆಂದು ತಾವೇ ಹೇಳುತ್ತೀರಿ. How are you justifying? When I have abolished the elections, how can you say? ರಾಜಕಾರಣ ಮಾಡುತ್ತೀರೆಂದು ತಾವು ಹೇಗೆ ಹೇಳುತ್ತೀರಿ? ಮಾನ್ಯ ಸದಸ್ಯರೊಬ್ಬರು ಇತರೆ ಚುನಾವಣೆಗಳಲ್ಲಿ ಐವತ್ತು ಲಕ್ಷ ರೂಪಾಯಿಗಳಷ್ಟು ಹಣವನ್ನು ಖರ್ಚು ಮಾಡುವುದಿಲ್ಲವೆ ಎಂದು ಹೇಳಿದರು. ಅದರ ಬಗ್ಗೆ ನನಗೇನೂ ಗೊತ್ತಿಲ್ಲ. ಆದರೆ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಾರೆಂದು ಮಾತ್ರ ಹೇಳಬಹುದು. ಸೆನೆಟ್ ಚುನಾವಣೆಗೆ ಲಕ್ಷಾಂತರ ರೂಪಾಯಿಗಳ ಹಣವನ್ನು ಖರ್ಚು ಮಾಡುತ್ತಾರೆ ಎಂದು ಹೇಳುವುದನ್ನು ಕೇಳಿದ್ದೇನೆ. ಸಬ್ಜೆಕ್ಟ್ - ಟು -ಕರಕ್ಷನ್, ಅದೇನೇ ಇರಲಿ ವಿಶ್ವವಿದ್ಯಾನಿಲಯದಲ್ಲಿ ರಾಜಕಾರಣವಿರಬಾರದು. ಸಾರ್ವಜನಿಕ

ಚುನಾವಣೆಯಲ್ಲಿ ಅದು ಎಂ.ಎಲ್.ಎ, ಅಥವಾ ಎಂ.ಪಿ. ಚುನಾವಣೆ ಇರಬಹುದು. ಆದರೆ, ಎಲ್ಲಿ ಅಕೆಡಮಿಕ್ ಅಟ್‌ಮಾಸ್‌ಫಿಯರ್‌ನ್ನು ಕ್ರಿಯೇಟ್ ಮಾಡಬೇಕೋ ರೀಸರ್ಚ್ ಅಟ್‌ಮಾಸ್‌ಫಿಯರ್‌ನ್ನು ಕ್ರಿಯೇಟ್ ಮಾಡಬೇಕೋ ಅಲ್ಲಿ ನಾವು ಚುನಾವಣೆಯನ್ನು ತರಬಾರದು ಎಂಬ ಉದ್ದೇಶದಿಂದ ನಾನು ಚುನಾವಣೆಯನ್ನು ಅಬಾಲಿಷ್ ಮಾಡಿದ್ದೇನೆ. ಇನ್ನು ಮುಂದೆ ಯಾವ ವಿಶ್ವವಿದ್ಯಾನಿಲಯದಲ್ಲೂ ಚುನಾವಣೆಗಳು ಇರುವುದಿಲ್ಲ. ಆ ವಿಶ್ವವಿದ್ಯಾನಿಲಯಗಳಲ್ಲಿ ಸೂಕ್ತವಾದ ತಿದ್ದುಪಡಿಯನ್ನು ನಾವು ಮುಂದೆ ತರಲಿದ್ದೇವೆ. ಇವತ್ತು ಇದರ ಬಗ್ಗೆ ವಿದ್ಯಾರ್ಥಿಗಳಿಗೆ ಬಹಳ ತಪ್ಪು ಮಾಹಿತಿಯನ್ನು ಕೊಟ್ಟುಬಿಟ್ಟಿದ್ದಾರೆ. ವಿದ್ಯಾರ್ಥಿಗಳಿಗೆ ಅನುಕೂಲವಿಲ್ಲ, ವಿದ್ಯಾರ್ಥಿಗಳಿಗೆ ಅದಾಗಿದೆ, ಇದಾಗಿದೆಯೆಂದು ಬಹಳ ದೊಡ್ಡ ಹೇಳಿಕೆಗಳನ್ನು ಕೊಡುತ್ತಿರುವುದನ್ನು ಪತ್ರಿಕೆಗಳಲ್ಲಿ ನೋಡಿದ್ದೇನೆ. ವಿದ್ಯಾರ್ಥಿಗಳು ಅಕೆಡಮಿಕ್‌ಕೌನ್ಸಿಲ್‌ನಂಥ ಎಲೈಟ್ ಬಾಡಿಯಲ್ಲಿ, ಡಿಸಿಷನ್ ಮೇಕಿಂಗ್ ಬಾಡಿಯಲ್ಲಿ ಅಕೆಡಮಿಕ್ ಮ್ಯಾಟರ್ಸ್‌ನ್ನು ನಿರ್ಣಯ ಮಾಡುವಂಥ ಬಾಡಿಯಲ್ಲಿ ಆರು ಜನ ವಿದ್ಯಾರ್ಥಿಗಳು ಸದಸ್ಯರಾಗಿದ್ದಾರೆಂದರೆ ಇದರಿಂದ ವಿದ್ಯಾರ್ಥಿಗಳಿಗೆ ಎಷ್ಟು ಸಂತೋಷವಾಗಬೇಕು? ಅದೂ ಸಹ ಆನ್ ದಿ ಬೇಸಿಸ್ ಆಫ್ ಮೆರಿಟ್ ಮಾಡತಕ್ಕದ್ದು, ಅಂಥವರನ್ನೇ ಗುರುತಿಸಿ ಅಲ್ಲಿ ಹಾಕತಕ್ಕದ್ದು ಮತ್ತು ಪ್ರೊಫೆಸರ್ಸ್‌ನ್ನು, ಡೀನ್ಸ್‌ನ್ನು ಎರಡೆರಡು ವರ್ಷ ಸದಸ್ಯರಾಗಿರಲು ಅವಕಾಶ ಮಾಡಿಕೊಟ್ಟಿದ್ದೇವೆ. ಅಟಾನಮಿಯ ಬಗ್ಗೆ ಮಾನ್ಯ ಸೋಮಶೇಖರ್‌ರವರು ಹೇಳಿದ್ದಾರೆ. ಯಾವುದೇ ರೀತಿಯ ಅಕೆಡಮಿಕ್ ಅಟಾನಮಿಯಾಗಿ ಕುಂದು ಬರದ ರೀತಿಯಲ್ಲಿ ನಾವು ನೋಡಿಕೊಳ್ಳುತ್ತೇವೆಂದು ನಾನು ಆಗಲೇ ಹೇಳಿದ್ದೇನೆ. ಇವತ್ತು ಹಾನರರಿ ಡಿಗ್ರಿಯನ್ನು ಕೊಡುವುದನ್ನು ನಾವು ನೋಡಿದ್ದೇವೆ. ಯಾರ್‍ಯಾರಿಗೆ ಆ ರೀತಿ ಡಾಕ್ಟರೇಟ್ ಡಿಗ್ರಿಯವನ್ನು ಕೊಟ್ಟಿದ್ದಾರೆ, ಕೊಡುತ್ತಾರೆ ಎಂಬುದು ತಮಗೂ ಗೊತ್ತಿದೆ. ಇದಕ್ಕೆ ಏನಾದರೂ ಕಡಿವಾಣವನ್ನು ಹಾಕಬೇಕು, ಕ್ವಾಲಿಟೇಟಿವ್ ಇಂಪ್ರೂವ್‌ಮೆಂಟ್ ಮಾಡುವುದು ಬೇಡವೆ? ವಿಶ್ವವಿದ್ಯಾನಿಲಯದ ಬೇಸಿಕ್ ಡಿಗ್ರಿ ಸಹ ಇಲ್ಲದವರಿಗೂ ಡಾಕ್ಟರೇಟ ಕೊಡುತ್ತಾರೆ. ನಾನೂ ಕೂಡ ನಾಲ್ಕು ವರ್ಷಗಳ ಕಾಲ ಹೊರದೇಶದಲ್ಲಿ ವ್ಯಾಸಂಗ ಮಾಡಿ ಬಂದಿದ್ದೇನೆ. ಅಲ್ಲಿ ಹಾನರರಿ ಡಾಕ್ಟರೇಟ್ ಕೊಡಬೇಕಾಗಿದ್ದರೆ ಎಂಥವರಿಗೆ ಕೊಡುತ್ತಾರೆಂದರೆ, ಯಾವುದಾದರೂ ಒಂದು ಕ್ಷೇತ್ರದಲ್ಲಿ ಕೆಲಸ ಮಾಡಿ ಬಹಳ ಎತ್ತರದಲ್ಲಿದ್ದರೆ ಮಾತ್ರ ಕೊಡುತ್ತಾರೆ. ಅದಕ್ಕೆ ಇದರಲ್ಲಿ ಬದಲಾವಣೆಯನ್ನು ತಂದಿದ್ದೇವೆ. ನಾಮಿನೇಷನ್ಸ್ ಮಾಡುವಾಗ ಕಾಂಗ್ರೆಸ್ ಸೇರಿದ ಯಾರನ್ನೋ ಅಕೆಡಮಿಕ್ ಕೌನ್ಸಿಲ್‌ಗೆ ಹಾಕಿದರು ಎಂದು ಹೇಳುತ್ತಾರೆ. ಇದನ್ನು ಎಲ್ಲಾದರೂ ಒಂದು ಕಡೆ ತಪ್ಪಿಸಬೇಕಲ್ಲಾ ಅದಕ್ಕಾಗಿ ಯಾವುದೇ ಒಂದು ಅಥಾರಿಟಿಗೆ ನಾಮಿನೇಷನ್ ಆಗಬೇಕಿದ್ದರೆ ಆ ವ್ಯಕ್ತಿಗೆ ವಿಶ್ವವಿದ್ಯಾನಿಲಯದ ಪದವಿ ಇರಬೇಕು. ಯಾರನ್ನೋ ನಾಮಿನೇಟ್ ಮಾಡಲು ಆಗುವುದಿಲ್ಲ. ಪ್ರೈವೇಟ್ ಟ್ಯೂಷನ್ಸ್ ಬಗ್ಗೆ ತಾವೆಲ್ಲರೂ

ಕೇಳಿದ್ದೀರಿ. ಇದರ ಹಾವಳಿ ತಮಗೆಲ್ಲಾ ಗೊತ್ತಿದೆ. ಇದರ ಬಗ್ಗೆ ಈ ಮನೆಯಲ್ಲಿ ಮೇಲ್ಮನೆಯಲ್ಲಿ ಅನೇಕರು ಮಾತನಾಡಿದ್ದಾರೆ. ಆದ್ದರಿಂದ ಪ್ರೈವೇಟ್ ಟ್ಯೂಷನ್ಸ್‌ನ್ನು ಅಬಾಲಿಷ್ ಮಾಡಬೇಕೆಂದಿದ್ದೇವೆ. ಪರೀಕ್ಷೆ ಸಮಯ ಬಂದರೆ ಶಿಕ್ಷಕರು ಪರೀಕ್ಷೆ ಮಾಡುವುದಿಲ್ಲ, ಪತ್ರಿಕೆಗಳ ಮೌಲ್ಯಮಾಪನ ಮಾಡುವುದಿಲ್ಲವೆಂದು ಹೇಳುವಂಥಾದ್ದು ಆಗುತ್ತಿದೆ. ಇವತ್ತು ಉಪನ್ಯಾಸಕರಿಗೆ ಯು.ಜಿ.ಸಿ. ಸಂಬಳವನ್ನು ಕೊಡುತ್ತಿದ್ದೇವೆ. ಒಬ್ಬ ಉಪನ್ಯಾಸಕರಿಗೆ ಕನಿಷ್ಟವೆಂದರೆ ೧೬,೦೦೦ ತಿಂಗಳಿಗೆ ಸಂಬಳ ದೊರೆಯುತ್ತಿದೆ, ಗರಿಷ್ಟ ೩೫,೦೦೦ರೂ. ಪ್ರೊಫೆಸರ್ಸ್‌ಗೆ ದೊರೆಯುತ್ತಿದೆ. ಆದರೆ, ಅವರು ಮಾಡುವ ಕೆಲಸ ಎರಡು ಗಂಟೆಗಳ ಕಾಲ ಪಾಠ. ಅಥವಾ ಪರೀಕ್ಷೆಯನ್ನು ಮಾಡು ಎಂದರೆ ಯಾವುದೋ ಜೂನಿಯರ್‌ಗೆ ಹೇಳುತ್ತಾನೆ. ಮೌಲ್ಯಮಾಪನ ಮಾಡು ಎಂದರೆ ಏನಾದರೂ ಒಂದು ಕಾರಣ ಹೇಳಿ ಆಗುವುದಿಲ್ಲವೆಂದು ಹೇಳುತ್ತಾರೆ. ಏನಾದರೂ ಕಾರಣವನ್ನಿಟ್ಟುಕೊಂಡು ಮೌಲ್ಯಮಾಪನದ ಸಮಯದಲ್ಲಿ ಮುಷ್ಕರ ಮಾಡುತ್ತಾರೆ. Should it not be mandatory on the part of the teacher? ಇದರಲ್ಲಿ ನಾವು ಏನಾದರೂ ಅಪರಾಧ ಮಾಡಿದ್ದರೆ ಹೇಳಿ? A teacher has the responsibility that is why we have defined what is a teacher, his duty. ಆ ಉಪಾಧ್ಯಾಯನ ಕರ್ತವ್ಯವೇನು ಎಂಬುದನ್ನು ನಾವು ಈ ಆ್ಯಕ್ಟ್‌ನಲ್ಲಿ ಡಿಫೈನ್ ಮಾಡಿದ್ದೇವೆ. ಉಪನ್ಯಾಸಕರು ಪಾಠ ಮಾಡುವುದಷ್ಟೇ ಅಲ್ಲ, ಪರೀಕ್ಷೆ ಮಾಡಬೇಕು, ಮೌಲ್ಯಮಾಪನ ಮಾಡಬೇಕು. ಆ ಕರ್ತವ್ಯವನ್ನು ಮಾಡದಿದ್ದ ಮೇಲೆ, Can we call him a teacher with so much of huge salary? ಯು.ಜಿ.ಸಿ. ಸ್ಕೇಲ್ ಕೊಟ್ಟ ಮೇಲೆ ಅದಕ್ಕೆ ಅನುಗುಣವಾಗಿ ನಮ್ಮ ಶಾಸನ ಇರಬೇಕಾಗಿರುವುದು ನ್ಯಾಯವಲ್ಲವೆ? ಅದಕ್ಕಾಗಿ ಇದರಲ್ಲಿ ಬದಲಾವಣೆಯನ್ನು ತಂದಿದ್ದೇವೆ ಎಂಬ ಮಾತನ್ನು ಹೇಳುತ್ತಿದ್ದೇನೆ. ಇನ್ನು ಇಂಟರ್-ಯೂನಿವರ್ಸಿಟಿ ವರ್ಗಾವಣೆಯ ಬಗ್ಗೆ ಹೇಳುವುದಾದರೆ, ಗಂಡ ಬೆಂಗಳೂರಿನಲ್ಲಿರುತ್ತಾನೆ, ಹೆಂಡತಿ ಮಂಗಳೂರಿನಲ್ಲಿರುತ್ತಾಳೆ, ಇಬ್ಬರೂ ಉಪನ್ಯಾಸಕರೇ ಕಾರಣಾಂತರಗಳಿಂದ ಅವರು ಒಟ್ಟಿಗೆ ಇರಲು ಆಗುವುದೇ ಇಲ್ಲ. ಮಾನ್ಯ ವಿಶ್ವನಾಥ್‌ರವರು ಇದಕ್ಕೆ ಹೊಸ ನೀತಿಯನ್ನು ಮಾಡಬೇಕಾಗುತ್ತದೆಂದು ಹೇಳುತ್ತಿದ್ದರು. ಏಕೆಂದರೆ, ಇವರ ಇಲಾಖೆಯಲ್ಲಿ ಹೆಚ್ಚು ಶಿಕ್ಷಕರು ಇದ್ದಾರೆ. ಈ ಇಂಟರ್ ಯೂನಿವರ್ಸಿಟಿ ವರ್ಗಾವಣೆಯನ್ನು ಒಂದು ಮಾದರಿಯಾಗಿ, ಒಂದು ಮಿನಿಮಮ್ ಲೆವೆಲ್‌ನಲ್ಲಿ ಅಕೆಡಮಿಕ್ ಮ್ಯಾಟರ್ಸ್‌ಗೆ ಅಫೆಕ್ಟ್ ಆಗದ ರೀತಿಯಲ್ಲಿ ಮಾಡಬೇಕು ಎಂಬ ದೃಷ್ಟಿಯಿಂದ ಇದನ್ನು ತಂದಿದ್ದೇವೆ. ಕೆಲವು ವಿಚಾರಗಳನ್ನು ಪ್ರತಿಷ್ಠೆಯಾಗಿ ತೆಗೆದುಕೊಳ್ಳಬಾರದು ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಇಲ್ಲಿ ಪ್ರತಿಷ್ಠೆಯ ಪ್ರಶ್ನೆ ಏಕೆ? ಶಿಕ್ಷಣ ಕ್ಷೇತ್ರದಲ್ಲಿ ಸೂಕ್ತವಾದ ಬದಲಾವಣೆಯನ್ನು ತರಬೇಕು, ನಮ್ಮ ರಾಜ್ಯ, ಶಿಕ್ಷಣ ಕ್ಷೇತ್ರದಲ್ಲಿ ಮಾದರಿಯಾಗಿರಬೇಕು ಎಂಬುದೇ ನಮ್ಮ ಉದ್ದೇಶ. ಯಾವತ್ತೂ ಕೂಡ ನಮ್ಮ ರಾಜ್ಯ

ಶಿಕ್ಷಣದಲ್ಲಿ ಮಾದರಿಯಾಗಿದೆ. ಅದನ್ನು ಹಾಗೆಯೇ ಉಳಿಸಿಕೊಂಡು ಇನ್ನೂ ಹೆಚ್ಚು ಒಳ್ಳೆಯ ರೀತಿಯಲ್ಲಿ ಕೆಲಸಗಳು ಆಗಬೇಕು ಎಂಬುದು ಮುಖ್ಯವಾಗಿದೆ. ನಾವು ಈ ತಿದ್ದುಪಡಿಯನ್ನು ತಂದು ಡ್ರಾಫ್ಟ್‌ನ್ನು ಮಾಡಿದ ಮೇಲೆ ನಮ್ಮ ಸೆಕ್ರೆಟೇರಿಯೇಟ್‌ಗೆ ಸುಮಾರು ಹನ್ನೆರಡು ರಾಜ್ಯಗಳವರು, ನಮಗೂ ಅದರ ಪ್ರತಿಯನ್ನು ಕಳುಹಿಸಿ ಕೊಡಿ, ನಾವು ಹಾಗೆಯೇ ಮಾಡಬೇಕೆಂದು ಕೇಳಿಕೊಂಡಿದ್ದಾರೆ. ಇಷ್ಟೊಂದು ಪ್ರಗತಿಪರವಾದ ಮಸೂದೆಯನ್ನು ಬೇರೆ ಯಾವ ರಾಜ್ಯದವರೂ ಮಾಡಲು ಆಗುವುದಿಲ್ಲ. ಕರ್ನಾಟಕ ರಾಜ್ಯದವರೇ ಮಾಡಬೇಕು. ಅದನ್ನು ಮಾಡುವ ಅವಕಾಶ ನಮಗೆ ಇವತ್ತು ಸಿಕ್ಕಿದೆ. ಆದ್ದರಿಂದ, ಇದಕ್ಕೆ ತಾವೆಲ್ಲರೂ ದಯಮಾಡಿ ಸಹಕಾರ ಕೊಡಿ ಎಂದು ನಾನು ಕೇಳಿಕೊಳ್ಳುತ್ತೇನೆ. ಇವೊತ್ತು ತಾವು ಮಾತನಾಡುವಾಗ ಬೇರೆ ಬೇರೆಯವರು ಕೊಟ್ಟಂಥ ಸಲಹೆಗಳನ್ನು ಬದಿಗೊತ್ತಿದ್ದೀರಿ ಎಂದು ಹೇಳಿದಿರಿ. ಕೆಲವರು ಸೂಕ್ತವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಕೆಲವರು ನಾವು ಒಪ್ಪಿಕೊಳ್ಳಲು ಆಗದೇ ಇರುವಂಥ ಸಲಹೆಯನ್ನೂ ಕೂಡ ಕೊಟ್ಟಿದ್ದಾರೆ. ಈಗ ತಾವು ಹೇಳಿದ್ದನ್ನು ನಮಗೆ ಒಪ್ಪಿಕೊಳ್ಳುವುದಕ್ಕೆ ಆಗಲಿಲ್ಲ. ತಾವೂ ಕೂಡ ಮಾತನಾಡುವಾಗ ವೈಸ್-ಛಾನ್ಸಲರ್ ನೇಮಕದ ಬಗ್ಗೆ ಮಾನ್ಯ ನಂಜುಂಡಪ್ಪನವರು ಹೇಳಿದ್ದನ್ನು ಹೇಳಿದಿರಿ. ನಮ್ಮ ಜಿಲ್ಲೆಯ ಕೊರಟಗೆರೆಯವರೇ ಆದ ಮಾನ್ಯ ಚೆಲುವರಾಜುರವರು ವೈಸ್ ಛಾನ್ಸಲರ್ ಆಗಿದ್ದರು. ಅವರು ನಮ್ಮ ಜಿಲ್ಲೆಯವರು ಎಂದು ಹೇಳಿಕೊಳ್ಳುವುದಕ್ಕೆ ನನಗೆ ಹೆಮ್ಮೆಯಾಗುತ್ತದೆ. ಮಾನ್ಯ ಸಿಂಧ್ಯಾರವರ ಸರ್ಕಾರ ಇದ್ದಾಗಲೇ ಅವರನ್ನು ವೈಸ್-ಛಾನ್ಸಲರ್ ಆಗಿ ಮಾಡಿದ್ದು ಅಂಥ ಮಾನ್ಯ ಚೆಲುವರಾಜುರವರೇ ಏನು ಹೇಳಿದ್ದಾರೆಂದರೆ, ಮಾನ್ಯ ಪರಮೇಶ್ವರ್‌ರವರು ತರುತ್ತಿರುವ ಈ ವಿಶ್ವವಿದ್ಯಾಲಯ ವಿಧೇಯಕ ಬಹಳ ಸೂಕ್ತವಾಗಿದೆ ಮತ್ತು ಬಹಳ ಪ್ರೊಗ್ರೆಸ್ಸೀವ್ ಆಗಿದೆ, ವೈಸ್ ಛಾನ್ಸಲರ್ ಅಪಾಯಿಂಟ್‌ಮೆಂಟ್‌ನ್ನು ಸರ್ಕಾರವೇ ಮಾಡಬೇಕು ಎಂದು ಹೇಳಿದ್ದಾರೆ. ಅವರು ಹೇಳಿರುವಂಥಾದ್ದನ್ನು ಮಾತ್ರ ತಾವು ಇಲ್ಲಿ ಹೇಳಲಿಲ್ಲ. ಇನ್ನು ಗೌರಾವಾನ್ವಿತ ಮಾನ್ಯ ವೆಂಕಟಗಿರಿಗೌಡರು ಸಂಸತ್ ಸದಸ್ಯರೂ ಆಗಿದ್ದವರು, ಇವರು one of the best Economics Professor. ಇದನ್ನು ತಾವೂ ಕೂಡ ಒಪ್ಪಿಕೊಳ್ಳುತ್ತೀರಾ ಎಂದು ನಾನು ಭಾವಿಸುತ್ತೇನೆ. ಮಾನ್ಯ ವೆಂಕಟಗಿರಿಗೌಡರು ಇದರ ಬಗ್ಗೆ ಎರಡು ಪತ್ರಗಳನ್ನು ನನಗೆ ಬರೆದು ವಿಧೇಯಕದಲ್ಲಿ ಬಹಳ ಪ್ರೋಗ್ರೆಸ್ಸಿವ್ ಥಿಂಕಿಂಗ್ ಅಳವಡಿಸುತ್ತಿದ್ದೀರಿ ಮತ್ತು ಸನ್ಮಾನ್ಯ ಪರಮೇಶ್ವರ್‌ರವರು ತರುತ್ತಿರುವ ವಿಧೇಯಕ ಬಹಳ ಚೆನ್ನಾಗಿದೆ, ಪರಮೇಶ್ವರ್‌ರವರಿಗೆ ಅಭಿನಂದನೆ ಮಾಡುತ್ತೇನೆಂದು ಹೇಳಿ ಕಾಗದವನ್ನು ಬರೆದಿದ್ದಾರೆ. ಅವರು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಕಾಪೇ ಪ್ರೊಫೆಸರ್ ಆಗಿರುವುದಕ್ಕೂ ಮೇಲಾಗಿ ಹೊರದೇಶದಲ್ಲಿ ಓದಿ ಬೇರೆ ಬೇರೆ ವಿಶ್ವವಿದ್ಯಾಲಯಗಳನ್ನು ನೋಡಿಕೊಂಡು ಬಂದಿರುವವರಾಗಿದ್ದಾರೆ. ಇಂಥವರು ಕೂಡ ನಮಗೆ ಏನು ಹೇಳುತ್ತಿದ್ದಾರೆಂದರೆ, ನೀವು ತರುತ್ತಿರುವ ವಿಧೇಯಕ ಬಹಳ

ಪ್ರೋಗ್ರೆಸ್ಸಿವ್ ಆಗಿದೆಯೆಂದು ಹೇಳಿದ್ದಾರೆ. ಈಗ ಅಂಥವರು ಹೇಳಿರುವುದನ್ನು ನಾನು ತಪ್ಪು ಎಂದು ತಿಳಿದುಕೊಳ್ಳಲಿ ಅಥವಾ ನಮ್ಮ ಮಾನ್ಯ ಚೆಲುವರಾಜುರವರು ಹೇಳಿದ್ದು ತಪ್ಪು ಎಂದು ತಿಳಿದುಕೊಳ್ಳಲಿ? ಇನ್ನೂ ಅನೇಕ ಜನರು ಇದರ ಬಗ್ಗೆ ಒಳ್ಳೆಯ ಅಭಿಪ್ರಾಯಗಳನ್ನು ವ್ಯಕ್ತ ಮಾಡಿದ್ದಾರೆ. ಪರ ಮತ್ತು ವಿರೋಧ ಎರಡೇ ಇರತಕ್ಕಂಥಾದ್ದು. ನಿನ್ನೆಯ ದಿನ ಮಾನ್ಯ ಮುಖ್ಯಮಂತ್ರಿಗಳು ಮಾತನಾಡುವಾಗ ಸೌತೆಕಾಯಿಯನ್ನು ಕಟ್ ಮಾಡುವಾಗ ಕಹಿಯ ಭಾಗವನ್ನು ತೆಗೆದು ಹೊರಹಾಕಿ ಚೆನ್ನಾಗಿರುವುದನ್ನು ತಿನ್ನಬೇಕು ಎಂದು ಒಂದು ಒಳ್ಳೆಯ ಉದಾಹರಣೆಯನ್ನು ಕೊಟ್ಟರು. ನಾನು ಅದನ್ನು ಒಪ್ಪುತ್ತೇನೆ. ನಾನು ಈಗ ಆ ಕೆಲಸವನ್ನೇ ಮಾಡಿದ್ದೇನೆ. ಇಷ್ಟು ಹೇಳಿದ ಮೇಲಾದರೂ ತಾವೆಲ್ಲರೂ ಕೂಡ ನಾನು ತಂದಿರುವ ಈ ವಿಧೇಯಕವನ್ನು ಒಪ್ಪುತ್ತೀರಿ ಎನ್ನುವ ನಂಬಿಕೆ ನನಗೆ ಇದೆ. ಏಕೆಂದರೆ ಶಿಕ್ಷಣ ವಿಚಾರದಲ್ಲಿ ತಾವೆಲ್ಲರೂ ತಜ್ಞರೂ ಕೂಡ ಆಗಿದ್ದೀರಿ. ಮಾನ್ಯ ಸಿಂಧ್ಯಾರವರ, ಮಾನ್ಯ ಸೋಮಶೇಖರ್‌ರವರ, ಮಾನ್ಯ ಜಗದೀಶ್ ಶೆಟ್ಟರ್‌ರವರ ಬಗ್ಗೆ ಹಾಗೂ ಇನ್ನೂ ಅನೇಕ ಗೌರವಾನ್ವಿತ ಶಾಸಕರ ಬಗ್ಗೆ ನನಗೆ ಅಪಾರ ಗೌರವವಿದೆ. ಮಾನ್ಯ ಸುರೇಶ್‌ಕುಮಾರ್‌ರವರೂ ಸೇರಿದಂತೆ ತಾವೆಲ್ಲರೂ ಚೆನ್ನಾಗಿ ವಿಚಾರಗಳನ್ನು ತಿಳಿದುಕೊಂಡು ಬಂದು ಒಂದು ರೀತಿಯಲ್ಲಿ ಪ್ರಗತಿಪರವಾದ ಸಲಹೆ ಸೂಚನೆಗಳನ್ನು ಸರ್ಕಾರಕ್ಕೆ ಕೊಡತಕ್ಕಂಥ ಸಂದರ್ಭದಲ್ಲಿ ನಾವು ಅದರ ಸ್ವಾಗತವನ್ನು ಖಂಡಿತ ಮಾಡಬೇಕಾಗುತ್ತದೆ. ಏಕೆಂದರೆ ಈಗ ತರುತ್ತಿರುವ ವಿಧೇಯಕ ಇಡೀ ರಾಷ್ಟ್ರಕ್ಕೇ ಮಾದರಿಯಾದ ಆ್ಯಕ್ಟ್ ಆಗುತ್ತದೆ. ತಾವೆಲ್ಲರೂ ಕಾದು ನೋಡಿ ಬೇಕಾದರೆ, ನಾನು ಈಗಲೇ ಆ ಬಗ್ಗೆ ನಿಮಗೆಲ್ಲರಿಗೂ ತಿಳಿಸುತ್ತಿದ್ದೇನೆ. ಇಡೀ ರಾಷ್ಟ್ರಕ್ಕೆ this is going to be a model Act. ಆದುದರಿಂದ ತಾವೆಲ್ಲರೂ ಕೂಡ ಇದಕ್ಕೆ ಸಹಕಾರವನ್ನು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಮಾನ್ಯ ಅಧ್ಯಕ್ಷರ ಕಛೇರಿಯಲ್ಲಿ ಮತ್ತು ಇಲ್ಲಿ ಮಾತನಾಡತಕ್ಕಂಥ ಸಂದರ್ಭದಲ್ಲಿ ತಾವು ಅನೇಕ ಸಲಹೆಗಳನ್ನು ಕೊಟ್ಟಿದ್ದೀರಿ. ನಾನು ವರದಿಯನ್ನು ಸದನಕ್ಕೆ ಸಬ್‌ಮಿಟ್ ಮಾಡುವಂಥ ಸಂದರ್ಭದಲ್ಲಿಯೇ ಹೇಳಿದ್ದೇನೆ, ಸರ್ಕಾರಕ್ಕೆ ಓಪನ್ ಮೈಂಡ್ ಇದೆ, ತಾವು ಕೊಡತಕ್ಕಂಥ ಸಲಹೆಗಳನ್ನು ಸ್ವಾಗತ ಮಾಡುತ್ತೇವೆ. ಕೆಲವೊಂದು ಸೂಕ್ತವಾದ ಸಲಹೆಗಳನ್ನು ನಾವು ತೆಗೆದುಕೊಂಡು ಬದಲಾವಣೆಯನ್ನೂ ಕೂಡ ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿ ನಾವು ಹಠ ಹಿಡಿಯುವುದಿಲ್ಲ, ನಮಗೆ ಹಠಮಾರಿತನ ಇಲ್ಲ, ನಮ್ಮ ಸ್ವಾಭಿಮಾನಕ್ಕೆ ಧಕ್ಕೆಯಾಗುತ್ತದೆ ಎನ್ನುವ ಭಯವೂ ಇಲ್ಲ ಎನ್ನುವ ಮಾತನ್ನು ನಾನು ಆಗಲೇ ಹೇಳಿದ್ದೆ. ತಾವು ನಿನ್ನೆ ವರದಿಯನ್ನು ಸಲ್ಲಿಸುವುದಕ್ಕೆ ಬಿಡಲಿಲ್ಲ, ಆದರೂ ಕಡೆಗೆ ವರದಿ ಸಲ್ಲಿಸಿದೆವು. ಮಾನ್ಯ ಸೋಮಶೇಖರ್‌ರವರು ಮೊದಲೇ ಇದನ್ನು ಫೈಲಟ್ ಮಾಡುವುದಕ್ಕೆ ಹೊರಟಿದ್ದರು. ನಾನು ಮೊದಲೇ ಈ ಬಗ್ಗೆ ಹೇಳಿದ್ದೇನೆ. ಬಹುಶಃ ಅವರಿಗೆ ಅವರ ಪಕ್ಷದ ಸಹಕಾರವೇ ಸಿಗಲಿಲ್ಲ, ರೆಸಿಗ್‌ನೇಷನ್ ಕೊಡಬೇಕಾದ ರೀತಿಯ ಸಹಕಾರ ಅವರಿಗೆ ಸಿಕ್ಕಿತು.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ರೆಸಿಗ್‌ನೇಷನ್ ಕೊಡಲಿಲ್ಲ, ಟರ್ಮ್ ಮುಗಿದಿತ್ತು ಅಷ್ಟೆ.

ಡಾ|| ಜಿ.ಪರಮೇಶ್ವರ್: ನಾನು ಕೇಳಿದ್ದೇನೆ. ಮಾನ್ಯ ಸೋಮಶೇಖರ್‌ರವರು ಮಾಡಿದ್ದ ಗೈಡೆನ್ಸ್ ಪುಸ್ತಕವನ್ನೂ ಕೂಡ ಮುಂದೆ ಇಟ್ಟುಕೊಂಡು ಆ ಮೂಲಕ ಅವರ ಸಹಕಾರವನ್ನು ತೆಗೆದುಕೊಂಡಿದ್ದೇನೆ. He has done a wonderful job, I must congratulate him, ಆ ಡ್ರಾಫ್ಟನ್ನು ಬಹಳ ಚೆನ್ನಾಗಿ ಮಾಡಿದ್ದಾರೆ. ಅದನ್ನೂ ಕೂಡ ನಾನು ಗೈಡ್‌ಲೈನ್ನಾಗಿ ಇಟ್ಟುಕೊಂಡಿದ್ದೇನೆ. ಇದಲ್ಲದೆ ಮಾನ್ಯ ನವನೀತ್‌ರಾವ್‌ರವರು ಏನು ವರದಿಯನ್ನು ಕೊಟ್ಟಿದ್ದಾರೆ ಅದರಲ್ಲೂ ಕೂಡ ಇನ್ನೂ ಬೇಕಾದಷ್ಟು ವಿಚಾರಗಳಿವೆ, ಮಾನಿಟರಿಂಗ್ ಬೋರ್ಡ್ ಬಗ್ಗೆ, ಎವ್ಯಾಲ್ಯುಯೇಷನ್ ಸಿಸ್ಟಂ ಬಗ್ಗೆ ಅಕೌಂಟಿಂಗ್ ಬಗ್ಗೆ ಇದೆ. ಈಗ ಚಾರ್ಟೆಡ್ ಅಕೌಂಟ್‌ನ್ನು ನಾವು ತೆಗೆದುಬಿಟ್ಟಿದ್ದೇವೆ. ಏಕೆಂದರೆ ಅದು ಸಿ.ಎ.ಜಿ.ಯಿಂದಲೇ ಆಡಿಟ್ ಆಗಬೇಕಾದಂಥಾದ್ದು. ಆದುದರಿಂದ ಒಳ್ಳೆಯದೆಲ್ಲವನ್ನೂ ಆರಿಸಿಕೊಂಡು ಒಂದು ಪ್ರಗತಿಪರವಾದ ವಿಧೇಯಕವನ್ನು ಮಾಡಿ ಇಲ್ಲಿ ತಂದಿದ್ದೇವೆ. ಅದರಲ್ಲಿ ಕೆಲವೊಂದು ಬದಲಾವಣೆಗಳನ್ನು ಮಾಡಬೇಕೆಂದು ಹೇಳಿದ್ದೀರಿ. ಅದರ ಬಗ್ಗೆ ನಾನು ಕೆಲವೊಂದು ಕ್ಲಾಸಸ್‌ಗಳನ್ನು ನಾನು ಓದುತ್ತೇನೆ. ಅದನ್ನು ತಾವುಗಳು ಒಪ್ಪಿಕೊಳ್ಳುತ್ತೀರೆಂದು ನಾನು ಭಾವಿಸುತ್ತೇನೆ. ವಿಶ್ವವಿದ್ಯಾಲಯದ ವೈಸ್ ಛಾನ್ಸಲರ್ ನೇಮಕ ಮಾಡುವ ಕ್ಲಾಸ್‌ನಲ್ಲಿ ತಾವೇನು ಬದಲಾವಣೆ ಮಾಡಬೇಕೆಂದು ಸಲಹೆ ಮಾಡಿದ್ದೀರಿ ಅದನ್ನು ನಾವು ಒಪ್ಪಿಕೊಂಡಿದ್ದೇವೆ. ಇದೇ ಬಹಳ ಕಾಂಟ್ರಾವರ್ಶಿಯಲ್ ಆದ ವಿಚಾರವಾಗಿತ್ತು. ಅದನ್ನು ಈಗ ಓದಿ ತಮಗೆ ಹೇಳುತ್ತೇನೆ.

"Clause 14 (2):

The State Government shall constitute a Search Committee consisting of four persons of whom one shall be nominated by the University Grants Commission, one by the Syndicate and one by the State Government. The Secretary to Government incharge of Higher Education or his nominee, not below the rank of Deputy Secretary to Government, shall be the convener of the Search Committee.

The State Government shall appoint one of the four members to be the Chairman,

The Search Committee shall submit to the State Government a panel of three names who are eminent

academicians in the alphabetical order and the State Government shall forward the panel to the Chancellor who shall, keeping in view the considerations of merit, equity and social justice and with the concurrence of the State Government appoint one person from the panel as Vice Chancellor."

ಮೊದಲು ಒಂದೇ ಹೆಸರನ್ನು ಕಳುಹಿಸುವ ಕಡೆ ಈಗ ವೈಸ್ ಛಾನ್ಸಲರ್ ಮಾಡಲು ಮೂರು ಹೆಸರುಗಳನ್ನು ಕಳುಹಿಸಿ ಅದರಲ್ಲಿ in concurrence with the State Government ಎನ್ನತಕ್ಕಂಥಾದ್ದನ್ನು ತಾವು ಏನು ಸಲಹೆ ಕೊಟ್ಟರಿ ಅದನ್ನು ತೆಗೆದುಕೊಂಡು ಬದಲಾವಣೆ ಮಾಡಿದ್ದೇವೆ. ಇನ್ನು ಕ್ಲಾಸ್ ೧೪ರಲ್ಲಿ ಟರ್ಮ್‌ನ್ನು ಫಿಕ್ಸ್ ಮಾಡುವಾಗ ಆ ಟರ್ಮ್ ಒಂದೇ ಸಾಕು ಎನ್ನುವ ಸಲಹೆಯನ್ನು ಕೊಟ್ಟಿದ್ದೀರಿ. ಅದರಲ್ಲಿ ನಾವು ಒಂದೇ ಟರ್ಮ್‌ಗೆ ಒಪ್ಪಿಕೊಂಡು ಆ ಅವಧಿ ಮೊದಲು ಮೂರು ವರ್ಷ ಇದ್ದುದ್ದನ್ನು ಈಗ ನಾಲ್ಕು ವರ್ಷ ಮಾಡಿದ್ದೇವೆ. ಇನ್ನು ರಿಜಿಸ್ಟ್ರಾರ್ ಬಗ್ಗೆ ಕೂಡ ನಾವು ಬದಲಾವಣೆ ಮಾಡಿ ಕೊಂಡಿದ್ದೇವೆ. ಕ್ಲಾಸ್ ೧೭ರಲ್ಲಿ regarding Registrar

The State Government may appoint an officer belonging to All India Service working in super time scale to be the Registrar of University.

ಆದರೆ ಎರಡನೆಯದರಲ್ಲಿ ರಿಜಿಸ್ಟಾರ್ ಅಕಾಡೆಮಿಕ್‌ನಲ್ಲಿ we have retained that. ಏಕೆಂದರೆ ಅಕಡೆಮಿಕ್ ಪರ್ಸನ್ ರಿಜಿಸ್ಟ್ರಾರ್ ಇರಬೇಕು ಎನ್ನತಕ್ಕಂಥಾದ್ದನ್ನು ನಾವು ಹಾಗೆಯೇ ಉಳಿಸಿಕೊಂಡಿದ್ದೇವೆ. ಇನ್ನೊಂದು ಬಹಳ ಪ್ರಾಮುಖ್ಯವಾದ ಅಂಶವನ್ನು ಹೇಳುವುದನ್ನು ನಾನು ಮರೆತಿದ್ದ, ಈ ಅಕಾಡೆಮಿಕ್ ಕೌನ್ಸಿಲ್‌ಗೆ ಕರ್ನಾಟಕ ಲೆಜಿಸ್ಲೇಟಿವ್ ಅಸೆಂಬ್ಲಿಯಿಂದ ಆ ಜ್ಯೂರಿಸ್‌ಡಿಕ್ಷನ್‌ಗೆ ಬರತಕ್ಕಂಥ ಪ್ರತಿಯೊಂದು ಜಿಲ್ಲೆಯಿಂದಲೂ ಕೂಡ ಒಬ್ಬೊಬ್ಬ ಶಾಸಕರನ್ನು ಅಧ್ಯಕ್ಷರಾದ ತಾವು ನೇಮಕ ಮಾಡಬೇಕಾಗುತ್ತದೆ. ಈ ಸದನದ ರೆಪ್ರೆಸೆಂಟಟಿವ್ಸ್ ಕೂಡ ಅಲ್ಲಿ ಇರುತ್ತಾರೆ. ಇದೇ ರೀತಿ ಕೌನ್ಸಿಲ್‌ನಲ್ಲಿ ಕೂಡ ಇಬ್ಬರನ್ನು ನಾಮಿನೇಟ್ ಮಾಡುವುದಕ್ಕೆ ಅವಕಾಶ ಇದೆ.

೯.೦೦ ಪಿಎಂ

ವಿಶ್ವವಿದ್ಯಾನಿಲಯದ ಕೌನ್ಸಿಲ್‌ನಲ್ಲೂ ಕೂಡ ಇಬ್ಬರನ್ನು ನಾಮಿನೇಟ್ ಮಾಡುವುದಕ್ಕೆ ಅವಕಾಶವಿದೆ. ಹತ್ತು ಪ್ರಿನ್ಸಿಪಾಲ್‌ಗಳು ಅಫಿಲಿಯೇಟೆಡ್ ಕಾಲೇಜ್‌ಗಳಿಂದ ರೊಟೇಷನ್ ಪದ್ಧತಿಯಂತೆ ಒಂದು ವರ್ಷಕ್ಕೆ ಇದ್ದುದ್ದನ್ನು ಈಗ

ಎರಡು ವರ್ಷಗಳು ಎಂದು ಮಾಡಲಾಗಿದೆ. ಅದೇ ರೀತಿ ಐದು ಪ್ರೊಫೆಸರ್‌ಗಳ ಅವಧಿ ಒಂದು ವರ್ಷ ಇದ್ದುದ್ದನ್ನು ಎರಡು ವರ್ಷಗಳೆಂದು ಮಾಡಿಕೊಂಡಿದ್ದೇವೆ. ಡೀನ್ಸ್‌ರವರದ್ದನ್ನು ಕೂಡ ಒಂದು ವರ್ಷ ಇದ್ದುದ್ದನ್ನು ಎರಡು ವರ್ಷಗಳೆಂದು ಮಾಡಿದ್ದೇವೆ. ಇವೆಲ್ಲಾ ಬೈ ರೋಟೇಷನ್‌ನಲ್ಲಿ ಬರತಕ್ಕಂಥದ್ದೇ ಆಗಿದೆ. ಕಂಟಿನ್ಯುಟಿ ಇರಬೇಕೆನ್ನುವ ಉದ್ದೇಶದಿಂದ ಇದನ್ನು ಮಾಡಲಾಗಿದೆ. ಇನ್ನು ವಿದ್ಯಾರ್ಥಿಗಳದ್ದನ್ನೂ ಕೂಡ ಅವಧಿ ಒಂದು ವರ್ಷ ಇದ್ದುದ್ದನ್ನು ಎರಡು ವರ್ಷಗಳೆಂದು ಮಾಡಿದ್ದೇವೆ. ಇನ್ನು ಮೊನ್ನೆ ದಿವಸ ಮಾನ್ಯ ಕಾಗೋಡು ತಿಮ್ಮಪ್ಪನವರು ಕ್ಯಾಸ್ಟ್ ಸರ್ಟಿಫಿಕೇಟ್ ಬಗ್ಗೆ ತಿದ್ದುಪಡಿ ತಂದಂಥ ಕಾಲದಲ್ಲಿ ಒಂದು ಪ್ರಶ್ನೆ ಉದ್ಭವವಾಗಿತ್ತು, ಅದರಲ್ಲಿ ಡಿಗ್ರಿಗಳನ್ನು ವಿತ್‌ಡ್ರಾ ಮಾಡತಕ್ಕಂಥಾದ್ದರ ಬಗ್ಗೆ ವಿಷಯ ಬಂತು. ಆ ಡಿಗ್ರಿಗಳನ್ನು ವಿತ್‌ಡ್ರಾ ಮಾಡುವುದಕ್ಕೆ ಯೂನಿವರ್ಸಿಟಿ ಆ್ಯಕ್ಟ್‌ನಲ್ಲಿ ಕೂಡ ಪ್ರಾವಿಷನ್ ಮಾಡಬೇಕಾಗುತ್ತದೆ ಎನ್ನುವ ಸಲಹೆ ಬಂದಿತ್ತು. ಆ ಸಲಹೆಯನ್ನೂ ಕೂಡ ನಾವು ಇದರಲ್ಲಿ ಸೇರಿಸಿಕೊಂಡಿದ್ದೇವೆ.

"Clause: 70 Withdrawal of Degree or Diploma -

The Syndicate may, on the recommendation of the Academic Council, withdraw any distinction, degree, diploma or privilege conferred on or granted to, any person by a resolution passed by a majority of the total members of the Syndicate and by a majority of not less than two thirds of the members present and voting at the meeting, if such a person has been found to have obtained such a degree or diploma or certificate fraudulently, including production of false certificate".

ಎನ್ನತಕ್ಕಂಥಾದ್ದನ್ನು ನಾವು ಸೇರಿಸಿಕೊಂಡಿದ್ದೇವೆ. ಏಕೆಂದರೆ ಅದು ಚರ್ಚೆಯಾಗುತ್ತಿದೆ. ಇದರ ಬಗ್ಗೆ ಮೇಲ್ಮನೆಯಲ್ಲೂ ಕೂಡ ಚರ್ಚೆಯಾಗಿತ್ತು. ಆದುದರಿಂದ ಅದನ್ನೂ ಕೂಡ ಆ್ಯಕ್ಟ್‌ನಲ್ಲಿ ಸೇರಿಸಿಕೊಂಡಿದ್ದೇವೆ. ಇನ್ನು ಎಸ್‌ಸಿ/ಎಸ್‌ಟಿ ಯವರನ್ನು ತಾವು ಅಫಿಲಿಯೇಷನ್ ಕಮಿಟಿಯಲ್ಲಿ ಎಲ್.ಐ.ಸಿ.ಯಲ್ಲಿ ಕಂಪ್‌ಲ್‌ಸರಿಯಾಗಿ ಎಸ್‌ಸಿ/ಎಸ್‌ಟಿ ರೆಪ್ರೆಸೆಂಟೇಷನ್ ಇರಬೇಕೆಂದು ಹೇಳಿದ್ದೀರಿ. ಅದನ್ನೂ ಕೂಡ ನಾವು ಸೇರಿಸಿಕೊಂಡಿದ್ದೇವೆ. ಓ.ಬಿ.ಸಿ.ಯನ್ನೂ ಸಹ ಸೇರಿಸುತ್ತೇವೆ. ಇನ್ನು ಅಕೆಡೆಮಿಕ್ ಕೌನ್ಸಿಲ್ ಟು ಸಿಂಡಿಕೇಟ್ ಎಲೆಕ್ಷನ್ ಬೇಡ ಎಂದು ನಾನು ಯೋಚನೆ ಮಾಡಿದ್ದೇನೆ. ಏಕೆಂದರೆ ಮತ್ತೆ ಪುನಃ ಎಲೆಕ್ಷನ್ ಎನ್ನುವ ಮಾತು ಬಂದರೆ ಪುನಃ ಸಮಸ್ಯೆ ಪ್ರಾರಂಭವಾಗುತ್ತದೆ ಎನ್ನುವುದು ನನ್ನ ಅಭಿಪ್ರಾಯವಾಗಿದೆ. ಏಕೆಂದರೆ

ಅಲ್ಲಿ ಯಾವ ಯಾವ ರೀತಿ ಎಲೆಕ್ಷನ್ ಆಗುತ್ತದೆ ಎಂಬುದು ಸಮಸ್ಯೆ ಆಗಿದೆ, ಅಲ್ಲಿ ವಿದ್ಯಾರ್ಥಿಗಳು ಎಲ್ಲರೂ ಇರುತ್ತಾರೆ. ಆದ್ದರಿಂದ ಅಲ್ಲಿ ಇನ್ನೂ ಬೇರೆ ಬೇರೆ ರೀತಿಯಲ್ಲಿ ತೊಂದರೆಗಳು ಆಗಬಹುದು ಎಂಬ ಅನುಮಾನದಿಂದ ಅದನ್ನು ಹಾಗೆ ಇಟ್ಟುಕೊಂಡಿದ್ದೇನೆ. ಇನ್ನು ಟೀಚರ್ಸ್ ಡೆಫನಿಷನ್‌ನಲ್ಲಿ ಲೈಬ್ರರಿಯನ್ ಹಾಗೂ ಫಿಸಿಕಲ್ ಎಜುಕೇಷನ್ ಟೀಚರ್‌ಗಳದ್ದು ಬಿಟ್ಟು ಹೋಗುತ್ತಿದೆ ಎಂದು ಮಾನ್ಯ ಸೋಮಶೇಖರ್‌ರವರು ಹಾಗೂ ಅನೇಕ ಶಾಸಕರುಗಳು ಬಹಳ ಪ್ರಾಮುಖ್ಯವಾಗಿ ಹೇಳಿದ್ದರು. ನಾವು ಈಗ ಡೆಫನಿಷನ್‌ನಲ್ಲಿ

"Teachers" means Professors, Assistant Professors, Readers or Lecturers imparting instructions in any University,"

ಅದರ ಜೊತೆಗೆ "and any other category defined as per the UGC guidelines" ಎನ್ನತಕ್ಕಂಥ ಒಂದು ಸೆಂಟೆನ್ಸ್ ಸೇರಿಸಿದ್ದೇವೆ. ಏಕೆಂದರೆ ಅದರಲ್ಲಿ ನಾವು ಡಿಫೈನ್ ಮಾಡಿದ್ದೇವೆ. ಲೈಬ್ರರೇರಿಯನ್ಸ್, ಫಿಸಿಕಲ್ ಎಜುಕೇಷನ್ ಟೀಚರ್ಸ್, ಸಬ್ಜೆಕ್ಟ್‌ಂಟ್ಲಿ ಅವರು ಯಾವುದನ್ನು ಅಮೆಂಡ್ ಮಾಡುತ್ತಾರೆ ಅದನ್ನು ಇಲ್ಲಿ ಅಡಾಪ್ಟ್ ಮಾಡಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ ಎನ್ನುವ ಉದ್ದೇಶಕ್ಕಾಗಿ ಅದನ್ನು ಸೇರಿಸಿಕೊಂಡಿದ್ದೇವೆ.

ಶ್ರೀ ಬಿ.ಸೋಮಶೇಖರ್: ಆರು ತಿಂಗಳೊಳಗೆ ಎನ್‌ಕ್ವೈರಿ ಕಂಡಕ್ಟ್ ಮಾಡಿ ಮುಗಿಸಬೇಕು ಎನ್ನುವ ಬಗ್ಗೆ ಹೇಳಿದ್ದೀರಾ?

ಶ್ರೀ ಜಿ.ಪರಮೇಶ್ವರ್: ೧೩ನೇ ಪುಟದಲ್ಲಿ ಹೇಳಲಾಗಿದೆ. ಏನು ಹೇಳಲಾಗಿದೆಯೆಂದರೆ

"The Vice-Chancellor shall submit a report to the State Government on the action to be taken including removal and penalty. The Chancellor shall act in accordance with such advise within six months." ಅದನ್ನೂ ಕೂಡ ಸೇರಿಸಿದ್ದೇವೆ. ಇನ್ನು ಟೆಂಪರ್ವರಿ ಅಪಾಯಿಂಟ್‌ಮೆಂಟ್ ಬಗ್ಗೆ ಕ್ಲಾಸ್ ೫೬ರಲ್ಲಿ ಮೊದಲು ಏನು ಇತ್ತು ಎಂದರೆ "The Vice-Chancellor may make temporary appointments of not more than six months duration... ಎಂದು ಇತ್ತು. ಆ ಆರು ತಿಂಗಳು ಬಹಳ ಕಡಿಮೆ ಆಗುತ್ತದೆ ಎಂದು ಹೇಳಿ ಈಗ ಅದನ್ನು ಒಂದು ವರ್ಷ ಎಂದು ಮಾಡಿದ್ದೇವೆ. ಆ ಮೂಲಕ ಆ ಹುದ್ದೆ ಟೆಂಪರರಿ ಆದಕಾರಣ ಆ ಬದಲಾವಣೆಯನ್ನು ಮಾಡಿದ್ದೇವೆ.

ಶ್ರೀ ಕೆ.ಶ್ರೀನಿವಾಸಗೌಡ: ಸಾಕು ಬಿಡಿ. ಸಾಕಷ್ಟು ವಿಚಾರಗಳನ್ನು ಹೇಳಿಬಿಟ್ಟರಿ.

ಶ್ರೀ ಡಿ.ಕೆ.ಶಿವಕುಮಾರ್: ಈ ಬಿಲ್ ಮೇಲೆ ತಾವುಗಳೆಲ್ಲರೂ ಬಹಳಷ್ಟು ಸಮಯ ಮಾತನಾಡಿದಿರಿ. ಈಗ ಮಂತ್ರಿಗಳಿಗೆ ಅರ್ಧ ಗಂಟೆಯಲ್ಲಿ ಉತ್ತರ ಹೇಳಿ ಮುಗಿಸಲಿ ಎನ್ನುವ ಹಾಗೆ ಮಾತನಾಡಿದರೆ ಹೇಗೆ?

ಶ್ರೀ ಕೆ.ಶ್ರೀನಿವಾಸಗೌಡ: ಅವರು ಕೆಲವು ವಿಚಾರಗಳನ್ನು ಹೇಳುವವರೆಗೆ ನಮ್ಮದೇ ಆದ ಕೆಲವು ಅನುಮಾನಗಳು ಇದ್ದವು. ಅವರು ಅನುಮಾನಗಳನ್ನು ಬಗೆಹರಿಸಿದ ಮೇಲೆ ನಾವು ಅವುಗಳನ್ನು ಒಪ್ಪಿಕೊಂಡಿದ್ದೇವೆ. ಅದನ್ನು ನಾವು ಹೇಳಲೇಬೇಕಲ್ಲವೆ?

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೆ, ಈ ವಿಷಯ ಸಮಿತಿಗಳು ಆದ ಮೇಲೆ ಮಂತ್ರಿಗಳ ಯೋಗ್ಯತೆಯೇ ಸದನದಲ್ಲಿ ತಿಳಿಯುತ್ತಿಲ್ಲ. ಆದರೆ ಇವೊತ್ತೂ ಕೂಡ ಮಾನ್ಯ ಉನ್ನತ ಶಿಕ್ಷಣ ಸಚಿವರು ಯೋಗ್ಯವಾದ ರೀತಿಯಲ್ಲಿ ಉತ್ತಮವಾಗಿ ಉತ್ತರವನ್ನು ಕೊಟ್ಟಿದ್ದಾರೆ. ನಾನು ಅವರನ್ನು ಅಭಿನಂದಿಸುತ್ತೇನೆ.

ಡಾ॥ ಜಿ.ಪರಮೇಶ್ವರ್: ಮಾನ್ಯ ಅಧ್ಯಕ್ಷರೆ, ಎಲ್ಲಾ ಗೌರವಾನ್ವಿತ ಸದಸ್ಯರುಗಳು ಸೂಕ್ತವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಮಾನ್ಯ ಸದಾನಂದಗೌಡರು ಮಾತನಾಡುವಾಗ ಅನೇಕ ಬಿಲ್‌ಗಳು ಸದನದಲ್ಲಿ ಬಂದಾಗ ನಾವು ಅನೇಕ ಸಲಹೆಗಳನ್ನು ಕೊಟ್ಟಿದ್ದವು, ಆದರೆ ಅವುಗಳನ್ಯಾವುದನ್ನು ಸರ್ಕಾರ ತೆಗೆದುಕೊಳ್ಳಲಿಲ್ಲ ಎಂದಿದ್ದರು. ಅದಕ್ಕೆ ಪ್ರತಿ ಉತ್ತರವಾಗಿ ನಾನು ಹೇಳುವುದೇನೆಂದರೆ, ಈ ಬಿಲ್‌ನಲ್ಲಿ ಅವರು ಹೇಳಿದ ಎಲ್ಲಾ ಸಲಹೆಗಳನ್ನೂ ಕೂಡ ನಾವು ತೆಗೆದುಕೊಂಡಿದ್ದೇವೆ.

ಶ್ರೀ ಡಿ.ವಿ.ಸದಾನಂದಗೌಡ: ಮಾನ್ಯ ಸಚಿವರೆ, ಈಗಾಗಲೇ ನಿಮ್ಮ ಉತ್ತರದ ಧಾಟಿಯ ಬಗ್ಗೆ ಮಾನ್ಯ ಎಸ್.ಎಸ್.ಪಾಟೀಲ್‌ರವರು ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ. ನಾನು ಹೇಳುವುದು ಏನೆಂದರೆ ಅವರು ಒಬ್ಬರು ಮಾತ್ರವಲ್ಲ, ನಿಮ್ಮ ಯೋಗ್ಯವಾದ ಉತ್ತರಕ್ಕೆ ಇಡೀ ಸದನವೇ ಮೇಜುಕುಟ್ಟಿ ತಮಗೆ ಗೌರವ ಸೂಚಿಸುತ್ತದೆ. ನಾನೂ ಕೂಡ ವೈಯಕ್ತಿಕವಾಗಿ ತಮಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ.

ಡಾ: ಜಿ.ಪರಮೇಶ್ವರ್: ವಂದನೆಗಳು. ತಾವೆಲ್ಲರೂ ಕೂಡ ದೊಡ್ಡ ಮನಸ್ಸು ಮಾಡಿ ಬಹಳ ಚಾರಿತ್ರಿಕವಾದ ಈ ಒಂದು ಮಸೂದೆಯನ್ನು ಮತ್ತು ಬಹಳ ಪ್ರೋಗ್ರೆಸ್ಸಿವ್ ಆಗಿರತಕ್ಕಂಥ ಮಸೂದೆಯನ್ನು ಪಾಸ್ ಮಾಡಿಕೊಡಬೇಕೆಂದು ತಮ್ಮೆಲ್ಲರಲ್ಲೂ ನಾನು ವಿನಂತಿ ಮಾಡಿಕೊಳ್ಳುತ್ತೇನೆ ಹಾಗೂ ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೂ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ,

ಮಾನ್ಯ ಉನ್ನತ ಶಿಕ್ಷಣ ಸಚಿವರು ತಮ್ಮ ವಿಚಾರಧಾರೆಯನ್ನು ಒಳ್ಳೆಯ ರೀತಿಯಲ್ಲಿ ಸದನದಲ್ಲಿ ಮಂಡನೆ ಮಾಡಿದ್ದಾರೆ. ಅವರ ಉತ್ತರದ ಧಾಟಿಗೆ ಮತ್ತು ಕೊಟ್ಟ ಉತ್ತರಕ್ಕೆ ನಾನು ನಿಜವಾಗಿಯೂ ಹೃತ್ಪೂರ್ವಕವಾಗಿ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತೇನೆ.

ಶ್ರೀ ಎಸ್.ಸುರೇಶ್‌ಕುಮಾರ್: ಮಾನ್ಯ ಅಧ್ಯಕ್ಷರೆ, ಮಾನ್ಯ ಪರಮೇಶ್ವರ್‌ರವರು ಇಂದು ಬಹಳ ಅನುಕರಣೀಯವಾದ ಭಾಷಣವನ್ನು ಮಾಡಿದ್ದಾರೆ. ಅದೇ ರೀತಿ ಎಲ್ಲಾ ಸಚಿವರು ಕಲಿತು ಅದೇ ಭಾಷಣವನ್ನು ಮಾಡುವುದು ಒಳ್ಳೆಯದು ಎನ್ನುವುದು ನನ್ನ ಅಭಿಪ್ರಾಯ.

ಶ್ರೀ ಜಗದೀಶ್ ಶೆಟ್ಟರ್: ಇಂದು ಈ ಒಂದು ಬಿಲ್ ಮಂಡನೆಯಾದ ಮೇಲೆ ಕೆಲವೊಂದು ಸಮಾಲೋಚನೆಗಳನ್ನು ಮಾಡಿಕೊಂಡೆವು. ಮಾನ್ಯ ಸದಾನಂದಗೌಡರು ಮಾತನಾಡುತ್ತಾ ನಾವು ಸಲಹೆ ಸೂಚನೆಗಳನ್ನು ಬಿಲ್ ಮೇಲೆ ಕೊಟ್ಟರೆ ಅವುಗಳು ಅಮೆಂಡ್ ಆಗುವುದೇ ಇಲ್ಲ ಎಂದರು. ಯಾವ ರೀತಿಯಲ್ಲಿ ಸದನದಲ್ಲಿ ಬಿಲ್ ಬರುತ್ತದೆ ಹಾಗೆಯೇ ಅದು ಪಾಸ್ ಆಗುವಂಥಾದ್ದು ಇತ್ತು. ಆದರೆ ಈ ಬಿಲ್ ಬಗ್ಗೆ ಇಂದು ಸಮಾಲೋಚನೆ ಮಾಡಿಕೊಂಡು ಬಹಳ ದೊಡ್ಡ ಮನಸ್ಸು ಮಾಡಿ ಶಾಸಕರ ಸಲಹೆಗಳನ್ನು ಪಡೆದು ಕೆಲವೊಂದು ಬದಲಾವಣೆಗಳನ್ನು ತೆಗೆದುಕೊಂಡು ಬಂದಿರಿ. ಇನ್ನೂ ಹಲವಾರು ಬದಲಾವಣೆಗಳು ಆಗಬೇಕಾಗಿವೆ. ಸರ್ಚ್ ಕಮಿಟಿ ಬಗ್ಗೆ ಸೆಕ್ಷನ್ ೧೪ರ ಸಬ್-ಕ್ಲಾಸ್ ೪ರಲ್ಲಿ "concurrence" ಎಂದು ಏನು ಇದೆ ಅದು "in consultation" ಎಂದು ಆದರೆ ಒಳ್ಳೆಯದಾಗುತ್ತದೆ ಎನ್ನುವುದು ನನ್ನ ಒಂದು ಸಲಹೆ ಇದೆ. ಆದರೆ ತೀರ್ಮಾನ ತಮಗೇ ಬಿಟ್ಟದ್ದಾಗಿದೆ.

ಶ್ರೀ ಎ.ರಾಮದಾಸ್: ಮಾನ್ಯ ಅಧ್ಯಕ್ಷರೆ, ಈ ಬಿಲ್ ಬಗ್ಗೆ ಮಾನ್ಯ ಸಚಿವರು ಬಹಳ ಪ್ರೋಗ್ರೆಸ್ಸಿವ್ ಆದ ಅಂಶಗಳನ್ನು ಸದನದಲ್ಲಿ ಹೇಳಿದ್ದಾರೆ. ಜಂಟಿ ಸದನ ಸಮಿತಿ ಸಭೆಗಳಲ್ಲೂ ಕೂಡ ಎಷ್ಟೋ ವಿಚಾರಗಳನ್ನು ನಮ್ಮ ಮುಂದೆ ಇಟ್ಟಿದ್ದರು. ಅವರಲ್ಲಿರುವ ಜ್ಞಾನ ಅಪಾರವಾದುದು. ಅವರು ಬಹಳ ಉತ್ತಮವಾದ, ನಮಗೂ ಉಪಯೋಗವಾಗುವಂಥ ವಿಚಾರಗಳನ್ನು ಅಲ್ಲೂ ಕೂಡ ಹೇಳಿದ್ದರು. ಆ ಸಭೆಯಲ್ಲೂ ಕೂಡ ನಾವು ಅವರನ್ನು ಅಪ್ರೀಷಿಯೇಟ್ ಮಾಡಿದ್ದೇವೆ. ಇಂದು ಇಲ್ಲೂ ಕೂಡ ಬಹಳ ಪ್ರಬಲವಾದ ಮತ್ತು ಪ್ರಾಮುಖ್ಯವಾದ ವಿಚಾರಗಳನ್ನು ಏನಿಟ್ಟಿದ್ದಾರೆ. ಅಂಥದ್ದೆಲ್ಲವನ್ನೂ ನಾವು ಸ್ವಾಗತ ಮಾಡಿದ್ದೇವೆ. ನಾನು ಒಂದು ಸಲಹೆಯನ್ನು ಕೊಟ್ಟು, ಕೇವಲ ೬೦ ಜನರೊಳಗೆ ಅಕಾಡೆಮಿಕ್ ಕೌನ್ಸಿಲ್‌ನಿಂದ ೫ ಜನರನ್ನು ಸಿಂಡಿಕೇಟ್‌ಗೆ ಕಳುಹಿಸುವಂಥ ವ್ಯವಸ್ಥೆಯಾಗಬೇಕು ಎಂದು ಹೇಳಿದ್ದೆನು. ಕಡೆಯಲ್ಲಿ ೫ ಜನಗಳಾಗದಿದ್ದರೆ ಕೊನೆಯ ಪಕ್ಷ ೪ ಜನರನ್ನಾದರೂ ಕಳುಹಿಸುವ ವ್ಯವಸ್ಥೆಯಾಗಬೇಕು ಎಂದು ನಾವು ಹೇಳಿದ್ದೆವು. ಅದರ ಬಗ್ಗೆ ಯೋಚನೆ ಮಾಡಬಹುದು ಎಂದೂ ಕೂಡ ಹೇಳಿದ್ದೆವು. ಆದುದರಿಂದ

ದಯಮಾಡಿ ಅದನ್ನು ಸೇರಿಸಬೇಕು. ಏಕೆಂದರೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಎಲ್ಲೂ ಅವಕಾಶವಿಲ್ಲ ಎಂದು ಮಾರಕವಾಗುವಂಥಾದ್ದು ಬೇಡ ಎನ್ನುವ ದೃಷ್ಟಿಯಿಂದ ಸಿಂಡಿಕೇಟ್‌ಗೆ ಕೌನ್ಸಿಲ್‌ನಿಂದ ನಾಲ್ಕು ಜನರನ್ನು ಕಳುಹಿಸುವ ವಿಷಯಕ್ಕೆ ಹೆಚ್ಚು ಒತ್ತು ಕೊಟ್ಟು ಆ ಅಂಶವನ್ನು ಸೇರಿಸಬೇಕೆಂದು ನನ್ನ ಮನವಿ. ವಿಶೇಷವಾಗಿ ಈ ಬಿಲ್‌ನಲ್ಲಿ ಬಹಳಷ್ಟು ಬದಲಾವಣೆಗಳನ್ನು ತರುವಂಥ ಕೆಲಸವನ್ನು ತಾವು ಈಗ ಮಾಡಿದ್ದೀರಿ. ದಯಮಾಡಿ ಅದೊಂದರ ಬಗ್ಗೆ ಪರಾಮರ್ಶೆ ಮಾಡುವುದು ಸೂಕ್ತ ಎನ್ನುವುದು ನನ್ನ ಅಭಿಪ್ರಾಯ.

MR.SPEAKER:- Dr.Parameshwar will get 100 marks from me for his fine answer. ಈಗ ಪರ್ಯಾಲೋಚನಾ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ,

''ಜಂಟಿ ಪರಿಶೀಲನಾ ಸಮಿತಿಯಿಂದ ಮಾರ್ಪಡಿಸಲಾದಂತೆ ೨೦೦೦ನೇ ಸಾಲಿನ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ವಿಧೇಯಕವನ್ನು ಪರ್ಯಾಲೋಚಿಸುವುದು''

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು)

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ ೨ ರಿಂದ ೧೩ ರವರೆಗೆ

ಅಧ್ಯಕ್ಷರು: ''ಖಂಡ ೨ ರಿಂದ ೧೩ ರವರೆಗೆ, ಎರಡೂ ಸೇರಿದಂತೆ, ಈ ವಿಧೇಯಕದ ಅಂಗಗಳಾಗಿರುತ್ತದೆ''

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಹಾಗೂ ಖಂಡ ೨ ರಿಂದ ೧೩ ರವರೆಗೆ ಎರಡೂ ಸೇರಿದಂತೆ, ವಿಧೇಯಕಕ್ಕೆ ಸೇರಿಸಲ್ಪಟ್ಟಿತು).

ಖಂಡ ೧೪ಕ್ಕೆ ತಿದ್ದುಪಡಿ:

ಮಾನ್ಯ ಸದಸ್ಯರುಗಳಾದ ಶ್ರೀ ಜಗದೀಶ್ ಶೆಟ್ಟರ್, ಶ್ರೀ ಸುರೇಶ್‌ಕುಮಾರ್, ಶ್ರೀ ರಾಮದಾಸ್ ಹಾಗೂ ಶ್ರೀ ವಿಶ್ವೇಶ್ವರ ಹೆಗಡೆಯವರು ಖಂಡ ೧೪(೪)ಕ್ಕೆ ತಿದ್ದುಪಡಿಯನ್ನು ಸೂಚಿಸಿದ್ದಾರೆ. ಮಾನ್ಯ ಉನ್ನತ ಶಿಕ್ಷಣ ಸಚಿವರು ತಿದ್ದುಪಡಿ ಪ್ರಸ್ತಾವವನ್ನು ಮಂಡಿಸಬೇಕು.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೇ, ತಿದ್ದುಪಡಿಯನ್ನು ಮಂಡಿಸಲು ನಾವು ಒತ್ತಾಯ ಮಾಡುವುದಿಲ್ಲ.

(The amendment was by leave withdrawn)

ಡಾ|| ಜಿ. ಪರಮೇಶ್ವರ್ (ಉನ್ನತ ಶಿಕ್ಷಣ ಸಚಿವರು): ಮಾನ್ಯ ಅಧ್ಯಕ್ಷರೆ, ಖಂಡ ೧೪ಕ್ಕೆ ನಾನು ಈ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತೇನೆ.

Clause 14(2): "That the State Government shall constitute a Search Committee consisting of four persons of whom one shall be nominated by the Chancellor, one by the U.G.C. one by the State Government and one by the Syndicate. The Secretary to Government incharge of Higher Education or his nominee not below the rank of Deputy Secretary to Government shall be the convenor of the Search Committee.

The State Government shall appoint one of the members as Chairman of the Committee."

Clause 14(4): "That the Search Committee shall submit to the State Government a panel of the three persons who are eminent academicians, in the alphabetical order and the State Government shall forward the panel to the Chancellor who shall keeping in view of merit, equity and social justice and with the concurrence of State Government appoint one person from the panel as Vice-Chancellor.

Provided that the Chancellor may with the concurrence of the State Government call for the second panel if they consider it necessary and the Search Committee shall submit a second panel, which is final".

Clause 14(6): "That the Vice Chancellor shall, subject to the pleasure of the Chancellor and the provisions of Sub-Section (5) hold the office for a period of four years. He shall not be eligible for re-appointment for a second term."

ಪ್ರಸ್ತಾವ ಮಂಡಿಸಲ್ಪಟ್ಟಿತು.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ:

Clause 14(2): "That the State Government shall constitute a Search Committee consisting of four persons of whom one shall be nominated by the Chancellor, one by the U.G.C. one by the State Government and one by the Syndicate. The Secretary to Government incharge of Higher Education or his nominee not below the rank of Deputy Secretary to Government shall be the convenor of the Search Committee.

The State Government shall appoint one of the members as Chairman of the committee."

Clause 14(4): "That the Search Committee shall submit to the State Government a panel of the three persons who are eminent academicians, in the alphabetical order and the State Government' shall forward the panel to the Chancellor who shall keeping in view of merit, equity and social justice and with the concurrence of State Government appoint one person from the panel as Vice-Chancellor.

Provided that the Chancellor may with the concurrence of the State Government call for the second panel if they consider it necessary and the Search Committee shall submit a second panel, which is final."

Clause 14(6):"That the Vice Chancellor shall, subject of the pleasure of the Chancellor and the provisions of Sub-Section (5) hold the office for a period of four years. He shall not be eligible for re-appointment for a second term."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ೧೪ ತಿದ್ದುಪಡಿಯಾದ ರೀತಿಯಲ್ಲಿ:

ಅಧ್ಯಕ್ಷರು: ಪ್ರಸ್ತಾವ ಏನೆಂದರೆ: ತಿದ್ದುಪಡಿಯಾದ ರೀತಿಯಲ್ಲಿರುವ ಖಂಡ ೧೪ ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಹಾಗೂ ಖಂಡ ೧೪ ತಿದ್ದುಪಡಿಯಾದ ರೂಪದಲ್ಲಿ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು.

ಖಂಡ ೧೫ ರಿಂದ ೧೬:

ಅಧ್ಯಕ್ಷರು: ಪ್ರಸ್ತಾವ ಏನೆಂದರೆ: ''ಖಂಡ ೧೫ರಿಂದ ೧೬ರವರೆಗಿನ ಖಂಡಗಳು, ಎರಡೂ ಸೇರಿದಂತೆ, ವಿಧೇಯಕದ ಅಂಗವಾಗಿರುತ್ತದೆ''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಹಾಗೂ ಖಂಡ ೧೫ ರಿಂದ ೧೬, ಎರಡೂ ಸೇರಿದಂತೆ, ವಿಧೇಯಕಕ್ಕೆ ಸೇರಿಸಲ್ಪಟ್ಟಿತು

ಖಂಡ ೧೭ಕ್ಕೆ ತಿದ್ದುಪಡಿ:

ಡಾ: ಜಿ.ಪರಮೇಶ್ವರ್ (ಉನ್ನತ ಶಿಕ್ಷಣ ಸಚಿವರು): ಮಾನ್ಯ ಅಧ್ಯಕ್ಷರೆ, ಖಂಡ ೧೭ಕ್ಕೆ ನಾನು ಈ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತೇನೆ.

"That in Clause 17(1) the following proviso shall be deleted. Provided that where no person is available then the Registrar shall be appointed by the Vice-Chancellor with the approval of the Syndicate from out of the panel of not less than three persons recommended by the Vice-Chancellor to the Syndicate. If no person in the panel is approved by the Syndicate within the time prescribed by the statute, the Chancellor may in consultation with the Vice-Chancellor appoint any one among them to the Registrar. The emoluments, terms and conditions of the Registrar when so appointed shall be as may be determined by the Chancellor".

ಪ್ರಸ್ತಾವ ಮಂಡಿಸಲಾಯಿತು.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ:

"That in Clause 17(1) The following proviso shall be

deleted. Provided that where no person is available then the Registrar shall be appointed by the Vice-Chancellor with the approval of the Syndicate from out of the panel of not less than three persons recommended by the Vice-Chancellor to the Syndicate. If no person in the panel is approved by the Syndicate within the time prescribed by the statute, the Chancellor may in consultation with the Vice-Chancellor appoint any one among them to the Registrar. The emoluments, terms and conditions of the Registrar when so appointed shall be as may be determined by the Chancellor."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ೧೭ ತಿದ್ದುಪಡಿಯಾದ ರೀತಿಯಲ್ಲಿ:

ಅಧ್ಯಕ್ಷರು: ಪ್ರಸ್ತಾವ ಏನೆಂದರೆ ''ತಿದ್ದುಪಡಿಯಾದ ಖಂಡ ೧೭ ಈ ವಿಧೇಯಕದ ಅಂಗವಾಗಿರುತ್ತದೆ''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಹಾಗೂ ಖಂಡ ೧೭ ತಿದ್ದುಪಡಿಯಾದ ರೀತಿಯಲ್ಲಿ ವಿಧೇಯಕಕ್ಕೆ ಸೇರಿಸಲ್ಪಟ್ಟಿತು.

ಖಂಡ ೧೮ ರಿಂದ ೨೬:

ಅಧ್ಯಕ್ಷರು: ಪ್ರಸ್ತಾವ ಏನೆಂದರೆ: ''ಖಂಡ ೧೮ರಿಂದ ೨೬ರವರೆಗೆ, ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಹಾಗೂ ಖಂಡ ೧೮ ರಿಂದ ೨೬ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು.

ಖಂಡ: ೨೭:

ಡಾ: ಜಿ.ಪರಮೇಶ್ವರ್ (ಉನ್ನತ ಶಿಕ್ಷಣಸಚಿವರು): ನಾನು ಖಂಡ ೨೭ನ್ನು ಮಂಡಿಸದೇ ಇರುವುದಕ್ಕೆ ಅನುಮತಿ ನೀಡುವುದು.

(Clause 27 by leave withdrawn)

ಖಂಡ: ೨೮ಕ್ಕೆ ತಿದ್ದುಪಡಿ:

ಡಾ: ಜಿ. ಪರಮೇಶ್ವರ್ (ಉನ್ನತ ಶಿಕ್ಷಣ ಸಚಿವರು): ಮಾನ್ಯ ಅಧ್ಯಕ್ಷರೆ, ಖಂಡ ೨೮ಕ್ಕೆ ನಾನು ಈ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತೇನೆ.

"That in Clause 28(1) The following Sub-clause(e) shall be omitted. (e) Two members nominated by the Chancellor from among the eminent educationists or persons from Commerce, Banking, Industry or other Professions."

ಪ್ರಸ್ತಾವ ಮಂಡಿಸಲ್ಪಟ್ಟಿತು

ಅಧ್ಯಕ್ಷರು: ಪ್ರಸ್ತಾವ ಏನೆಂದರೆ:

"That in Clause 28(1) The following Sub-Clause (e) shall be omitted.

(e) Two members nominated by the Chancellor from among the eminent educationists or persons from Commerce, Banking, Industry or other professions."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ೨೮ ತಿದ್ದುಪಡಿಯಾದ ರೀತಿಯಲ್ಲಿ:

ಅಧ್ಯಕ್ಷರು: ಪ್ರಸ್ತಾವ ಏನೆಂದರೆ: ''ತಿದ್ದುಪಡಿಯಾದ ಖಂಡ ೨೮ ಈ ವಿಧೇಯಕದ ಅಂಗವಾಗಿರುತ್ತದೆ''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಹಾಗೂ ತಿದ್ದುಪಡಿಯಾದ ಖಂಡ ೨೮ ವಿಧೇಯಕಕ್ಕೆ ಸೇರಿಸಲ್ಪಟ್ಟಿತು.

ಖಂಡ ೨೯:

ಅಧ್ಯಕ್ಷರು: ಪ್ರಸ್ತಾವ ಏನೆಂದರೆ, ''ಖಂಡ ೨೯ ಈ ವಿಧೇಯಕದ ಅಂಗವಾಗಿರುತ್ತದೆ''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಹಾಗೂ ಖಂಡ ೨೯ನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು

ಖಂಡ ೩೦ಕ್ಕೆ ತಿದ್ದುಪಡಿ:

ಡಾ: ಜಿ.ಪರಮೇಶ್ವರ್ (ಉನ್ನತ ಶಿಕ್ಷಣ ಸಚಿವರು): ಮಾನ್ಯ ಅಧ್ಯಕ್ಷರೆ, ಖಂಡ ೩೦ಕ್ಕೆ ನಾನು ಈ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತೇನೆ.

"Clause 30(1) (vi): "That Ten Principals of affiliated colleges nominated by the Vice-Chancellor for a term of two years by rotation in the order of Seniority".

Clause 30(1) (viii): "That Five Professors of the Department of the University nominated by the Vice-Chancellor, by rotation in order of seniority each for a term of two years."

Clause 30(1) (ix): "That Five Deans of the Faculties nominated by the Vice-Chancellor by rotation in the order of seniority each for a term of two years."

Clause 30(1) (x): "That Six students to be nominated by the Vice-Chancellor for a period of two years of whom one shall be student of a Degree Course, one of a Post-Graduate Course, one a student of a Professional course, one a Candidate of National Cadet Corps, one a Candidate of National Social Service, one sports candidate on the basis of merit and of the so atleast one shall be women and one a Research Student."

ಪ್ರಸ್ತಾವ ಮಂಡಿಸಲ್ಪಟ್ಟಿತು

ಅಧ್ಯಕ್ಷರು: ಪ್ರಸ್ತಾವ ಏನೆಂದರೆ,

"Clause 30(1) (vi): "That Ten Principals of affiliated colleges nominated by the Vice-Chancellor for a term of two years by rotation in the order of Seniority".

Clause 30(1) (viii): "That Five Professors of the

Department of the University nominated by the Vice-Chancellor, by rotation in order of seniority each for a term of two years."

Clause 30(1) (ix): "That Five Deans of the Faculties nominated by the Vice-Chancellor by rotation in the order of seniority each for a term of two years."

Clause 30(1) (x): "That Six students to be nominated by the Vice-Chancellor for a period of two years of whom one shall be student of a Degree Course, one of a Post-Graduate Course, one a student of a Professional course, one a Candidate of National Cadet Corps, one a Candidate of National Social Service, one sports candidate on the basis of merit and of the so atleast one shall be women and one a Research Student."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ೩೦ ತಿದ್ದುಪಡಿಯಾದ ರೀತಿಯಲ್ಲಿ:

ಅಧ್ಯಕ್ಷರು: ಪ್ರಸ್ತಾವ ಏನೆಂದರೆ: ''ತಿದ್ದುಪಡಿಯಾದ ಖಂಡ ೩೦ ವಿಧೇಯಕದ ಅಂಗವಾಗಿರುತ್ತದೆ''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಹಾಗೂ ತಿದ್ದುಪಡಿಯಾದ ಖಂಡ ೩೦ ವಿಧೇಯಕಕ್ಕೆ ಸೇರಿಸಲ್ಪಟ್ಟಿತು

ಖಂಡ ೩೧ ರಿಂದ ೫೮:

ಅಧ್ಯಕ್ಷರು: ''ಖಂಡ ೩೧ ರಿಂದ ೫೮ರವರೆಗೆ, ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಹಾಗೂ ಖಂಡ ೩೧ ರಿಂದ ೫೮ವರೆಗೆ, ಎರಡೂ ಸೇರಿದಂತೆ, ವಿಧೇಯಕಕ್ಕೆ ಸೇರಿಸಲ್ಪಟ್ಟಿತು

ಖಂಡ ೫೯ಕ್ಕೆ ತಿದ್ದುಪಡಿ:

ಡಾ: ಜಿ.ಪರಮೇಶ್ವರ್ (ಉನ್ನತ ಶಿಕ್ಷಣ ಸಚಿವರು): ಮಾನ್ಯ ಅಧ್ಯಕ್ಷರೆ, ಖಂಡ ೫೯ಕ್ಕೆ ನಾನು ಈ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತೇನೆ.

"That in Clause 59(6): The following proviso be inserted below sub-clause (6):

Provided that in the Local Inquiry Committee one of the member shall belong to Scheduled Caste or Scheduled Tribe."

ಪ್ರಸ್ತಾವ ಮಂಡಿಸಲ್ಪಟ್ಟಿತು

ಅಧ್ಯಕ್ಷರು: ಪ್ರಸ್ತಾವ ಏನೆಂದರೆ:

"That in Clause 59(6): The following proviso be inserted below sub-clause (6):

Provided that in the Local Inquiry Committee one of the member shall belong to Scheduled Caste or Scheduled Tribe."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ೫೯ ತಿದ್ದುಪಡಿಯಾದ ರೀತಿಯಲ್ಲಿ:

ಅಧ್ಯಕ್ಷರು: ಪ್ರಸ್ತಾವ ಏನೆಂದರೆ, ''ತಿದ್ದುಪಡಿಯಾದ ಖಂಡ ೫೯ ಈ ವಿಧೇಯಕದ ಅಂಗವಾಗಿರುತ್ತದೆ''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಹಾಗೂ ತಿದ್ದುಪಡಿಯಾದ ಖಂಡ ೫೯ ವಿಧೇಯಕಕ್ಕೆ ಸೇರಿಸಲ್ಪಟ್ಟಿತು

ಖಂಡ ೬೦ ರಿಂದ ೮೬.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ: ''ಖಂಡ ೬೦ ರಿಂದ ೮೬ರವರೆಗೆ, ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಹಾಗೂ ಖಂಡ ೬೦ ರಿಂದ ೮೬ರವರೆಗೆ, ಎರಡೂ ಸೇರಿದಂತೆ, ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು.

ಖಂಡ ೧ ಇತ್ಯಾದಿ:

ಅಧ್ಯಕ್ಷರು: ಪ್ರಸ್ತಾವ ಏನೆಂದರೆ: ''ಮೊದಲನೆ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಪ್ರಸ್ತಾವದ ಅಂಗೀಕಾರ

ಡಾ: ಜಿ. ಪರಮೇಶ್ವರ್ (ಉನ್ನತ ಶಿಕ್ಷಣ ಸಚಿವರು): ಮಾನ್ಯ ಅಧ್ಯಕ್ಷರೆ, ''ಜಂಟಿ ಸಲಹಾ ಸಮಿತಿಯಿಂದ ಮಾರ್ಪಡಿಸಲಾದಂತೆ ೨೦೦೦ನೇ ಸಾಲಿನ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ವಿಧೇಯಕವನ್ನು ತಿದ್ದುಪಡಿಗಳೊಂದಿಗೆ ಅಂಗೀಕರಿಸಬೇಕೆಂದು ಕೋರುತ್ತೇನೆ.''

ಅಧ್ಯಕ್ಷರು: ಪ್ರಸ್ತಾವ ಏನೆಂದರೆ:

''ಜಂಟಿ ಸಲಹಾ ಸಮಿತಿಯಿಂದ ಮಾರ್ಪಡಿಸಲಾದಂತೆ ೨೦೦೦ನೇ ಸಾಲಿನ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ವಿಧೇಯಕವನ್ನು ತಿದ್ದುಪಡಿಗಳೊಂದಿಗೆ ಅಂಗೀಕರಿಸುತ್ತದೆ''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಅವಿರೋಧವಾಗಿ ಒಪ್ಪಿಗೆ ನೀಡಲಾಯಿತು

ಅಧ್ಯಕ್ಷರು: ಮಾನ್ಯ ಸದಸ್ಯರೆಲ್ಲರೂ ಇಷ್ಟು ಹೊತ್ತಿನವರೆಗೆ ಸದನದಲ್ಲಿದ್ದು ಸಹಕರಿಸಿದ್ದಕ್ಕಾಗಿ ತಮಗೆಲ್ಲರಿಗೂ ವಂದನೆಗಳು. ಈಗ ಸದನವನ್ನು ಮುಂದೂಡುತ್ತಿದ್ದೇವೆ. ನಾಳೆ ಬೆಳಿಗ್ಗೆ ೧೦.೦೦ ಗಂಟೆಗೆ ಸದನ ಸಮಾವೇಶಗೊಳ್ಳುತ್ತದೆ.

(ಸದನವು ರಾತ್ರಿ ೯ ಗಂಟೆ ೧೮ ನಿಮಿಷಕ್ಕೆ ಮುಂದೂಡಲ್ಪಟ್ಟು ಮತ್ತೆ ನಾಳೆ ಬೆಳಿಗ್ಗೆ ಅಂದರೆ ದಿನಾಂಕ ೪-೮-೨೦೦೧ರಂದು ಬೆಳಿಗ್ಗೆ ೧೦.೦೦ ಗಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಭಾಷಣ ಅಥವ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)